ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 6

ಜುಲೈ 8, 2007

ರೂ. 5/-

'ಮುಂಗಾರುಮಳೆ'ಯಲ್ಲಿ ಬೀಜದ ಬೆನ್ನತ್ತಿ



ಸೇತುಸಮುದ್ರಂ



ಏನಿದರ ಹುನ್ನಾರ?




ಪೇಜ್ 5

ದಕ್ಷಿಣ ಕನ್ನಡ ಕಳಂಕಿತ ಖಾಕಿಯ ನಿರ್ಗಮನ

ಪೇಜ್ 3

ನಕ್ಸಲ್‌ವಾದ: ಅಪಾಯ ಅರಿವ ಮತ್ತೊಂದು ಸಂದರ್ಭ





ಸತ್ವವಿಲ್ಲದ 'ಸತ್ಯವಾನ್ ಸಾವಿತ್ರಿ'



ಹಚ್ಚಬ್ಯಾಡವ್ವ... ಜೀತಕ್ಕನನ್ನನ್ನ

ಭಾರತದಲ್ಲಿ ಬಾಲಕಾರ್ಮಿಕರು

'ಹಚ್ಚಬ್ಯಾಡ, ಹಚ್ಚಬ್ಯಾಡವ್ವ ಜೀತಕ್ಕ ನನ್ನನ್ನ ಎಳೆ ಬಾಳೆ ಸುಳಿ ನಾನವ್ವ ಅವ್ವ, ಎಳೆ ಬಾಳೆ ಸುಳಿ ನಾನವ್ವ'

ಎಂಬ ಹಾಡು ಬಾಲ ಕಾರ್ಮಿಕರು ಅನುಭವಿಸುವ ನೋವಿನ ಒಂದು ಧ್ವನಿ. ಜೊತೆಯ ಮಕ್ಕಳೊಂದಿಗೆ ಕುಣಿದು ಕುಪ್ಪಳಿಸಿ ನಲಿಯ ಬೇಕಾದ ಶಾಲೆಗೆ ಹೋಗಿ ಕಲಿಯಬೇಕಾದ ಈ ಮುಗ್ಧ ವಯಸ್ಸಿನ.... ಮಕ್ಕಳು ಭಾರತದಲ್ಲಿ ಕಾರ್ಮಿಕರಾಗಿ ಗಣಿ, ಕಾರ್ಖಾನೆ, ಕ್ವಾರಿ, ಕೊಟ್ಟಿಗೆ, ಹೋಟೇಲು, ಹೊಲ ಗದ್ದೆಗಳಲ್ಲಿ ದುಡಿದು ದುಡಿದು ಹೈರಾಣಾಗುತ್ತಿದ್ದಾರೆ.

ಅಂಕಿ ಅಂಶಗಳು

ಭಾರತದಲ್ಲಿ ಬಾಲ ಕಾರ್ಮಿಕರ ಸಂಖ್ಯೆ 1.7 ಕೋಟಿ. ಇದು ಜ,|ತ್ತಿನಲ್ಲಿಯೇ ಅತಿ ಹೆಚ್ಚಿನ ಸಂಖ್ಯೆ.ಇವರಲ್ಲಿ 60 ಲಕ್ಷ ಬಾಲಕರು ಮತ್ತು 1.1ಕೋಟಿ ಬಾಲಕಿಯರು. ಇವರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಮಕ್ಕಳು(ಶೇ.54) ಕೃಷಿ ಕೆಲಸಗಳಲ್ಲಿ ದುಡಿಯುತ್ತಿದ್ದಾರೆ. ಇತರರು ಕಟ್ಟಡ ಕೆಲಸ(ಶೇ.15.5), ಮನೆಕೆಲಸ(ಶೇ.18), ಉತ್ಪಾದನೆ (ಶೇ.5) ಮತ್ತು ಇತರ ಕ್ಷೇತ್ರಗಳಲ್ಲಿ (ಶೇ.8) ದುಡಿಯುತ್ತಿದ್ದಾರೆ. ಹೀಗೆ ದುಡಿಯುತ್ತಿರುವ ಬಾಲ ಕಾರ್ಮಿಕರ ಸಂಖ್ಯೆ 5 ರಿಂದ 14 ವಯೋ ಗುಂಪಿನ ಒಟ್ಟು ಮಕ್ಕಳ ಶೇ.6.75 ರಷ್ಟಾಗುತ್ತದೆ.

ವಿಪರ್ಯಾಸ ನೋಡಿ, ಈ ದೇಶದಲ್ಲಿ ದುಡಿಯುವ ವಯಸ್ಸಿನ 17 ಕೋಟಿ ಯುವಕ ಯುವತಿಯರಿಗೆ ಕೆಲಸವಿಲ್ಲ. 1.7 ಕೋಟಿ ಮಕ್ಕಳಿಗೆ ಇಲ್ಲಿ ಬಾಲ್ಯವೇ ಇಲ್ಲ.

ಕೆ.ಆರ್.ನಾಯಕ್ ಇನ್ನಿಲ್ಲ

ತುಮಕೂರು ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಗೆ ದೊಡ್ಡ ಕೊಡುಗೆ ನೀಡಿದ್ದ ಹಿರಿಯ ಸಂಗಾತಿ ಕೆ.ಆರ್. ನಾಯಕ್‌ರವರು ನಿಧನರಾಗಿದ್ದಾರೆ. ಅವರು ಜೂನ್ 27 ರಂದು ಹೃದಯಾಘಾತದಿಂದ ನಿಧನರಾದರು.

ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಕೆ.ಆರ್. ನಾಯಕ್ ಅವರಿಗೆ 78 ವರ್ಷ ವಯಸ್ಸಾಗಿತ್ತು. ತುಮಕೂರು ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷವನ್ನು ಬೆಳೆಸುವಲ್ಲಿ ನಾಯಕರು ಬಹು ಮುಖ್ಯ ಪಾತ್ರವನ್ನು ವಹಿಸಿದ್ದರು. ಕಾರ್ಮಿಕ ಮುಖಂಡರಾಗಿಯೂ ಕೆ.ಆರ್. ನಾಯಕರು ಜನಪ್ರಿಯರಾಗಿದ್ದರು.

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿದ್ದ ಕೆ.ಆರ್.ನಾಯಕರ ನಿಧನಕ್ಕೆ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ, ತುಮಕೂರು ಜಿಲ್ಲಾ ಸಮಿತಿಗಳು ಸಂತಾಪ ವ್ಯಕ್ತಪಡಿಸಿದೆ. ಜೂನ್ 28 ರಂದು ನಡೆದ ಅಂತಿಮ ಸಂಸ್ಕಾರದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ತುಮಕೂರು ಕಾರ್ಯದರ್ಶಿ ಸೈಯದ್ ಮುಜೀಬ್ ಮುಂತಾದವರು ಪಾಲ್ಗೊಂಡು ಕುಟುಂಬದ ಸದಸ್ಯರಿಗೆ ಸಾಂತ್ವಾನ ಹೇಳಿದರು.

ಇದ್ದದ್ದು ಇದ್ದಾಂಗೆ....

'ತಮ್ಮ ಖಾಸಗಿ ಲೆಕ್ಕ ಪರಿಶೋಧಕರು ಅಪಘಾತವೊಂದರಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಹೊರತಾಗಿ ಬೇರೊಬ್ಬರು ತಮ್ಮ ಆದಾಯದ ಮಾಹಿತಿಯನ್ನು ಸಮರ್ಪಕವಾಗಿ ಒದಗಿಸುವುದು ಅಸಾಧ್ಯ. ಈ ಹಿನ್ನೆಲೆಯಲ್ಲಿ ಆಸ್ತಿ ವಿವರ ಸಲ್ಲಿಸಲು ಕನಿಷ್ಠ ಒಂದು ತಿಂಗಳ ಕಾಲಾವಕಾಶ ನೀಡಬೇಕು'

ಮುಖ್ಯಮಂತ್ರಿ **ಎಚ್.ಡಿ. ಕುಮಾರಸ್ವಾಮಿ**

'ಕಾನೂನಿನಲ್ಲಿ ಇಲ್ಲದ ಅವಕಾಶಗಳನ್ನು ಸೃಷ್ಟಿಸುವುದು ಸಾಧ್ಯವೇ'

ಲೋಕಾಯುಕ್ತ **ಎನ್.ಸಂತೋಷ್ ಹೆಗ್ಡೆ**

★

'ನಮ್ಮ ನಾಡಿನ ಸಾರ್ವಜನಿಕ ವಲಯದಲ್ಲೇ ನಡೆದಿರುವ, ನಡೆಯುತ್ತಿರುವ ಮಹಾನ್ ಜನಪರ ಹೋರಾಟಗಳ ಆಶಯಗಳು ನಕ್ಸಲ್ ಚಳುವಳಿ ಅವಿಷ್ಕಾರ ಮಾಡಿದ ಆಶಯಗಳಲ್ಲ. ಆದ್ದರಿಂದ ಆ ಆಶಯಗಳಿಗಾಗಿ ಅಪ್ರಸ್ತುತವಾದ ನಕ್ಸಲ್ ವಾದದಿಂದಾಗಿ ನಮ್ಮ ಜೀವಂತ ಜನಪರ ಚಳುವಳಿಗಳ ಬಗೆಗೆ ಚರ್ಚೆ ನಡೆಯುವುದಿಲ್ಲ.

ಆದ್ದರಿಂದಲೇ ನಾವು ಹೇಳಲೇಬೇಕಾಗಿದೆ. ನಕ್ಸಲ್ ವಾದ ಅನಿವಾರ್ಯವೂ ಅಲ್ಲ; ಅವಶ್ಯಕವೂ ಅಲ್ಲ. ಈ ನೆಲದ ಬಹುದೊಡ್ಡ ಚಳುವಳಿಗಳಾದ ರೈತ, ದಲಿತ ಚಳುವಳಿಗಳು, ಕಾರ್ಮಿಕ ಹೋರಾಟಗಳು ಜಾಗತೀಕರಣದ ವಿರುದ್ಧ ನಾವು ನಡೆಸಬೇಕಾದ ಮಹಾ ಹೋರಾಟಕ್ಕೆ ಸನ್ನದ್ಧವಾಗಬಲ್ಲ ಸಾಧ್ಯತೆಗಳನ್ನು ಹೊಂದಿವೆ.'

- ಡಾ. ರಾಜೇಂದ್ರ ಚೆನ್ನಿ

★

'ಅಲಿಪ್ತ ಚಳವಳಿ' (ನ್ಯಾಮ್) ಈಗ ಅಪ್ರಸ್ತುತವಾಗಿದೆ. ಭಾರತ ಹಳೆ ಕಾಲದವರಂತೆ ಯೋಚಿಸುವ ಮನೋಭಾವ ತೊರೆದು ಬದಲಾದ ಕಾಲದೊಂದಿಗೆ ಹೆಜ್ಜೆ ಹಾಕಬೇಕು ಅಮೇರಿಕಾದೊಂದಿಗೆ ಕೈ ಜೋಡಿಸಬೇಕು.'

- ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ **ಕಂಡೊಲಿಸಾ ರೈಸ್**

'ನಮ್ಮ ವಿದೇಶಾಂಗ ನೀತಿ ಹೇಗಿರಬೇಕು ಎಂದು ಅಮೇರಿಕಾ ಉಪನ್ಯಾಸ ನೀಡಬೇಕಿಲ್ಲ.'

- ಸಿಪಿಐ(ಎಂ)

ಚುಚ್ಚುಮದ್ದು

'ಅಂತರರಾಷ್ಟ್ರೀಯ ವ್ಯವಸ್ಥೆಯನ್ನು ಪ್ರಜಾಸತ್ತಾತ್ಮಕವಾಗಿಸಲು ಇಂದಿಗೂ ಅಲಿಪ್ತ ನೀತಿಯ ಅಗತ್ಯವಿದೆ ಹಾಗೂ ಅಲಿಪ್ತ ಒಕ್ಕೂಟದ ಸಂಸ್ಥಾಪಕ ಸದಸ್ಯನಾಗಿರುವ ಭಾರತ ತನ್ನ ಸಿದ್ಧಾಂತಕ್ಕೆ ಬದ್ಧವಾಗಿದೆ.'

ವಿದೇಶಾಂಗ ಸಚಿವ **ಪ್ರಣಬ್ ಮುಖರ್ಜಿ**

➤ **'ಓಹೋ ಅಲಿಪ್ತ ನೀತಿಯ ನೆನಪಿದೆಯೇ ಇನ್ನೂ ಕಾಂಗ್ರೆಸ್‌ಗೆ'**

★

ಬಡ ದೇವಾಲಯಗಳಿಗೆ ದಲಿತ ಪೂಜಾರಿಗಳೇ?

'ಧಾರ್ಮಿಕ ದತ್ತಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ದಲಿತ ಪೂಜಾರಿಗಳನ್ನು ನೇಮಿಸಲು ಹಾಗೂ ಶ್ರೀಮಂತ ದೇವಸ್ಥಾನಗಳಿಂದ ಆರ್ಥಿಕವಾಗಿ ಸಬಲವಲ್ಲದ ದೇವಾಲಯಗಳ ದತ್ತು ಸ್ವೀಕಾರಕ್ಕೆ ಅವಕಾಶ ಕಲ್ಪಿಸಲಾಗುತ್ತದೆ... ದಲಿತ ಬಾಲಕರಿಗೆ ಕೆಲವು ಮಠಗಳಲ್ಲಿ ವೇದ ಹಾಗೂ ಪೂಜಾ ವಿಧಿಗಳನ್ನು ಬೋಧಿಸಲಾಗುತ್ತಿದೆ. ಯಾವ ದೇವಾಲಯಗಳಲ್ಲಿ ಅರ್ಚಕರಿಲ್ಲವೋ ಅಲ್ಲಿ ಇವರನ್ನು ನೇಮಿಸುತ್ತೇವೆ.

- ನಾಗರಾಜಶೆಟ್ಟಿ, ಮುಜರಾಯಿ ಇಲಾಖೆ ಸಚಿವರು

➤ **ಅಂದರೇನು... ಯಾರಿಗೂ ಬೇಡವಾದ ಖಾಲಿ ಬಿದ್ದ ದೇವಾಲಯಗಳಿಗೆ ದಲಿತ ಪೂಜಾರಿಗಳು, ಶ್ರೀಮಂತ ದೇವಾಲಯಗಳು ಅದೇ ಹಾರುವವರಿಗೆ ಮೀಸಲು ಎಂಬುದಲ್ಲವೇ ಇದರ ಅರ್ಥ. ಒಟ್ಟು ದಲಿತರಿಗೆ ತಾರತಮ್ಯ ಅಂತೂ ತಪ್ಪಿದ್ದಲ್ಲ.**

★

'ರೈತರು ಆತ್ಮಹತ್ಯೆ ಮಾಡಿಕೊಳ್ಳಲಿ ಬಿಡಿ'

"ರಾಜ್ಯ ಸರ್ಕಾರ ರೈತರ ಪರವಾಗಿ ಇಷ್ಟೆಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದರೆ ಮಾಡಿಕೊಳ್ಳಲಿ ಬಿಡಿ"

➤ **ಮಗ ರೈತರ ಮನೆಯಲ್ಲಿ ಉಂಡು, ಮಲಗಿ ಬಂದು ಬಿಟ್ಟರೆ ಸಮಸ್ಯೆ ಬಗೆ ಹರಿಯುತ್ತದೆ ಎಂದು ತಿಳಿದಿದ್ದಾರೋ ಹೇಗೆ ಮಾಜಿ ಪ್ರಧಾನಿಗಳು.**

ಹೀಗೊಂದು ಪ್ರಶ್ನೋತ್ತರ



ಕರ್ನಾಟಕ ಕ್ರಿಕೆಟ್ ಪಟು ದೊಡ್ಡ ಗಣೇಶ್ ದೇವೇಗೌಡರ ಸಮ್ಮುಖದಲ್ಲಿ ಜೆಡಿ(ಎಸ್) ಪಕ್ಷ ಸೇರಿದರು. ಅಲ್ಲಿ ನಡೆದ ಪ್ರಶ್ನೋತ್ತರ

ದೊಡ್ಡ ಗಣೇಶ್: ದೊಡ್ಡ ಗಣೇಶ ನನ್ನ ಆತ್ಮೀಯ ಸ್ನೇಹಿತ, ಆತ ಚುನಾವಣೆಗೆ ನಿಂತರೆ ನಾನು 10 ಕೋಟಿ ಕೊಡುತ್ತೇನೆ ಎಂದು ಅಜರುದ್ದೀನ್ ಹೇಳಿದ್ದಾರೆ.

ಪತ್ರಕರ್ತರು: ಆ ಹಣವನ್ನು ಏನು ಮಾಡುತ್ತೀರಿ ಜನರಿಗೆ ಹಂಚುತ್ತೀರಾ?

ದೊಡ್ಡ ಗಣೇಶ್: ಹಣ ಕೊಡುವುದು ನನಗೋಸ್ಕರ. ಅದನ್ನು ಜನರಿಗೇಕೆ ಹಂಚಲಿ?

ದುಡಿವ ಜನರ ಪ್ರೀತಿಯ ಒಡನಾಡಿ ಕುಂಜು ಮೋಹನ್ ಇನ್ನಿಲ್ಲ

ಮೈಸೂರು ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಚಳುವಳಿಯ ಆರಂಭಿಕ ದಿನಗಳಲ್ಲಿ ಪೌರ ಕಾರ್ಮಿಕರನ್ನು ಸಂಘಟಿಸಿ ಹಲವಾರು ಹೋರಾಟಗಳಿಗೆ ನೇತೃತ್ವ ನೀಡಿದ ಹಿರಿಯ ಸಂಗಾತಿ ಕುಂಜುಮೋಹನ್ ಅವರು ಜೂನ್ 30 ರಂದು ಬೆಳಿಗ್ಗೆ ನಿಧನರಾಗಿದ್ದಾರೆ. ಅವರಿಗೆ 90 ವರ್ಷ ವಯಸ್ಸಾಗಿತ್ತು.

ಮೈಸೂರು ಕಮ್ಯುನಿಸ್ಟ್ ಚಳುವಳಿಯ ಮತ್ತೊಬ್ಬ ಹಿರಿಯ ಸಂಗಾತಿ ಕಾಂ:ಎಂ.ಎನ್. ಉಗ್ರಪ್ಪ ಅವರೊಂದಿಗೆ ಕುಂಜುಮೋಹನ್‌ರವರು ಸುದೀರ್ಘಕಾಲ ಚಳುವಳಿಯಲ್ಲಿ ದುಡಿದಿದ್ದರು. ಹಿರಿಯ ಸಂಗಾತಿಯ ನಿಧನಕ್ಕೆ ಸಿಪಿಐ(ಎಂ) ರಾಜ್ಯ ಸಮಿತಿ ಮತ್ತು ಮೈಸೂರು ಜಿಲ್ಲಾ ಸಮಿತಿ ಶ್ರದ್ಧಾಂಜಲಿ ಸಲ್ಲಿಸಿದೆ.

ಜನಶಕ್ತಿ ಚಂದಾದಾರರಾಗಿ
ವಾರ್ಷಿಕ ರೂ.250
ಅರ್ಧವಾರ್ಷಿಕ ರೂ.125

ಜನದನಿ



ಮಾಧ್ಯಮಗಳ ಕುರಿತ ಖ್ಯಾತೆ ತುಂಬಾ ಚೆನ್ನಾಗಿತ್ತು. ಹೊಟ್ಟೆ ಹುಣ್ಣಾಗುವಂತೆ ನಕ್ಕೆವು

- ಸುನೀಲ್ ಶೆಟ್ಟಿ, ಮಂಗಳೂರು

ವಿಶ್ವ ದಾಖಲೆಯ ಎಡರಂಗ ಸರ್ಕಾರಕ್ಕೆ ನನ್ನ ಅಭಿನಂದನೆಗಳು, ಲಾಲ್ ಸಲಾಂ, ಬಂಗಾಳದ ಸಂಗಾತಿಗಳೇ,

- ರಮಣ, ಕೋಲಾರ

ಕಡಲ ಕೊರೆತ ಮಳೆಗಾಲ ಬಂದಾಗ ಭಾರೀ ಚರ್ಚೆಯಾಗಿ, ನಂತರ ಅಬ್ಬರ ಇಳಿದು ಬಿಡುತ್ತೇ, ಹೀಗೇಕೆ? ಜನ ಸುಮ್ಮನಿರಬೇಕೇ?

- ಸುಖಾನಂದ, ಕೋಡಿಬೈಲು

ಮುಸ್ಲಿಂ ಮೂಲಭೂತವಾದಿಗಳ ಬಗೆಗಿನ ಲೇಖನ ನಿಜಕ್ಕೂ ಅರ್ಥಪೂರ್ಣ.

- ನಜೀರ್ ಅಹ್ಮದ್, ಹುಮ್ನಾಬಾದ್

ಕರ್ನಾಟಕದ ಸಕ್ಕರೆಯ ಕಣಜ ಎಂದೇ ಖ್ಯಾತವಾಗಿದ್ದ ನಾಡಿನಲ್ಲಿ ರೈತ ಆತ್ಮಹತ್ಯೆ ಮಾಡಿಕೊಳ್ಳುವ ಕಡೆಗೂ ಪರಿಸ್ಥಿತಿ ಹೋಗಿದೆ ಯೆಂದರೆ ಸರ್ಕಾರದ ನಿರ್ಲಕ್ಷ್ಯ ಎಷ್ಟಿರಬೇಕು

- ಗೋವಿಂದರಾಜು, ಮದ್ದೂರು

12 ಸಾವಿರ ಎಕರೆ ಯಾಕೆಂದು ಹೇಳದ ಸರ್ಕಾರದ ಉದ್ದೇಶವೇ ಮೋಸದ ಲೆಕ್ಕಾಚಾರವನ್ನು ಬಯಲು ಮಾಡುತ್ತದೆ.

ನಾವು ಅಭಿವೃದ್ಧಿಗೆ ವಿರೋಧಿಗಳಲ್ಲ ಆದರೆ ಭೂ ಮಾಫಿಯಾದ ದಂಧೆಗೆ ವಿರೋಧಿಗಳು, ನಾವು ನಿರಾಶ್ರಿತರಾಗಲು ಬಯಸುವುದಿಲ್ಲ'

- ಶ್ರೀನಿವಾಸಚಾರಿ, ನಂದಗುಡಿ

ಸಂಪಾದಕೀಯ

ಎಗ್ಗಿಲ್ಲದ ಅವ್ಯವಹಾರ

ಬೆಂಗಳೂರಿನ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿರುವ ಕೆಲವು ಉದ್ಯಮಿಗಳ ಮನೆ ಮೇಲೆ ಇತ್ತೀಚಿಗೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿ ಪತ್ತೆ ಮಾಡಿರುವ ಪ್ರಕರಣಗಳು ದಿಗ್ಭ್ರಮೆ ಮೂಡಿಸುವಂತಿದೆ. ಯಾವುದೇ ಕಾನೂನು, ಕಟ್ಟಳೆ, ಸಾರ್ವಜನಿಕ ಹಿತಾಸಕ್ತಿಗಳನ್ನು ಕಾಪಾಡುವ ಹೊಣೆಗಾರಿಕೆಯಿಲ್ಲದೇ ಏನೆಲ್ಲಾ ಅಕ್ರಮಗಳನ್ನು ನಡೆಸಲು ಸಿದ್ಧ ಎಂಬುದನ್ನು ಈ ಪ್ರಕರಣಗಳು ಮತ್ತೊಮ್ಮೆ ಸಾಬೀತು ಮಾಡಿವೆ.

ಈ ದಾಳಿಯಲ್ಲಿ ಗುರುತಿಸಿದ ಪ್ರಕರಣವೊಂದರಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ದೇವೇಗೌಡರ ಕುಟುಂಬ ತೊಡಗಿರುವ ವಿಚಾರ ಅತ್ಯಂತ ಸ್ಫೋಟಕವಾಗಿದೆ. ಆದಾಯ ತೆರಿಗೆ ಇಲಾಖೆಯ ಧಾಳಿಗೆ ಸಿಲುಕಿದವರೊಂದಿಗೆ ತಮಗೂ ಸಂಬಂದಿವಿಲ್ಲವೆಂದು ಹಾಲಿ ಸಿ.ಎಂ, ಮಾಜಿ ಸಿ.ಎಂ.ಗಳು ಸ್ಪಷ್ಟಪಡಿಸಿದರಾದರೂ ವಿವರಗಳನ್ನು ಗಮನಿಸಿದರೆ ಹೇಳಿಕೆಯಲ್ಲಿ ಸತ್ಯವಿಲ್ಲವೆಂದು ಗೋಚರವಾಗುತ್ತದೆ. ಸುಮಾರು 40,270 ಚದರ ಅಡಿ ಭೂಮಿಯನ್ನು 4 ಕೋಟಿ 92 ಲಕ್ಷದ 7574 ರೂಪಾಯಿಗಳಿಗೆ ಖರೀದಿಸಿದ್ದು ಗೌಡರ ಕುಟುಂಬದವರೇ ಆಗಿರುವುದು ದಾಖಲೆಗಳು ಬಯಲುಗೊಳಿಸಿವೆ. ಗೌಡರ ಪುತ್ರ ಬಾಲಕೃಷ್ಣೇಗೌಡ, ಅವರ ಪತ್ನಿ ಕವಿತಾ ಅವರ ಮೂವರು ಸೋದರ ಸೋದರಿಯರು ಇದ್ದಾರೆ. ಒಂದೆಡೆ ಇಷ್ಟೊಂದು ಹಣ ಎಲ್ಲಿಂದ ಬಂತು ಎಂಬ ಪ್ರಶ್ನೆ ಏಳುವಾಗಲೇ ಸಾರ್ವಜನಿಕ ಸ್ವತ್ತಾಗಿರುವ ಕೆರೆಯೊಂದನ್ನು ಗುತ್ತಿಗೆ ಪಡೆದು ನಂತರ ಅದನ್ನು ಖರೀದಿಸಿದ್ದು ಗಂಭೀರ ಸ್ವರೂಪದ ಅಕ್ರಮ, ಅವ್ಯವಹಾರಗಳಿಗೆ ಸಾಕ್ಷಿಯಾಗಿದೆ. ಅತ್ಯಂತ ಆಯಕಟ್ಟಿನಲ್ಲಿರುವ ಬೆಳ್ಳಂದೂರು ಕೆರೆಯ 27 ಎಕರೆ ಭೂಮಿಯನ್ನು ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು 2003, 2004ರಲ್ಲಿ ಎರಡು ಹಂತಗಳಲ್ಲಿ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ಗುತ್ತಿಗೆ ಪಡೆಯಲಾಗಿದೆ. ಗುತ್ತಿಗೆ ಪಡೆದ ಕುಪೇಂದ್ರ ರೆಡ್ಡಿಯವರ ಪ್ರೈಮಲ್ ಪ್ರಾಜೆಕ್ಟ್ ಪ್ರೈ.ಲಿ., ಕಂಪನಿಯು ಮಿಲೇನಿಯಾ ಕಂಪನಿಯೊಂದಿಗೆ ಜಂಟಿ ಒಪ್ಪಂದ ಮಾಡಿಕೊಂಡಿದೆ. 2004ರಲ್ಲಿ ಧರಂಸಿಂಗ್‌ರ ಅವಧಿಯಲ್ಲಿ 21 ಎಕರೆಯನ್ನು ಕ.ಕೈ ಅಭಿವೃದ್ಧಿ ಮಂಡಳಿಯಿಂದ ಕುಪೇಂದ್ರ ರೆಡ್ಡಿಯವರಿಗೆ ಮಾರಲಾಗಿದೆ, ನಂತರ ಉಳಿದ 6 ಎಕರೆ ಭೂಮಿಯನ್ನು ತಮಗೆ ಮಾರಲು ಕೋರಿದ್ದಾರೆ. ಇದಕ್ಕೆ 2007 ಜನವರಿ 27ರಂದು ಅಂದರೆ ಅರ್ಜಿ ಹಾಕಿದ 22 ದಿನಗಳಲ್ಲೇ ಮಂಜೂರು ಸಿಕ್ಕಿರುವುದು ಅನುಮಾನ ಹುಟ್ಟಿಸುತ್ತದೆ. ನಂತರ ಈ ಪ್ರದೇಶದಲ್ಲಿ ಕಟ್ಟಲಾದ 40,270 ಚ.ಅ . ಪ್ರದೇಶದಲ್ಲಿನ ಕಟ್ಟಡವನ್ನು ಮುಖ್ಯಮಂತ್ರಿ ಕುಮಾರಸ್ವಾಮಿ ಕುಟುಂಬದವರು (ಕವಿತಾ, ರವೀಂದ್ರ, ಸವಿತಾ, ನಿರ್ಮಲ) ಖರೀದಿಸಿದ್ದಾರೆ.

ಇಲ್ಲಿ ಸಾರ್ವಜನಿಕ ಆಸ್ತಿಯನ್ನು ಖಾಸಗಿ ವ್ಯಕ್ತಿಗಳಿಗೆ ಮಾರಿರುವುದೇ ಗಂಭೀರವಾದ ಅಪರಾಧ. ಮಾತ್ರವಲ್ಲದೇ ಈ ವ್ಯವಹಾರದಲ್ಲಿ ವಿವಿಧ ಇಲಾಖೆಗಳನ್ನು ಅಧಿಕಾರದಲ್ಲಿರುವವರು ದುರ್ಬಳಕೆ ಮಾಡಿಕೊಂಡು ಅಪಾರ ಸಾರ್ವಜನಿಕ ಆಸ್ತಿಯನ್ನು ಕಬಳಿಸಿದ್ದಾರೆ.

ಇಂತಹ ಆಸ್ತಿಯ ದರೋಡೆಯಲ್ಲಿ ಕಾಂಗ್ರೆಸ್, ಜೆಡಿ(ಎಸ್), ಬಿಜೆಪಿ ಪಕ್ಷಗಳ, ಆಳುವ ವರ್ಗಗಳ ಅನೇಕ ಪ್ರಮುಖರು ತೊಡಗಿದ್ದಾರೆ. ಭೂಮಾಫಿಯಾಗಳೇ ಎಲ್ಲೆಡೆ ವಿಜೃಂಬಿಸುತ್ತಿರುವುದು ಈ ಘಟನೆಗಳಿಂದ ಸಾಬೀತಾಗಿದೆ. ಇಂತಹ ಅವ್ಯವಹಾರ ಅಕ್ರಮಣಗಳಿಂದ ರಾಜಧಾನಿಯಲ್ಲಿ ಕ್ರಿಮಿನಲ್ ಅಪರಾಧಗಳು ಕಗ್ಗೊಲೆ, ಕದನಗಳು ನಿತ್ಯದ ಮಾತಾಗುತ್ತಿವೆ. ಭಾರೀ ಅಭಿವೃದ್ಧಿ-ಬೃಹತ್ ಬೆಂಗಳೂರು ನಗರ ವಿಸ್ತರಣೆ ವಿಶೇಷ ಆರ್ಥಿಕ ವಲಯಗಳೆಂಬ ಯೋಜನೆಗಳು ಜನರ ಅಭಿವೃದ್ಧಿ ಎಂಬುದಕ್ಕಿಂತ ಭೂದರೋಡೆ, ದಂಧೆಗಾಗಿಯೇ ಎಂದು ಭಾಸವಾಗುತ್ತದೆ.

ಈಗ ಆದಾಯ ತೆರಿಗೆ ಧಾಳಿಯಲ್ಲಿ ಸಿಕ್ಕಿರುವ ಗೌಡರ ಕುಟುಂಬ ಖರೀದಿಸಿರುವ ಸಾರ್ವಜನಿಕ ಕೆರೆ ಆಸ್ತಿಯನ್ನು ಸರ್ಕಾರ ವಾಪಾಸು ಪಡೆಯಬೇಕು. ಅದನ್ನು ಸಾರ್ವಜನಿಕ ಬಳಕೆಗಾಗಿ ನೀಡಬೇಕು. ಈಗಾಗಲೇ ಶಾಸಕರಾದ ರಾಮಸ್ವಾಮಿ ನೇತೃತ್ವದ ಸದನ ಸಮಿತಿಯು ಅಪಾರ ಪ್ರಮಾಣದಲ್ಲಿ ಸಾರ್ವಜನಿಕ, ಭೂಕಬಳಿಕೆಯಾಗಿರುವುದನ್ನು ಪತ್ತೆ ಹಚ್ಚಿದೆ. ಇದು ನಡೆದ ಭೂಕಬಳಿಕೆಯ ಪ್ರಕರಣಗಳಲ್ಲಿ ಒಂದು ಭಾಗ ಮಾತ್ರವೇ! ಆಗಿದೆ ಎನ್ನುವಾಗ ಭೂ ಕಬಳಿಕೆಯ ದಂಧೆ, ಅದರಲ್ಲಿ ತೊಡಗಿರುವವರ ವ್ಯಾಪ್ತಿ ಅರ್ಥವಾಗುತ್ತದೆ.


ನಕ್ಸಲೀಯ ಸಂಘಟನೆಗಳನ್ನು ಬಿಟ್ಟು ಹೊರಬನ್ನಿ

ರಾಜ್ಯ ಪೋಲೀಸ್ ಇಲಾಖೆ ನಕ್ಸಲೀಯರ ಮತ್ತು ಅವರನ್ನು ಬೆಂಬಲಿಸುವ ವ್ಯಕ್ತಿಗಳ ಹಾಗೂ ಸಂಘಟನೆಗಳ ಪಟ್ಟಿಯೊಂದನ್ನು ಪ್ರಕಟಿಸಿದೆ. ಈ ಪಟ್ಟಿಯಲ್ಲಿ ಹೆಸರಿಸಲ್ಪಟ್ಟವರ ಪೈಕಿ ಪ್ರಜಾತಾಂತ್ರಿಕ ದಾರಿಯಲ್ಲಿ ವಿಶ್ವಾಸವುಳ್ಳವರೆಲ್ಲರೂ ಆ ನಕ್ಸಲೀಯ ಸಂಘಟನೆಗಳನ್ನು ಬಿಟ್ಟು ಹೊರಬರಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ. ನೈಜ ಪ್ರಜಾತಾಂತ್ರಿಕ ಕಾಳಜಿಯುಳ್ಳ ನೂರಾರು ಜನರು ಈಗಾಗಲೇ ಇಂತಹ ಸಂಘಟನೆಗಳಿಂದ ಹೊರ ಬಂದು ನಕ್ಸಲ್‌ವಾದದ ವಿರುದ್ಧ ತಮ್ಮ ನಿಲುಮೆಯನ್ನು ದೃಢವಾಗಿ ಘೋಷಿಸಿದ್ದಾರೆ. ಮಾತ್ರವಲ್ಲ ನಕ್ಸಲ್‌ವಾದದ ವಿರುದ್ಧದ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇದೇ ರೀತಿಯಲ್ಲಿ ಇನ್ನೂ ಇಂತಹ ಸಂಘಟನೆಗಳೊಂದಿಗೆ ಗುರುತಿಸಿಕೊಂಡವರು ಹೊರ ಬಂದು ನಕ್ಸಲ್‌ವಾದದ ವಿರುದ್ಧ ತಮ್ಮ ನಿಲುಮೆಯನ್ನು ಬಹಿರಂಗವಾಗಿ ಸ್ಪಷ್ಟಪಡಿಸಿ ನಕ್ಸಲ್‌ವಾದದ ವಿರುದ್ಧವಾದ ಹೋರಾಟವನ್ನು ಬಲಪಡಿಸಬೇಕಾಗಿದೆ.

ಇದೇ ಸಂದರ್ಭದಲ್ಲಿ, ರಾಜ್ಯದಲ್ಲಿ ಬೆಳೆಯುತ್ತಿರುವ ಕೋಮುವಾದಿ ಶಕ್ತಿಗಳ ವಿರುದ್ಧ ರಾಜಿ ಇಲ್ಲದ ಹೋರಾಟವನ್ನು ನಡೆಸಬೇಕಾಗಿದೆ! ಕೋಮುವಾದ ವಿರೋಧಿ ಹೋರಾಟ ಮಾಡುವವರೆಲ್ಲರೂ ನಕ್ಸಲ್‌ವಾದಿಗಳು, ನಕ್ಸಲ್‌ವಾದದ ವಿರುದ್ಧ ದನಿ ಎತ್ತಿದವರು ಕೋಮುವಾದದ ಬೆಂಬಲಿಗರು ಎಂದು ಒಂದು ಕಡೆ ಬಿಜೆಪಿ, ಮತ್ತೊಂದು ಕಡೆ ನಕ್ಸಲೀಯರು ಆರೋಪಿಸುತ್ತಿದ್ದಾರೆ. ಕರ್ನಾಟಕದಲ್ಲಿ ಕೋಮುವಾದದ ವಿರುದ್ಧದ ಹೋರಾಟದಲ್ಲಿ ಅಸಂಖ್ಯಾತ ಜನ ಪ್ರಗತಿಪರರು ಭಾಗವಹಿಸುತ್ತಿದ್ದಾರೆ. ಇಲ್ಲಿ ಕೋಮುವಾದದ ವಿರುದ್ಧವೂ ನಕ್ಸಲ್‌ವಾದದ ವಿರುದ್ಧವೂ ಏಕಕಾಲಕ್ಕೆ ಹೋರಾಡಬೇಕಾದ ಅಗತ್ಯ ಇದೆ.

ಪೋಲೀಸರು ಪ್ರಕಟಿಸಿರುವ ಪಟ್ಟಿಯಲ್ಲಿ ನಕ್ಸಲೀಯರ ಸಿದ್ಧಾಂತ ಮತ್ತು ಕಾರ್ಯತಂತ್ರದ ಬಗ್ಗೆ ಯಾವುದೇ ಸಹಾನುಭೂತಿಯಾಗಲಿ ಸಹಮತವಾಗಲಿ ಇಲ್ಲದ ಜನಪರ ಹೋರಾಟಗಾರರ ಹೆಸರುಗಳು ಸೇರ್ಪಡೆ ಆಗಿದ್ದಲ್ಲಿ ಅವುಗಳನ್ನು ಸರ್ಕಾರ ಕೈ ಬಿಡಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ನಕ್ಸಲ್‌ವಾದದ ಅಪಾಯ ಅರಿವ ಸಂದರ್ಭವಿದು



ಸಾರ್ವಜನಿಕವಾಗಿ ವಿಶೇಷವಾಗಿ ಪ್ರಗತಿಪರ ಬುದ್ಧಿ ಜೀವಿಗಳ ನಡುವೆ ಬಿಸಿಯೇರಿದ ಒಂದು ಚರ್ಚೆ ನಡೆಯುತ್ತಿದೆ. ಇದು ಸಕಾಲಿಕವಾದದ್ದು ಕೂಡ.

ಇದಕ್ಕೆ ಚಾಲನೆ ದೊರತದ್ದು ಪೋಲೀಸ್ ಇಲಾಖೆಯಿಂದ! 19 ನಕ್ಸಲೀಯರು, ಅವರನ್ನು ಬೆಂಬಲಿಸುವ 33 ವ್ಯಕ್ತಿಗಳು, ಹಾಗೂ ಸಂಘಟನೆಗಳ ಪಟ್ಟಿಯೊಂದನ್ನು ಪ್ರಕಟಿಸಿದೆ. ಇದಕ್ಕೆ ತೀವ್ರ ವಿರೋಧ ಬಂದದ್ದು, ಆ ವಲಯದ ನಡುವಿನಿಂದಲೇ. ಉಳಿದಂತೆ ರೈತ ಹೋರಾಟದ ಕಡಿದಾಳ್ ಶಾಮಣ್ಣ, ಲೇಖಕ ಡಾ: ರಾಜೇಂದ್ರ ಚೆನ್ನಿಯವರನ್ನು ಪಟ್ಟಿಯಲ್ಲಿ ಸೇರಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದವರಲ್ಲಿ, ಹಲವು ಪ್ರಗತಿಪರರಾಗಿ ಇದ್ದಾರೆ. ಇದು ಬಹುತೇಕ ಮಾಧ್ಯಮಗಳಲ್ಲಿ ನಡೆಯುತ್ತಿರುವ ಚರ್ಚೆಯಾದರೂ ಸರ್ಕಾರದ ಮೇಲೆ ಒಂದಿಷ್ಟು ಒತ್ತಡ ಹೇರಿದೆ. ಹೀಗಾಗಿ ಗೃಹ ಸಚಿವರು, ಸ್ಪಷ್ಟನೆ ನೀಡಿ, ನಂತರ ಪಟ್ಟಿಯಿಂದ ಅವರಿಬ್ಬರ ಕೈ ಬಿಡಿಸಿದ್ದಾರೆ. ಆದರೆ ವಿಪರ್ಯಾಸವೆಂದರೆ ಇಂತಹ ಪಟ್ಟಿಯು ತಮ್ಮ ಗಮನಕ್ಕೆ ಬಂದಿಲ್ಲವೆಂದು ಅವರು ಹೇಳಿದ್ದು! ಹಾಗಾದರೆ ಮೈತ್ರಿಕೂಟದ ಈ ಸರ್ಕಾರದಲ್ಲಿ ಯಾರು -ಯಾವುದನ್ನು, ಯಾರನ್ನು ನಿಯಂತ್ರಿಸುತ್ತಾರೆ? ಯಾರ್‍ಯಾರನ್ನು ಹೇಗೇಗೆ ಬಳಸುತ್ತಾರೆ? ಗೃಹ ಸಚಿವರ ಕೆಲಸವೇನು ಎಂಬ ಗಂಭೀರ ಪ್ರಶ್ನೆ ಏಳುತ್ತದೆ. ಇದು ಪೋಲೀಸ್ ಇಲಾಖೆಯೇ ಸಿದ್ದಪಡಿಸಿದ ಪಟ್ಟಿಯೆಂದು ಮೊದಲೇ ಸ್ಪಷ್ಟನೆ ನೀಡಿದ್ದರೆ ಗೊಂದಲಕ್ಕೂ ಅವಕಾಶವಿರುತ್ತಿರುಲಿಲ್ಲವೇನೋ! ಪಟ್ಟಿಯು ಬಗ್ಗೆ ಗಂಭೀರ ಚಿಂತನೆಯನ್ನು ದುರ್ಬಲಗೊಳಿಸುತ್ತಿರಲಿಲ್ಲವೇನು? ಒಂದು ನಿಷ್ಠುರ ನಿಲುವನ್ನು ಗೃಹ ಸಚಿವರಿಂದ ನಿರೀಕ್ಷಿಸುವುದು ತಪ್ಪೇನೋ! ಆದರೆ ಪಟ್ಟಿಯಲ್ಲಿ ಇನ್ನು ಕೆಲವರ ಹೆಸರು ಸೇರಿಸಿ ಎಂದು ಚೀರಾಡಿದ ಚಡ್ಡಿ ಸಂತತಿಯು ಫ್ಯಾಶಿಸ್ಟ್ ಮನೋಭಾವವನ್ನು ಪ್ರಜಾಸತ್ತಾತ್ಮಕ ಮೌಲ್ಯಗಳು ವಿರುದ್ಧದ ಆತುರವನ್ನು ಗಂಭೀರವಾಗಿ ಪರಿಗಣಿಸಬೇಕು ಕೂಡ.



ಬುಶ್ ವ್ಯಾಖ್ಯಾನ

ಪೋಲೀಸರ ಪಟ್ಟಿಯ ವಿರುದ್ಧ ಆಕ್ಷೇಪವೆತ್ತಿ, 'ಅಂಕಣ'ಕ್ಕೆ ಇಳಿದಿರುವ ಗೌರಿ, ಶ್ರೀಧರ ಶಿವಸುಂದರ್, ಅಲ್ಲದೇ ಹಲವಾರು ಮಾವೋವಾದಿಗಳು(?) ನಕ್ಸಲ್‌ವಾದವನ್ನು ಅದರ ಕಾರ್ಯತಂತ್ರಗಳನ್ನು ವಿಧಾನಗಳನ್ನು ವಿರೋಧಿಸುತ್ತಿಲ್ಲ. ಬದಲಾಗಿ ಹಲವು ರೀತಿಯಲ್ಲಿ ನಕ್ಸಲ್‌ವಾದವನ್ನು ಬಿರುಸಾಗಿಯೇ ಸಮರ್ಥಿಸುತ್ತಿದ್ದಾರೆ. ಕೋಮುವಾದದ ವಿರುದ್ಧ, ಜನರ ಸಮಸ್ಯೆಗಳ ವಿರುದ್ಧದ ಅವರಿಬ್ಬರ ಹೋರಾಟವೇ ನಕ್ಸಲ್‌ವಾದವೆಂದು ಹೇಳಿ ನಕ್ಸಲ್‌ವಾದದ ವಿನಾಶಕಾರಿ ಹಾದಿಯನ್ನು ಮರೆ ಮಾಡುತ್ತಾರೆ. ಕೋಮುವಾದದ ಬಗ್ಗೆ ಮತ್ತು ಗಿರಿಜನರು ಮುಂತಾದವರ ಸಮಸ್ಯೆಗಳ ಬಗ್ಗೆ ಹೋರಾಡುವುದೆಂದರೆ ನಕ್ಸಲೀಯರ ದಾರಿಯೆಂದೇ ನಂಬಿಸ ಬಯಸುತ್ತಾರೆ. ಹಾಗಾಗಿಯೇ ಅವರ ಎಲ್ಲಾ ಕೃತ್ಯಗಳನ್ನು ಪ್ರಜಾಸತ್ತಾತ್ಮಕ ಹೋರಾಟ ಎಂದು ಚಿತ್ರಿಸುತ್ತಾರೆ. ಈ ಕ್ರಾಂತಿಕಾರಿಗಳ ವಿಚಿತ್ರ ವಿಶ್ಲೇಷಣೆಯೆಂದರೆ ಕೋಮುವಾದದ ವಿರುದ್ಧ ಹೋರಾಡುವುದು ಕರ್ನಾಟಕ ಕೋಮುಸೌಹಾರ್ದದ ವೇದಿಕೆ ಬಿಟ್ಟು ಬೇರಾರು ಇಲ್ಲ. ಅಂತಹವರೇನಿದ್ದರೂ ತಮ್ಮ ಅಡಿಯಲ್ಲಿ ಇದ್ದರೆ ಮಾತ್ರ ಮಾನ್ಯತೆ ಪ್ರಮಾಣ ಪತ್ರ ಸಿಗುತ್ತದೆ. ಇಂತಹ ಎಂದೇ ದಬಾಯಿಸುತ್ತಾರೆ. ಇದು ಇತರ ಜನ ಚಳುವಳಿ ಅನ್ವಯಿಸುತ್ತದೆ. ಅಂದರೆ ಇನ್ನೊಬ್ಬರ ಅಸ್ತಿತ್ವ ಹೋರಾಟಗಳನ್ನು ಅವರು ಪರಿಗಣಿಸುವುದೇ ಇಲ್ಲ. ಆದ್ದರಿಂದಲೇ ಕೋಮುವಾದದ ವಿರುದ್ಧ ಹೋರಾಟ ಮಾಡುವವರು ನಕ್ಸಲ್‌ವಾದಿಗಳು ಮಾತ್ರ, ನಕ್ಸಲ್‌ವಾದದ ವಿರುದ್ಧ ಆಕ್ಷೇಪ ಎತ್ತಿದರೆ ಅವರು ಕೋಮುವಾದದ ಬೆಂಬಲಿಗರು ಎಂಬಂತಹ ಭಯೋತ್ಪಾದನೆ ಬಗೆಗಿನ ಬುಶ್ ವ್ಯಾಖ್ಯಾನವನ್ನು ತರ್ಕಬದ್ಧವಾಗಿ ಮಂಡಿಸುತ್ತಾರೆ. ಕೋಮುವಾದದ ವಿರುದ್ಧ ಒಂದು ಹಂತದಲ್ಲಿ ಪ್ರತಿರೋಧ ಒಡ್ಡುವಲ್ಲಿ ಕೋಮು ಸೌಹಾರ್ದ ವೇದಿಕೆಯು ಮಹತ್ವದ ಪಾತ್ರ ವಹಿಸಿದೆ ಎಂಬುದನ್ನು ಗಮನಿಸಬಹುದು. ಇದರಲ್ಲಿ ಎಲ್ಲರ ಪಾತ್ರ - ಪಾಲೂ ಇದೆ. ಆದರೆ ಮಾವೋವಾದಿ ನಕ್ಸಲೀಯರು ಮಾಡುತ್ತಿರು ಹೋರಾಟ ಕೋಮುವಾದಿಗಳನ್ನು ದುರ್ಬಲ ಗೊಳಿಸಿದೆಯೇ? ಅಥವಾ ಕೋಮುವಾದಿಗಳು ಹೆಚ್ಚು ಹೆಚ್ಚು ಕ್ರೋಢೀಕರಣಗೊಳ್ಳಲು ಸಹಾಯ ವಾಗಿದೆಯೇ? ಕೋಮು ವಾದಿಗಳನ್ನು ಎದುರಿಸಲಾಗುವುದೆಂಬ ವಿಧಾನಗಳ ಬಗ್ಗೆ ವಿಶೇಷ ಚರ್ಚೆ ನಡೆಸಬೇಕಿದೆ.


ಇದೆಂತಹ ಪ್ರಜಾತಂತ್ರ?

ಪ್ರಜಾ ತಂತ್ರದ ಹಾಗೂ ಹಕ್ಕುಗಳ ಬಗ್ಗೆ ವಿಪರೀತ ಮಾತನಾಡುವ ಇವರು ಎಷ್ಟು ಪ್ರಜಾಸತ್ತಾತ್ಮಕ ವಾಗಿದ್ದಾರೆ? ಮತ್ತು ನಕ್ಸಲೀಯರು ಕಾಡುಮೇಡುಗಳಲ್ಲಿ ನಡೆಸುತ್ತಿರುವ ಕಾರ್ಯಚರಣೆ, ಧೋರಣೆ-ಕ್ರಮಗಳು ಜನತೆಯ ವಿಶಾಲ ಪ್ರಜಾಸತ್ತಾತ್ಮಕ ಚಳುವಳಿಯನ್ನು ದುರ್ಬಲಗೊಳಿಸುತ್ತಿಲ್ಲವೇ?. ಚಳುವಳಿಗಳನ್ನು ಅನಾಯಾಸವಾಗಿ ದಮನಿಸಲು ಆಳುವ ವರ್ಗಗಳಿಗೆ ಸುಲಭ ಅಸ್ತ್ರವನ್ನು ಇದು ದೊರಕಿಸಿಕೊಡುತ್ತಿದೆ. ಬಾಯಿಯಲ್ಲಿ ಪ್ರಜಾ ತಂತ್ರದ ಬಗ್ಗೆ ಮಾತನಾಡ ಸಿಗುತ್ತದೆ. ಇನ್ನೊಬ್ಬರ ಇವರು ಅಭಿಪ್ರಾಯಗಳನ್ನು ಮನ್ನಿಸುವುದಿಲ್ಲ. ಅವರ ಮೂಗಿನ ನೇರಕ್ಕೆ ಇಲ್ಲದಿದ್ದರೆ ಪಟ್ಟಾ ಗ್ಯಾರಂಟಿ. ಆದ್ದರಿಂದಲೇ ಕೆ.ಎಲ್.ಅಶೋಕರವರು ಪ್ರಜಾವಾಣಿಯ ವಾಚಕರ ವಾಣಿಯಲ್ಲಿ ಬರೆದ ಜೀನ್‌ಪಾಲ್ ಸಾತ್ರೆಯವರ ವ್ಯಾಖ್ಯಾನವನ್ನು ಅವರೇ ಮರು ಓದಿಕೊಳ್ಳುವುದು ಒಳ್ಳೆಯದು 'ನಾನು ನಿಮ್ಮ ವಿಚಾರಗಳನ್ನು ಒಪ್ಪುವುದಿಲ್ಲ. ಆದರೆ ನಿಮ್ಮ ವಿಚಾರವನ್ನು ಪ್ರತಿಪಾದಿಸುವ ಸ್ವಾತಂತ್ರ್ಯವನ್ನು ನನ್ನ ಪ್ರಾಣ ಕೊಟ್ಟಾದರೂ ರಕ್ಷಿಸುತ್ತೇನೆ' ಎಂದಿದೆ. ಇದನ್ನು ಓದಿದ ಲೇಖಕರೊಬ್ಬರು 'ಸ್ವಾಮಿ ಭಿನ್ನ ವಿಚಾರ ಹೇಳುವವರ ಸ್ವಾತಂತ್ರ್ಯ ರಕ್ಷಿಸಲು ಇವರು ಪ್ರಾಣ ಕೊಡುವುದು ಇರಲಿ, ಪ್ರಾಣ ತೆಗೆಯದಿದ್ದರೆ ಸಾಕು' ಎಂದು ಕೈ ಮುಗಿದರು!

ದೇಶದಲ್ಲಿ ನಕ್ಸಲೀಯ ಚಳುವಳಿ ಸಾಗಿ ಬಂದ ಹಾದಿ, ಅದರ ಅನುಭವಗಳಿಗೆ ದಶಕಗಳ ಇತಿಹಾಸವಿದೆ. ರಾಜ್ಯದಲ್ಲಿನ ವಿದ್ಯ ಮಾನಗಳ ಪರಿ ಕಣ್ಣು ತೆರೆಯಲು ಸಾಕು. ಇನ್ನಾದರೂ ನಮ್ಮನಾಡಿನ ಪ್ರಗತಿಪರ ಬುದ್ಧಿ ಜೀವಿಗಳು, ವಿವಿಧ ಸಂಘಟನೆಗಳ ಕಾರ್ಯ ಕರ್ತರು ಅಂತಹವರ ಸಂಬಂಧ ಹಾಗೂ ಸಂಘಟನೆಗಳನ್ನು ಬಿಟ್ಟು ಹೊರ ಬರಬೇಕು.

ಈಗಾಗಲೇ ಡಾ: ರಾಜೇಂದ್ರ ಚೆನ್ನಿಯವರು ಗುರುತಿಸಿರುವಂತೆ 'ಕೋಮು ಸೌಹಾರ್ದ ವೇದಿಕೆ' ಒಂದು ಸಣ್ಣ ಗುಂಪುಯನ್ನು (ನಕ್ಸಲೀಯರು-ಸಂ) ಎಲ್ಲವನ್ನೂ ನಿರ್ಧರಿಸುವ ನಿಯಂತ್ರಿಸುವ ಬಗ್ಗೆ ಶನಿವಾರದಂದು ಪ್ರಜಾವಾಣಿಯ ಲೇಖನದಲ್ಲೆ ಬರೆದಿದ್ದಾರೆ. ಅವರ ಅವಲೋಕನ ಸರಿಯಾಗಿದೆ. ಅದೇ ರೀತಿ ಡಾ: ಕೆ.ಮರುಳಸಿದ್ದಪ್ಪ, ಪ್ರೊ:

ಪುಟ 7 ಕ್ಕೆ



ಸಿ.ಯತಿರಾಜು

1857 ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಇನ್ನೊಂದು ಬೃಹತ್ ಅಧ್ಯಾಯವಿದು

ಔದ್‌ನ ಬಂಡಾಯ

1848ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಹಣಕಾಸು ಪರಿಸ್ಥಿತಿ ತೀರಾ ಹದಗೆಟ್ಟಿತ್ತು. ಅದರ ಆದಾಯವನ್ನು ಒಂದಲ್ಲ ಒಂದು ರೀತಿಯಲ್ಲಿ ಹೆಚ್ಚಿಸುವುದು ತೀರಾ ಅಗತ್ಯವಾಗಿದ್ದಿತು. ಹೆಚ್ಚಿನ ಆದಾಯವನ್ನು ಪಡೆಯಲು ಬ್ರಿಟೀಷರು ಹೊಸ ಹೊಸ ವಿಸ್ತರಣಾ ಮಾರ್ಗಗಳನ್ನು ಹುಡುಕುವಂತಾಯಿತು. ಅನೇಕ ಕುಂಟು ನೆಪಗಳ ಮೊರೆ ಹೊಕ್ಕು ಬ್ರಿಟಿಷರು ಒಂದಾದ ನಂತರ ಒಂದು ದೇಶೀಯ ಸಂಸ್ಥಾನವನ್ನು ಕಬಳಿಸಲಾರಂಬಿಸಿದರು. 1848ರಿಂದ 1854ರವರೆಗೆ ಒಂದು ಡಜನ್‌ಗೂ ಹೆಚ್ಚು ಸ್ವತಂತ್ರ ರಾಜರ ಸಂಸ್ಥಾನಗಳನ್ನು ಬಲಾತ್ಕಾರದಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಲಾಯಿತು.

ಹೊಸ ಹೊಸ ತಂತ್ರ

ಸಾಮ್ರಾಜ್ಯಶಾಹಿಗಳು ತಮ್ಮ ಲೂಟಿಯ ಪ್ರಮಾಣವನ್ನು ನಿರಂತರವಾಗಿ ಹೆಚ್ಚಿಸಿಕೊಳ್ಳಲು ಅನಿವಾರ್ಯವಾಗಿ ಸಾಮ್ರಾಜ್ಯ ವಿಸ್ತರಣಾ ನೀತಿಯನ್ನು ಅನುಸರಿಸಿ ಹೊಸ ಹೊಸ ಶೋಷಣಾ ಅವಕಾಶಗಳನ್ನು ರೂಪಿಸುತ್ತಾ ಸಾಮಾನ್ಯ ಜನರ ಲೂಟಿ ಮಾಡಿ ತಮ್ಮ ತಿಜೋರಿಗಳನ್ನು ನಿರಂತರವಾಗಿ ತುಂಬುವ ಪ್ರಯತ್ನ ಮಾಡಿದರು. ಈ ನೀತಿಯ ಭಾಗವಾಗಿ ಡಾಲ್ ಹೌಸಿ 1856 ಫೆಬ್ರವರಿ 13ರಂದು ಔದ್ ರಾಜ್ಯದ ನವಾಬನಾದ ವಾಜಿದ್ ಅಲಿ ಷಾನನ್ನು ಯಾವುದೇ ಸಮರ್ಥನೀಯ ಕಾರಣವಿಲ್ಲದೇ ಪದಚ್ಯುತಿಗೊಳಿಸಿದನು. ಅತ್ಯಂತ ಸಪದ್ಭರಿತ ರಾಜ್ಯವಾಗಿದ್ದ ಔದ್ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ನೇಪಾಳದ ಮೇಲಿನ ಯುದ್ಧದ ಸಂದರ್ಭದಲ್ಲಿ ಮೂರುವರೆ ಮಿಲಿಯನ್ ರೂಪಾಯಿ ಹಣವನ್ನು ಸಾಲವಾಗಿ ನೀಡಿತ್ತು. ಮೊಹಮ್ಮದ್ ಅಲೀ ಷಾನ ಆಳ್ವಿಕೆಯಲ್ಲಿ ಅತ್ಯಂತ ಅನ್ಯಾಯಕರ ಹೊಸ ಒಪ್ಪಂದವೊಂದನ್ನು ಔದ್‌ನ ಮೇಲೆ ಏಕಪಕ್ಷೀಯವಾಗಿ ಹೇರಲಾಗಿತ್ತು. ವಾಜಿದ್ ಅಲಿಷಾನ ಪದಚ್ಯುತಿ ದೇಶಾದ್ಯಂತ ಕೋಪ ಮತ್ತು ಬ್ರಿಟಿಷ್ ವಿರೋಧಿ ಭಾವನೆಗಳನ್ನು ಹಿಂದೂ ಮತ್ತು ಮುಸ್ಲೀಮರಿಬ್ಬರಲ್ಲೂ ಉದ್ದೀಪನಗೊಳಿಸಿತು. ಔದ್‌ನ ರಾಜವಂಶಸ್ಥರು, ತಾಲ್ಲೂಕ್‌ದಾರರು ಅವಲಂಬಿತರು ಸೈನಿಕ ಅಧಿಕಾರಿಗಳು ಹಾಗೂ ಸಿಪಾಯಿಗಳು ಬ್ರಿಟೀಷರ ಈ ಕ್ರಮವನ್ನು ಅತ್ಯಂತ ಅನ್ಯಾಯಕರವೆಂದು ಭಾವಿಸಿದರು. ಜನತೆಯ ಹಿತಕ್ಕಾಗಿ, ಅವರನ್ನು ಸುಲ್ತಾನರ ದುರಾಡಳಿತದಿಂದ ರಕ್ಷಿಸುವುದಕ್ಕಾಗಿ ಬ್ರಿಟಿಷರು ಈ ಕ್ರಮ ಕೈಗೊಳ್ಳಬೇಕಾಯಿತೆಂದು ಡಂಗುರ ಹೊಡೆದರು. ಅದನ್ನು ಯಾರೂ ನಂಬುವ ಸ್ಥಿತಿಯಲ್ಲಿರಲಿಲ್ಲ.

ಔದ್ ರಾಜ್ಯದ ಆಳ್ವಿಕೆಯನ್ನು 'ಚೀಫ್ ಕಮಿಷನರ್' ಆಳ್ವಿಕೆಗೆ ಒಳಪಡಿಸಿ ಲಾರೆನ್ಸನನ್ನು ಪ್ರಧಾನ ಕಮಿಷನರ್ ಆಗಿ ನೇಮಕ ಮಾಡಲಾಯಿತು. ಲಾರೆನ್ಸ್ ಎಲ್ಲಾ ರೀತಿಯ ಜನರೊಂದಿಗೆ ಬೆರೆತು ಉದ್ರೇಕಿತ ಜನರ ಭಾವನೆಗಳನ್ನು ತಣಿಸಲು ಪ್ರಯತ್ನಿಸಿದನು. ಆದರೂ ಅವನು ಜನರು ತಮ್ಮ ಪ್ರಬಲ ವಿರೋಧಿ ಭಾವನೆಗಳನ್ನು ಮೈಗೂಡಿಸಿಕೊಂಡಿದ್ದಾರೆಂಬುದನ್ನು ಮನಗಂಡಿದ್ದನು ಹಾಗೂ ಈ ಬಗ್ಗೆ ಅವನು ಸರ್ಕಾರಕ್ಕೆ ಎಚ್ಚರಿಕೆಯ ವರದಿಯೊಂದನ್ನು ನೀಡಿದ್ದನು.

ಮೀರತ್‌ಗೂ ಮುಂಚೆ

ಆದರೂ ಲಾರೆನ್ಸ್‌ನ ಪ್ರಯುತ್ನಗಳು ವಿಫಲವಾದವು. ಸಿಪಾಯಿದಂಗೆ ಮೀರತ್‌ನಲ್ಲಿ ಆರಂಭಗೊಳ್ಳುವುದಕ್ಕೆ ಮುಂಚಿತವಾಗಿಯೇ 3ನೇ ಮೇ 1857ರಂದು 7ನೇ ಔದ್ ರೆಜಿಮೆಂಟಿನ ಸಿಪಾಯಿಗಳು ದಂಗೆಯೇಳುವ ಮೂಲಕ ಬೂದಿಮುಚ್ಚಿದ್ದ ಪ್ರತೀಕಾರದ ಕೆಂಡದುಂಡಗೆ ಗಾಳಿ ಊದಿದರು. ಸಿಪಾಯಿಗಳು ಕೊಬ್ಬು ಸವರಿದ ಹೊಸ ತೋಟಾಗಳನ್ನು ಕಚ್ಚಲು ನಿರಾಕರಿಸಿದರು. ಶಸ್ತ್ರಾಸ್ತ್ರಗಳನ್ನು ಬಿಸಾಡಿ ಪಲಾಯನ ಮಾಡಿದರು. ಮೌಲ್ವಿ ಅಹಮದುಲ್ಲಾ ಷಾ ಉತ್ತರದ ಪ್ರಾಂತಗಳಲ್ಲಿ ಪ್ರವಾಸ ಮಾಡಿ ಜನರನ್ನು ಪವಿತ್ರ ಯುದ್ಧಕ್ಕೆ ಜಾಗ್ರತಗೊಳಿಸಿದನು. ಈತ ಲಕ್ನೋ ಹಾಗೂ ಔದ್‌ನ ಇತರ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಬೃಹತ್ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿ ಬಂಡಾಯಕ್ಕೆ ಜನರಿಗೆ ಪ್ರೇರೇಪಣೆ ನೀಡಿದನು. ನಾನಾ ಸಾಹೇಬ್ ಮತ್ತು ಅಜೀಮುಲ್ಲಾರು ಲಕ್ನೋಗೆ ಬೇಟಿ ನೀಡಿ ಜನರನ್ನು ಬ್ರಿಟಿಷ್ ಆಡಳಿತದ ವಿರುದ್ಧ ಅವಿಧೇಯತೆಯನ್ನು ಪ್ರದರ್ಶಿಸಲು ಜನರಿಗೆ ಕರೆ ನೀಡಿದರು. ಇವರೆಲ್ಲರ ಪ್ರಯತ್ನಗಳಿಂದಾಗಿ ಮೇ ಕೊನೆಯ ವಾರದಲ್ಲಿ ಔದ್‌ನ ಬಂಡಾಯ ಸ್ಫೋಟಗೊಂಡಿತು.



ಹಜರತ್ ಮಹಲ್

ಬಂಡಾಯದ ಜ್ವಾಲೆಗಳು ಲಕ್ನೋವನ್ನು ಪೂರ್ಣವಾಗಿ ಆವರಿಸಿಕೊಂಡವು. ಜೂನ್ 3ರ ವೇಳೆಗೆ ಅದೇ ಸೀತಾಪುರವನ್ನು, 4ರಂದು ಮೊಹಮ್ಮದಿ ಮತ್ತು ಲಖಿವಪುರ್ ಖೇರಿಯನ್ನು, 8ರಂದು ಫೈಜಾಬಾದನ್ನು, 9ರಂದು ಸುಲ್ತಾನ್‌ಪುರವನ್ನು ಆವರಿಸಿತು ಮತ್ತು 10ರಂದು ಗೊಂಡ್ ಜಿಲ್ಲೆಗಳಿಗೆ ಕಾಡ್ಗಿಚ್ಚಿನಂತೆ ಹಬ್ಬಿತು. ಜೂನ್ ತಿಂಗಳ ಅಂತ್ಯಕ್ಕೆ ಔದ್‌ನ ಬಹುಪಾಲು ಜಿಲ್ಲೆಗಳು ಬಂಡಾಯಗಾರರ ವಶವಾಗಿದ್ದವು. ಲಕ್ನೋದಲ್ಲಿ ವಾಜಿದ್ ಆಲಿಷಾನ 11 ವರ್ಷದ ಮಗನಾದ ಬಿರ್‌ಜಿಸ್ ಖಾದರ್‌ನನ್ನು ಔದ್‌ನ "ವಾಲಿ"ಯನ್ನಾಗಿ ಘೋಶಿಸಲಾಯಿತು. ಅವರ ತಾಯಿ ಹಜ್ರತ್ ಮಹಲ್ ಈ ಅಪ್ರಾಪ್ತ ಬಾಲಕನ ಪೋಷಕ ರಾಜಪ್ರತಿನಿಧಿಯಾಗಿ ಔದ್‌ನ ಆಳ್ವಿಕೆಯನ್ನು ತನ್ನ ಕೈಗೆತ್ತಿಕೊಂಡಳು. ಆಡಳಿತದ ಜವಾಬ್ದಾರಿಗಳನ್ನು ಅತ್ಯಂತ ಸಮರ್ತವಾಗಿ ನಿಭಾಯಿಸಬಲ್ಲ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡಿ ವಿವಿಧ ಅಧಿಕಾರಿಗಳನ್ನು ನೇಮಿಸಿ ಸುಸೂತ್ರ ಆಡಳಿತದ ವ್ಯವಸ್ಥೆ ಮಾಡಿದಳು. ಹಿಂದು ಮುಸ್ಲಿಂ ಸಲಹೆಗಾರರನ್ನು ಹೊಂದಿದ್ದ ಉನ್ನತ ಸಮಿತಿ ಆಡಳಿತವನ್ನು ನಡೆಸುತ್ತಿತ್ತು. ಈ ರೀತಿ ಆಡಳಿತಾತ್ಮಕ ವ್ಯವಸ್ಥೆ ಮಾಡಿ ಆ ಪ್ರದೇಶದಲ್ಲಿ ಬ್ರಿಟಿಷ್ ವಿರೋಧಿ ಬಂಡಾಯದ ಬಲಿಷ್ಠ ಕೇಂದ್ರವನ್ನು ರೂಪಿಸಿದಳು.

ಹಜರತ್ ಮಹಲ್ ಹೋರಾಟ - ಔದ್ ಮುತ್ತಿಗೆ

ಔದ್‌ನ ರೆಸಿಡೆನ್ಸಿ (ರೆಸಿಡೆಂಟ್‌ನ ವಾಸಸ್ಥಾನ)ಯನ್ನು ಬಲವಾಗಿ ಬಂಡಾಯಗಾರರು ಸುತ್ತುವರಿದರು. ಹೀಗೆ ಬಂಡಾಯಗಾರರಿಂದ ಸುತ್ತುವರಿಯಲ್ಪಟ್ಟ ರೆಸಿಡೆನ್ಸಿಗೆ ಯಾವ ವಸ್ತುಗಳು ಸರಬರಾಜಾಗದಂತೆ ಮಾಡಿ ಅವರ ಶರಣಾಗತಿಯನ್ನು ಬಲಾತ್ಕರಿಸುವ ರಣತಂತ್ರವನ್ನು ಹಜರತ್ ಮಹಲ್ ರೂಪಿಸಿದಳು. 1857ರ ಜೂನ್ ಮಧ್ಯಭಾಗದಿಂದ 1858ರವರೆಗೆ ಬ್ರಿಟಿಷರು ಹರಸಾಹಸ ಮಾಡಿದರೂ ಈ ಮುತ್ತಿಗೆಯನ್ನು ತೆರವುಗೊಳಿಸಲು ಸಾಧ್ಯವಾಗಲಿಲ್ಲ. ತಾನೇ ಸ್ವತಹ ಆನೆಯನ್ನೇರಿ ರಣರಂಗಕ್ಕಿಳಿದು ಅತ್ಯಂತ ವೀರಾವೇಶದಿಂದ ಹೋರಾಡುತ್ತಾ ಬಂಡಾಯ ಸೈನಿಕರನ್ನು ಹುರಿದುಂಬಿಸಿದಳು. ಬ್ರಿಟಿಷರು ಸುತ್ತಮುತ್ತಲ ಪ್ರದೇಶಗಳಿಂದ ಅಪಾರ ದಂಡನ್ನು ಸಂಗ್ರಹಿಸಿ ಈ ಮುತ್ತಿಗೆಯನ್ನು ತೆರವುಗೊಳಿಸುವ ಪ್ರಯತ್ನವನ್ನು ಮಾಡಿದರು. ಸೈನಿಕರು ಇಂತಹ ಸಾಹಸಮಯ ವೀರವನಿತೆಯ ನೇತೃತ್ವದಲ್ಲಿ ಅತ್ಯಂತ ವೀರಾವೇಶದಿಂದ ಹೋರಾಡಿದರೂ ಅಂತಿಮವಾಗಿ ಸೋಲೊಪ್ಪಿಕೊಳ ಬೇಕಾಯಿತು. ಬ್ರಿಟೀಷರ ಬೃಹತ್ ಧಾಳಿಯಿಂದಾಗಿ ಹಜರತ್ ಮಹಲ್ ಲಕ್ನೋ ಮುತ್ತಿಗೆಯಿಂದ ಹಿಮ್ಮೆಟ್ಟಬೇಕಾಯಿತು. ಈ ಸೋಲಿನಿಂದ ದೃತಿಗೆಡದೆ ಹೋರಾಟವನ್ನು ಮುಂದುವರಿಸಲು ಶಹಜಹಾನ್ ಕಡೆಗೆ ತೆರಳಿ ಮೌಲ್ವಿ ಅಹಮದುಲ್ಲಾ ಷಾನೊಂದಿಗೆ ಸೇರಿಕೊಂಡು ಬಂಡಾಯವನ್ನು ಮುಂದುವರಿಸಿದಳು.


ಫೈಜಾಬಾದ್‌ನಲ್ಲಿ 22ನೇ ರೆಜಿಮೆಂಟಿನ ದೇಶೀಯ ಕಾಲ್ದಳ; 15ನೇ ಅಶ್ವದಳ ಮತ್ತು ಫಿರಂಗಿದಳಗಳುಳ್ಳ ಸೈನಿಕ ನೆಲೆಯಲ್ಲಿ ಸೈನಿಕರು ಬಂಡಾಯದ ಬಾವುಟ ಹಾರಿಸಿದರು. ಅಜಮ್‌ಘರ್ ಮತ್ತು ಬನಾರಸ್‌ನ ಅನೇಕ ಕ್ರಾಂತಿಕಾರಿಗಳು ಬಂಡಾಯಗಾರರ ಜೊತೆ ಸೇರಿಕೊಂಡರು. ಈ ಬಂಡಾಯಕ್ಕೆ ಮೌಲ್ವಿ ಅಹಮದುಲ್ಲಾ ಷಾ ಸ್ಫೂರ್ತಿ ನೀಡಿದರು. ಲಕ್ನೋ ಪತನಾನಂತರ ಅಹಮದುಲ್ಲಾ ಷಾ. ಅವನು ಹಜ್ರತ್‌ಮಹಲ್ ಗಳೊಂದಿಗೆ ಸೇರಿ ಕೊಂಡು ಹೋರಾಟವನ್ನು ನಿರಂತರವಾಗಿ ಸ್ಥಳದಿಂದ ಸ್ಥಳಕ್ಕೆ ಬದಲಾಯಿಸುತ್ತಾ ಬ್ರಿಟಿಷ್ ಪಡೆಗಳನ್ನು ಅಪಾರವಾಗಿ ಮಾಡಿದನು. ಕೆಲವು ಬಾರಿ ರೊಹಿಲ್‌ಖಂಡ್‌ನಲ್ಲಿ ಯುದ್ಧ ಮಾಡಿದರೆ ಮತ್ತೆ ಕೆಲವೊಮ್ಮೆ ಔದ್‌ನಿಂದ ಯುದ್ಧ ಮಾಡುತ್ತಿದ್ದರು. ಗೆರಿಲ್ಲಾ ಯುದ್ಧ ತಂತ್ರವನ್ನನುಸರಿಸಿ ಬ್ರಿಟಿಷರ ಸೈನ್ಯವನ್ನು ಕಂಗಾಲುಪಡಿಸಲಾಯಿತು. ಔದ್‌ನ ತಾಲ್ಲೂಕುದ್ಧಾರರು ಈ ಬಂಡಾಯಕ್ಕೆ ಬೆಂಬಲ ನೀಡಿ ಅದರಲ್ಲಿ ಪೂರ್ಣವಾಗಿ ಭಾಗವಹಿಸುವ ಮೂಲಕ ಈ ಹೋರಾಟ ಅತ್ಯಂತ ತೀವ್ರ ಸ್ವರೂಪವನ್ನು ಪಡೆಯಿತು. ಈ ಪ್ರದೇಶಗಳಲ್ಲಿ ಬ್ರಿಟೀಷ್ ಆಡಳಿತ ಸಂಪೂರ್ಣವಾಗಿ ಕುಸಿತುಬಿತ್ತು. ಇಡೀ ದೋಬ್ ಪ್ರಾಂತ್ಯ ಬ್ರೀಟಿಷರ ಆಧಿಪತ್ಯದಿಂದ ಮುಕ್ತವಾಯಿತು. ಅಪಾರ ಕಷ್ಟನಷ್ಟ ಮತ್ತು ಸವಾಲುಗಳ ನಡುವೆಯೂ ಬಂಡಾಯಗಾರರು ತಮ್ಮ ಧೀರೋದಾತ್ತ ಹೋರಾಟವನ್ನು ಮುಂದುವರಿಸಿದರು. ಈ ಹಂತದಲ್ಲಿ ಪೋವೈನ್‌ನ ರಾಜ ಅತ್ಯಂತ ಮೋಸದಿಂದ ಅಹಮದುಲ್ಲಾ ಷಾನನ್ನು ಕೊಲೆಗೈದನು. ಈ ಕೊಲೆ ಬಂಡಾಯಕ್ಕೆ ದೊಡ್ಡ ಹಿನ್ನಡೆಯನ್ನುಂಟುಮಾಡಿತು. ಹಜರತ್ ಮಹಲ್ ಅತ್ಯಂತ ದೊಡ್ಡ ಪಣದೊಂದಿಗೆ ಸೆಣಸಾಡಿದಳು. ಸೋನನ್ನುಭವಿಸಬೇಕಾಗಿ ಬಂದರೂ ಶರಣಾಗಲು ನಿರಾಕರಿಸಿದಳು. ಬ್ರಿಟಿಷ್ ಪಡೆಗಳು ಅವಳನ್ನು ಬೆನ್ನಟ್ಟಿ, ಕಾಡಿ ರಾಜಿ ಸೂತ್ರವನ್ನು ಸೂಚಿಸಿದರೂ, ಅದನ್ನು ಧಿಕ್ಕರಿಸಿ ತನ್ನ ಹೋರಾಟವನ್ನು ಎದೆಗುಂದದೇ ಮುಂದುವರಿಸಿದಳು. ಅವಳು ಅಪೇಕ್ಷಿಸಿದ್ದರೆ ಅಪಾರ ಮೊತ್ತವನ್ನು ಪೆನ್ಷನ್ನಾಗಿ ಪಡೆದು ರಾಣಿಯಾಗಿ ಬ್ರಿಟೀಷರ ಆಶ್ರಯದಲ್ಲಿ ಬದುಕಬಹುದಾಗಿದ್ದರೂ ಆದನ್ನು ಧಿಕ್ಕರಿಸಿ ಹೋರಾಟವನ್ನು ಮುಂದುವರಿಸಿದಳು. ನೇಪಾಳದ ಅರಣ್ಯಗಳಲ್ಲಿ ಆಶ್ರಯ ಪಡೆದು ಅವಿತಿಟ್ಟುಕೊಂಡು ಯುದ್ಧವನ್ನು ಮುಂದುವರಿಸಿದಳು. ಹೋರಾಡುತ್ತಾ ಹೋರಾಡುತ್ತಾ ಅನಾಮದೇಯಳಾಗಿ ವಿದೇಶಿ ನೆಲದಲ್ಲಿ ವೀರಮರಣವನ್ನಪ್ಪಿದಳು.



ಬಾಳ ಸಂಗಾತಿಗಳಾದ ರಾಘವೇಂದ್ರ - ಜಯಲಕ್ಷ್ಮಿ

ಕಾಂ. ಬಿ.ವಿ.ರಾಘವೇಂದ್ರ ಮತ್ತು ಸಿ.ಜಯಲಕ್ಷ್ಮಿಯವರು ಬಾಳಸಂಗಾತಿಗಳಾಗಿದ್ದಾರೆ. ರಾಘವೇಂದ್ರರವರು ಆಟೋರಿಕ್ಷಾ ಚಾಲಕರ ಸಂಘ (ಎಆರ್‌ಡಿಯು)ನ ಪ್ರಧಾನ ಕಾರ್ಯದರ್ಶಿಗಳಾಗಿದ್ದಾರೆ. ಸಿ. ಜಯಲಕ್ಷ್ಮಿಯವರು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆಯ ಬೆಂಗಳೂರು ಜಿಲ್ಲಾ ಖಜಾಂಚಿಯಾಗಿದ್ದಾರೆ.

ಜೂನ್ 28, 2007ರಂದು ಈ ಮದುವೆಯ ಸಂತೋಷ ಸಮಾರಂಭವು ಬೆಂಗಳೂರು ನಗರದ ಗಾಂಧಿನಗರದಲ್ಲಿರುವ ಅನಿಕೇತನದಲ್ಲಿ ಸಂಜೆ ನಡೆಯಿತು. ನವ ದಂಪತಿಗಳಿಗೆ ಶುಭಕೋರಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕಾಂ: ಆರ್.ಶ್ರೀನಿವಾಸ್, ಕೆ.ಪ್ರಕಾಶ್, ಮೀನಾಕ್ಷಿ ಸುಂದರ್, ಕೆ.ಎನ್. ಉಮೇಶ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ: ಗೌರಮ್ಮ ಟಿ. ಲೀಲಾವತಿ, ಶ್ರೀನಿವಾಸಮೂರ್ತಿ ಮುಂತಾದವರು ಮಾತನಾಡಿದರು.



ಪ್ರಕಾಶ್.ಸಿ. ರಾವ್

ಪದೇ ಪದೇ ಕಾಡುವ ನೆಗಡಿಗೆ ಶಾಶ್ವತ ಪರಿಹಾರವೇನು?

ಪದೇ ಪದೇ ಕಾಡುವ ನೆಗಡಿಗೆ ಬಹುಶಃ ಮೂಗಿನ ಅಲರ್ಜಿಯಿಂದ ಆಗಿರಲು ಸಾಧ್ಯ. ಮೂಗಿನ ಅಲರ್ಜಿಗೆ ಸಿ.ಪಿ.ಎಂ/ಸಿಟ್ರಿಯಿನ ಮಾತ್ರೆ (ರಾತ್ರಿ ಒಂದು ಮಾತ್ರೆ) ಉಪಯೋಗಿಸಬಹುದು. ಬೆಳಗಿನ ಸಮಯದಲ್ಲಿ ಈ ಮಾತ್ರೆ ಉಪಯೋಗಿಸಿದರೆ, ಅದರಿಂದ ಮಂಪರು ಬರುವ ಸಾಧ್ಯತೆ ಇರುತ್ತದೆ. ಜಾಗರೂಕರಾಗಿರಿ.



ಭಾರಿ ಮಳೆ ತಂದ ಅನಾಹುತ

ಕರಾವಳಿಯಾದ್ಯಂತ ಮುಂಗಾರು ಮತ್ತಷ್ಟು ತೀವ್ರಗೊಂಡಿದ್ದು, ಧಾರಾಕಾರ ಮಳೆ ಸುರಿದಿದೆ. ಉಳ್ಳಾಲ ಕಡಲ ತೀರದ ಹಿಲರಿನಗರ, ಮೊಗವೀರಪಟ್ನ, ಮುಕ್ಕಚ್ಚೇರಿ, ಕೋಟೆಪುರ ಮತ್ತು ಸುಭಾಷ್ ನಗರ ಮೊದಲಾದ ಪ್ರದೇಶಗಳಲ್ಲಿ ಕಳೆದ ಕೆಲವು ದಿನಗಳಲ್ಲಿ ಕಡಲ್ಕೊರೆತ ತೀವ್ರಗೊಂಡಿದ್ದು ಬಹಳಷ್ಟು ಮನೆಗಳಿಗೆ ಹಾನಿಯಾಗಿದೆ.

ಉಡುಪಿ ತಾಲ್ಲೂಕಿನ ಉಪ್ಪೂರು, ಹೇರೂರು, ಕೊಳಲಗಿರಿ ಪ್ರದೇಶಗಳಲ್ಲಿ ನೀರು ನಿಂತಿದ್ದು, ವಿಶಾಲ ಕೊಳದಂತೆ ಭಾಸವಾಗುತ್ತಿದೆ. ಸ್ವರ್ಣ ಹಾಗೂ ಉಪ್ಪೂರು ಹೊಳೆಗಳು ಉಕ್ಕಿ ಹರಿಯುತ್ತಿವೆ. ಪಾಂಗಾಳ ಪಾದೇಬೆಟ್ಟು, ಉದ್ಯಾವರ, ನಂದಿಕೂರು, ಪಡುಬಿದ್ರಿ ಮುಂತಾದ ತಗ್ಗು ಪ್ರದೇಶಗಳಲ್ಲಿ ನೀರು ನಿಂತಿದೆ. ಉಡುಪಿಯ ಎರ್ಮಾಳದಲ್ಲಿ ರಾಷ್ಟ್ರೀಯ ಹೆದ್ದಾರಿಯ ಮೇಲೆ ಮರ ಬಿದ್ದು ವಾಹನ ಸಂಚಾರ ಸ್ಥಗಿತಗೊಂಡಿದೆ.

ಕುಂದಾಪುರ ತಾಲ್ಲೂಕಿನ ಮರವಂತೆ ಕಡಲ ತೀರದಲ್ಲಿ ಕಡಲುಬ್ಬರ ಹೆಚ್ಚಾಗಿದ್ದು, ಸ್ಥಳೀಯ ಜನ ಸಾಮಾನ್ಯರು ಭಯಗ್ರಸ್ತರಾಗಿದ್ದಾರೆ. ಕುಂದಾಪುರ ಮತ್ತು ಬೈಂದೂರುಗಳ ತಗ್ಗು ಪ್ರದೇಶಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಭಟ್ಕಳದ ಸಂಶುದ್ದೀನ್ ವೃತ್ತದಲ್ಲಿ ನೆರೆ ಉಂಟಾಗಿ ಅಂಗಡಿಗಳು ಜಲಾವೃತಗೊಂಡಿರುವುದು.

ಕರಾವಳಿಯಲ್ಲಿ ಗಾಳಿ ಸಹಿತ ಧಾರಾಕಾರ ಮಳೆಯಿಂದಾಗಿ, ಅನೇಕ ಕಡೆ ಕಡಲ್ಕೊರೆತ ಮುಂದುವರಿದಿದೆ. ಕಡಲ ತಡಿಯಲ್ಲಿರುವ ಅನೇಕ ಮನೆಗಳಿಂದ ಜನರು ಒಳ ಭಾಗಕ್ಕೆ ಸ್ಥಳಾಂತರ ಗೊಂಡಿದ್ದಾರೆ.

ಮಳೆಗಾಲ ತೀವ್ರವಾಗುತ್ತಿದ್ದಂತೆ ಕರಾವಳಿಯಲ್ಲಿ ಕಡಲ ಕೊರೆತವೂ ತೀವ್ರವಾಗುತ್ತಿದೆ. ಪ್ರತಿವರ್ಷವೂ ಕರಾವಳಿ ಜಿಲ್ಲೆಗಳಲ್ಲಿ ಕಡಲ್ಕೊರೆತ ಜ್ವಲಂತ ಸಮಸ್ಯೆಯಾಗಿದ್ದು, ಈ ಬಾರಿ ಮಳೆಗಾಲದ ಆರಂಭದಲ್ಲಿಯೇ ಈ ಸಮಸ್ಯೆ ಆರಂಭಗೊಂಡಿದೆ. ಕುಂದಾಪುರ ತಾಲ್ಲೂಕಿನ ಮರವಂತೆ, ಶಿರೂರು ಪ್ರದೇಶಗಳಲ್ಲಿ ಕಡಲ್ಕೊರೆತ ತೀವ್ರಗೊಂಡಿದ್ದರೆ, ಉಡುಪಿ ತಾಲ್ಲೂಕಿನ ಪೊಲೀಪು ಕೈಪುಂಜಾಲು ಪ್ರದೇಶದಲ್ಲಿ ಈಗಾಗಲೇ ಕೊರೆತ ಆರಂಭಗೊಂಡಿದೆ. ಉಳಿದಂತೆ ಎರ್ಮಾಳ, ಮಟ್ಟು, ಪಡುಕೆರೆಗಳಲ್ಲಿ ಸಮುದ್ರದ ಅಲೆಗಳ ಎತ್ತರ ಹೆಚ್ಚಿದ್ದು, ತನ್ನ ಮಿತಿಯನ್ನು ಬಿಟ್ಟು ಸಮುದ್ರದ ಅಲೆಗಳು ಮೇಲಕ್ಕೆ ಬಂದಿವೆ.



ರೈತರಿಗೆ ನಿರಾಶೆ

ಕೃಷಿ ಕಾರ್ಯಗಳಿಗೆ ತಯಾರಿ ನಡೆಸಿ ಮಳೆಯ ನಿರೀಕ್ಷೆಯಲ್ಲಿದ್ದ ರೈತರು, ಈಗ ಮಳೆ ಸುರಿಯುತ್ತಿದ್ದರೂ ಕೃಷಿ ಕಾರ್ಯ ಮುಂದುವರಿಸಲು ಮೀನ, ಮೇಷ ಎಣಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹೆಚ್ಚಿನೆಡೆ ನಿರಂತರವಾಗ ಮಳೆ ಸುರಿಯುತ್ತಿರುವುದರಿಂದ ತಗ್ಗು ಪ್ರದೇಶದ ಗದ್ದೆಗಳಲ್ಲಿ ನೀರು ತುಂಬಿ ನೆರೆ ಏರಿ, ಕೃಷಿ ಕಾರ್ಯ ವಿಳಂಬ ವಾಗುತ್ತಿದೆ. ಬೆಟ್ಟು (ಎತ್ತರ ಪ್ರದೇಶದ) ಗದ್ದೆಗಳಿಗೆ ಉತ್ತಮವಾಗಿ ಮಳೆ ಸುರಿಯುವುದು ಅಗತ್ಯವಾಗಿದ್ದರೂ ಇದೀಗ ಅತಿಯಾಗುತ್ತಿದೆ. ಧಾರಾಕಾರವಾಗಿ ಮಳೆ ಸುರಿಯುವಾಗ ಉಳುಮೆ ಮಾಡಿದರೆ ನೀರು ಗದ್ದೆಯಿಂದ ತುಂಬಿ ತುಳುಕಿದರೆ ಗೊಬ್ಬರದ ಅಂಶವೆಲ್ಲಾ ನೀರಿನೊಂದಿಗೆ ಹೋಗುತ್ತದೆ. ಇನ್ನು ತಗ್ಗು ಪ್ರದೇಶದಲ್ಲಿ ನಾಟಿಗೆ ಸಿದ್ದತೆ ನಡೆಸಿದರೂ ನೆರೆ ಬಂದರೆ ಎಲ್ಲವೂ ಕೊಚ್ಚಿಕೊಂಡು ಹೋಗುತ್ತದೆ.

ಹಲವಾರು ದಿನಗಳಿಂದ ಸುರಿ ಯುತ್ತಿರುವ ಭೀಕರ ಗಾಳಿ ಮಳೆಯ ಪ್ರಕೋಪದಿಂದಾಗಿ ಮರಗಳು ಧರೆಗೆ ಉರುಳುತ್ತಿರುವುದು ಸಾಮಾನ್ಯವಾಗಿ ಬಿಟ್ಟಿದೆ. ಹೆದ್ದಾರಿಯ ಅಕ್ಕಪಕ್ಕ ಗ್ರಾಮೀಣ ಪ್ರದೇಶಗಳಲ್ಲಿ ಮರಗಳು ಉರುಳಿ ವಾಹನ ಸಂಚಾರ ಅಸ್ತವ್ಯಸ್ತ ವಾಗುವುದು ನಿತ್ಯದ ದೃಶ್ಯವೆನಿಸಿದೆ.

ಮಳೆಗಾಲದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳಿಗೆಲ್ಲಾ ಮಳೆಯನ್ನೇ ದೂರುವುದು ಕೂಡಾ ಸಮಂಜಸವಲ್ಲ. ಸಂಬಂಧಪಟ್ಟ ಇಲಾಖೆಗಳು ಮಳೆಗಾಲದ ಸಮಸ್ಯೆಗಳ ನಿವಾರಣೆಗೆ ಪೂರ್ವ ತಯಾರಿ ನಡೆಸಿದ್ದರೆ ಜನರನ್ನು ಸಂಕಷ್ಟದಿಂದ ಪಾರು ಮಾಡಬಹುದಿತ್ತು.

ಶಾಶ್ವತ ಪರಿಹಾರವಿಲ್ಲ ಮಂತ್ರಿಗಳ ಭರವಸೆಗಳು ಮಾತ್ರ ಇವೆ

ಮಳೆಗಾಲ ಆರಂಭವಾಗುವ ಮೊದಲು ಹಾಗೂ ಅನಂತರ ಮಂತ್ರಿಗಳು ಸಾಕಷ್ಟು ಭರವಸೆಗಳನ್ನು ಕೊಡುತ್ತಾ ಬಂದಿರುತ್ತಾರೆ. ಮಾಡಿರುವ ಕೆಲಸ ಎಲ್ಲವೂ ತಾತ್ಕಾಲಿಕವಾಗಿದ್ದು ಜಾರಿಯಾದ ಹಣದ ದೊಡ್ಡ ಪಾಲು ಅಧಿಕಾರಿಗಳ ಹಾಗೂ ಕಂಟ್ರಾಕ್ಟ್‌ದಾರರ ಜೇಬಿಗೆ ಹೋಗಿವೆ. ಕರಾವಳಿ ಉದ್ದಕ್ಕೂ ಶಾಶ್ವತ ತಡೆಗೋಡೆ ನಿರ್ಮಾಣ, ಕೆರೆ, ತೋಡುಗಳನ್ನು ಅಗಲ ಹಾಗೂ ಆಳಗೊಳಿಸುವ ಕೆಲಸ ಮತ್ತು ನದಿಗಳಲ್ಲಿ ಮಣ್ಣು ದಿಣ್ಣೆಗಳನ್ನು ತೆಗೆದು ಆಳಗೊಳಿಸುವ ಕೆಲಸ ಭರವಸೆ ಜತೆಯಲ್ಲೇ ಆಗಿದ್ದರೆ ಮಳೆಗಾಲದ ಹಲವಾರು ಸಮಸ್ಯೆಗಳಿಗೆ ಪರಿಹಾರ ವಾಗುತ್ತಿತ್ತು. ಅನಾಹುತಗಳು, ಕಷ್ಟ-ನಷ್ಟಗಳು ಕಡಿಮೆಯಾಗುತ್ತಿತ್ತು. ಕೆರೆ, ತೋಡು, ನದಿಗಳನ್ನು ಅಗಲಗೊಳಿಸಿ, ಆಳ ಮಾಡಿದ್ದೇ ಆದಲ್ಲಿ ಮಳೆ ನೀರಿನ ಶೇಖರಣೆಯೂ ಆಗುತ್ತಿತ್ತು. ಕೆಲವು ಪ್ರದೇಶಗಳಲ್ಲಿ ಕಾಲುವೆಗಳನ್ನು ಮಾಡಿದರೆ ಕೃಷಿಗೆ ನೀರು ಉಪಯೋಗ ಮಾಡಿ, ವರ್ಷಕ್ಕೆ 3 ಬೆಳೆ ಬೆಳೆಸುವ ಉತ್ತಮ ಪರಿಸ್ಥಿತಿ ಉಂಟಾಗುತ್ತಿತ್ತು. ಯಾವುದೇ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆ ಬರುತ್ತಿರಲಿಲ್ಲ.

ಅಧಿಕಾರಸ್ಥರು ಪ್ರಾಮಾಣಿಕರಾಗಿದಿದ್ದಲ್ಲಿ ಗಾಳಿ ಮಳೆ, ಕಡಲು ಜನರ ಪಾಲಿಗೆ ಇಷ್ಟು ಭೀಕರವಾಗುತ್ತಿರಲಿಲ್ಲ.

■ ಕೆ. ಶಂಕರ್



ಬಿ.ದಯಾನಂದ್

ದಕ್ಷಿಣ ಕನ್ನಡ ಎಸ್‌ಪಿ ವರ್ಗಾವಣೆ

ಕಳಂಕಿತ ಖಾಕಿಯ ನಿರ್ಗಮನ

ಕೊನೆಗೂ ದಕ್ಷಿಣ ಕನ್ನಡ ಜಿಲ್ಲೆ ಕಂಡ ಅತ್ಯಂತ ವಿವಾದಾಸ್ಪದ ಎಸ್.ಪಿ. ಬಿ.ದಯಾನಂದರ ವರ್ಗಾವಣೆಯಾಗಿದೆ.

ಒಂದು ವರ್ಷ ಎಂಟು ತಿಂಗಳ ಹಿಂದೆ ದಯಾನಂದ ಮಂಗಳೂರಿನ ಎಸ್.ಪಿ.ಯಾಗಿ ನಿಯುಕ್ತಿಗೊಂಡಾಗ ಜನಸಾಮಾನ್ಯರಿಗೆ ಅಪಾರ ನಿರೀಕ್ಷೆ ಇತ್ತು. ಸಂಘ ಪರಿವಾರದ ದಾಂಧಲೆ ದಿನನಿತ್ಯದ ಸಂಗತಿಯಾಗಿದ್ದ ಆ ಸಂದರ್ಭದಲ್ಲಿ ಧರ್ಮಸಿಂಗ್ ಸರ್ಕಾರ ದಯಾನಂದರನ್ನು ಜಿಲ್ಲೆಗೆ ವರ್ಗಾಯಿಸಿತ್ತು.

ಬೆಳಗಾಂನಲ್ಲಿ ಎಸ್.ಪಿ.ಯಾಗಿದ್ದಾಗ ಸಂಘ ಪರಿವಾರದ ಪುಂಡಾಟಿಕೆಗೆ ಕಡಿವಾಣ ಹಾಕಿದ್ದರು. ಮುತಾಲಿಕ್‌ನ್ನು ಹೆಡೆ ಮುರಿಕಟ್ಟಿ ಜೈಲಿಗಟ್ಟಿದ್ದರು. ಅಂತಹ ದಯಾನಂದರು ಸಂಘ ಪರಿವಾರದ ಪ್ರಯೋಗ ಶಾಲೆ ಮಂಗಳೂರಿನಲ್ಲಿ ಆ ಕೆಲಸವನ್ನು ಮುಂದುವರೆಸುತ್ತಾರೆ ಎಂಬ ನಿರೀಕ್ಷೆ ಅಲ್ಪ ಸಂಖ್ಯಾತರು ಮತ್ತು ಜಾತ್ಯಾತೀತರಲ್ಲಿತ್ತು.

ಆರಂಭದಲ್ಲಿ ಸಂಘ ಪರಿವಾರದ ವಿಷಯದಲ್ಲಿ ಬಿಗುವಾಗಿಯೇ ದಯಾನಂದರು ವರ್ತಿಸಿದರು. ಜಾನುವಾರು ವ್ಯಾಪಾರಿಗಳ ಮೇಲೆ, ಮುಸ್ಲಿಂ ಯುವಕರ ಮೇಲೆ, ಹಿಂದೂ ಹುಡುಗಿಯರನ್ನು ಕೆಲಸಕಿಟ್ಟ ಮುಸ್ಲಿಂ ಅಂಗಡಿದಾರರ ಮೇಲೆ ಹಾಡುಹಗಲೇ ಹಲ್ಲೆ ನಡೆಸುತ್ತಿದ್ದ ಭಜರಂಗಿಗಳನ್ನು ನಿರ್ದಾಕ್ಷಿಣ್ಯವಾಗಿ ಕೇಸು ದಾಖಲಿಸಿ ಜೈಲಿಗಟ್ಟಿದರು. ಆ ಮೂಲಕ ಸಂಘ ಪರಿವಾರದ ಕೆಂಗಣ್ಣಿಗೆ ಗುರಿಯಾದರು.

ಆದರೆ ರಾಜ್ಯದಲ್ಲಿ ಜೆಡಿ(ಎಸ್) ಜೊತೆ ಗೂಡಿ ಬಿಜೆಪಿ ಅಧಿಕಾರಕ್ಕೆ ಬಂದ ತಕ್ಷಣ ತನ್ನ ನಿಷ್ಠೆಯನ್ನು ಸಂಘ ಪರಿವಾರಕ್ಕೆ ವರ್ಗಾಯಿಸಿದರು. ಕಸಾಯಿಖಾನೆ ವಿವಾದದಂತಹ ಪ್ರಶ್ನೆಯಲ್ಲಿ ಮುಸ್ಲಿಂ ಸಂಘಟನೆಗಳು, ಡಿವೈಎಫ್ಐ ಮತ್ತಿತರ ಜಾತ್ಯಾತೀತ ಸಂಘಟನೆಗಳು ದಯಾನಂದರನ್ನು ಭೇಟಿಯಾದಾಗ 'ಬದಲಾದ ರಾಜಕೀಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಿ' ಎಂದು ಹೇಳುವ ಮುಖಾಂತರ ತನ್ನ ಬದಲಾದ ನಿಲುವನ್ನು ಬಹಿರಂಗಪಡಿಸಿದ್ದರು.

ಡಿವೈಎಫ್ಐ ರಾಜ್ಯ ಸಮ್ಮೇಳನ ಮಂಗಳೂರಿನಲ್ಲಿ ನಡೆದ ಸಂದರ್ಭದಲ್ಲಿ ಡಿವೈಎಫ್ಐನ ಗೋಡೆಬರಹಗಳಿಗೆ ಭಜರಂಗಿಗಳು ತಾರು ಬಳಿದು ವಿಕೃತಗೊಳಿಸಿದ್ದರು. ಈ ಬಗ್ಗೆ ಎಸ್.ಪಿ. ಯನ್ನು ಕಾಣಲು ಸಿಪಿಐ(ಎಂ) ನಿಯೋಗ ಹೋದ ಸಂದರ್ಭದಲ್ಲಿ ಭಜರಂಗದಳದ ಪರವಾಗಿ ವಕಾಲತ್ತು ವಹಿಸಿ ಮಾತನಾಡಿದ್ದರು.

ಕಳೆದ ವರ್ಷದ ಕೊನೆಯಲ್ಲಿ ನಡೆದ ಬಜ್ಪೆ ಬಪ್ಪಬ್ಯಾರಿ ಟ್ಯಾಬ್ಲೋ ಪ್ರಕರಣ, ದನ ಸಾಗಾಟದ ವಾಹನ ಅಪಘಾತದ ನೆಪವಾಗಿಟ್ಟು ಭಜರಂಗದಳ ಕರೆ ನೀಡಿದ ಜಿಲ್ಲಾ ಬಂದ್, ಮಂಗಳೂರನ್ನು ನಡುಗಿಸಿದ ಕೋಮು ಗಲಭೆ, ಮಂಗಳೂರು ನಿರಂತರ ಒಂದು ವಾರ ಕರ್ಫ್ಯೂನಲ್ಲಿ ನಲುಗುವಂತಾಗಲು ಎಸ್.ಪಿ. ದಯಾನಂದರ ಪಕ್ಷಪಾತ ನೀತಿಯೇ ಕಾರಣವಾಗಿತ್ತು.

ಬೆಲೆ ಏರಿಕೆ, ಪಡಿತರ ಕಾರ್ಡ್‌ಗಾಗಿ, ಬೀಡಿ ಕಾರ್ಮಿಕರ ಚಳುವಳಿಗೆ ಸಿಪಿಐ(ಎಂ), ಸಿಐಟಿಯು, ಡಿವೈಎಫ್ಐ ನಂತಹ ಸಂಘಟನೆಗಳು ಕರೆ ನೀಡಿದಾಗ ಶಾಂತಿಯುತ ಮೆರವಣಿಗೆಗೆ ನಿರಾಕರಿಸಿದರು.

ಕೋಮು ಗಲಭೆಯ ಸಂದರ್ಭದಲ್ಲಿ ಉಳ್ಳಾಲ ಪ್ರದೇಶದಲ್ಲಿ ದಯಾನಂದರ ಪೊಲೀಸರು ಮುಸ್ಲಿಮರ ಮನೆ ನುಗ್ಗಿ ಅಮಾನುಷ ದೌರ್ಜನ್ಯವೆಸಗಿದ್ದರು. ಆ ಸಂದರ್ಭದಲ್ಲಿಯೇ ದಯಾನಂದರ ವರ್ಗಾವಣೆಗೆ ಜಿಲ್ಲೆಯಾದ್ಯಂತ ಕೂಗೆದ್ದಿತು. ಗೃಹ ಸಚಿವರು ಎಸ್.ಪಿ.ಯ ವರ್ಗಾವಣೆಯ ಪರವಾಗಿದ್ದರು. ಸಚಿವ ನಾಗರಾಜಶೆಟ್ಟಿ ಆಶೀರ್ವಾದದಿಂದ ಜಿಲ್ಲೆಯಲ್ಲೇ ಉಳಿದರು. ಮಂಗಳೂರು ಗಲಭೆಗೆ ಪ್ರತಿಕ್ರಿಯೆ ಅನ್ನುವ ರೀತಿಯಲ್ಲಿ ಬಿಜೆಪಿ ಮುಖವಾಡ ಮುಲ್ಕಿಯ ಭಜರಂಗಿ ಸುಖಾನಂದನನ್ನು ಮುಸ್ಲಿಂ ಮತೀಯಶಕ್ತಿಗಳು ಹತ್ಯೆ ಮಾಡಿದರು. ಆ ಸಂದರ್ಭದಲ್ಲಿ ಮಂಗಳೂರಿನಿಂದ ಮುಲ್ಕಿಯವರೆಗೆ 25 ಕಿ.ಮೀ. ಶವಯಾತ್ರೆಗೆ ಗಲಭೆ ನಡೆಯುವುದು ಖಂಡಿತ ಎಂದು ಗೊತ್ತಿದ್ದರೂ ನಾಗರಾಜಶೆಟ್ಟಿಯರ ಒತ್ತಡಕ್ಕೆ ಮಣಿದು ಅವಕಾಶ ನೀಡಿದರು.

ಶವ ಮೆರವಣಿಗೆ ಮುಲ್ಕಿಯಲ್ಲಿ ದಾಂಧಲೆಗಿಳಿದು, ಮುಸ್ಲಿಮರ ಅಂಗಡಿ ಮನೆ, ಮಸೀದಿಗಳಿಗೆ ಬೆಂಕಿ ಹಚ್ಚ ತೊಡಗಿತು. ಇನ್ನೇನು ಗುಂಪು ಪೊಲೀಸ್ ಠಾಣೆಗೆ ಬೆಂಕಿ ಹಚ್ಚುತ್ತದೆ ಎನ್ನುವ ಸಂದರ್ಭದಲ್ಲಿ ಗೋಲಿಬಾರ್ ನಡೆಸಿದಾಗ ಇಬ್ಬರು ಸತ್ತರು. ಅವರು ಬಜರಂಗದಳದವರು ಎನ್ನಲಾಯಿತು. ಆಗ ಸರ್ಕಾರವೂ ಬಿಗಿಯಾದ ನಿರ್ದೇಶನ ನೀಡಿತ್ತು. ಇದು ಎಸ್.ಪಿ. ವೈಯಕ್ತಿಕ ದ್ವೇಷದಿಂದ ತನ್ನ ಅಂಗರಕ್ಷಕರ ಮುಖಾಂತರ ನೇರ ಗುಂಡಿಟ್ಟು ಮಾಡಿದ ಕೊಲೆ ಎಂದು ಸುದ್ದಿಯಾಯಿತು. ಈ ಗಲಭೆ ಇಡೀ ಮಂಗಳೂರು ಪರಿಸರವನ್ನು ತಲ್ಲಣಗೊಳಿಸಿದ್ದ ಗಲಭೆ. ನಂತರ ಹತ್ತಿರದಲ್ಲೇ ಘಟಿಸಿತ್ತು. ಮತ್ತೆ ಅಂತಹ ಘಟನೆ ಮರುಕಳಿಸಿದರೆ ಸರ್ಕಾರಕ್ಕೆ ಮಸಿ ಹತ್ತಿದಂತೆ ಎಂದು ಬಗೆದಿದ್ದರು. ಆ ಮುಖಾಂತರ ಸಂಘ ಪರಿವಾರ ಮತ್ತೊಮ್ಮೆ ದಯಾನಂದ ವಿರುದ್ಧ ಕುದಿಯತೊಡಗಿತು.

ಸುಖಾನಂದ ಕೊಲೆ ಆರೋಪಿಗಳನ್ನು ಬೆನ್ನು ಹತ್ತಿದ ದಯಾನಂದ ಕೊಲೆಯಲ್ಲಿ ಭಾಗವಹಿಸಿದ್ದ ಕುಖ್ಯಾತ ರೌಡಿ ಮುಲ್ಕಿ ರಫೀಕ್ ಮತ್ತಾತನ ಸಹಚರ ಅತೀಕ್‌ನನ್ನು ಎನ್‌ಕೌಂಟರ್ ಹೆಸರಿನಲ್ಲಿ ಹತ್ಯೆ ಮಾಡಿದರು. ಆ ಮುಖಾಂತರ ಸಂಘ ಪರಿವಾರವನ್ನು ತೃಪ್ತಿಪಡಿಸಲು ಯತ್ನಿಸಿದರು. ಇದು ನಾಗರಾಜಶೆಟ್ಟರ ನೇರ ಆಣತಿಯಂತೆ ನಡೆದ ಕೊಲೆ ಅನ್ನುವುದು ಮಂಗಳೂರಿನಲ್ಲಿ ಎಲ್ಲರಿಗೂ ಗೊತ್ತಿದ್ದ ರಹಸ್ಯ. ರಫೀಕ್‌ನನ್ನು ಪೊಳಲಿ ಅನಂತು, ಸುಖಾನಂದರ ಕೊಲೆಗೆ ಆಯುಧದಂತೆ ಬಳಸಿದ್ದ. ತೆರೆಯಮರೆಯ ಶಕ್ತಿಗಳಿಗೆ ತಮ್ಮರಹಸ್ಯಗೊತ್ತಿದ್ದ ಮುಲ್ಕಿ ರಫೀಕ್ ಬದುಕುವುದು ಬೇಡವಾಗಿತ್ತು. ಮುಸ್ಲಿಂ ಉದ್ಯಮಿಗಳು ರಫೀಕ್‌ನ ಹಪ್ತಾ ವಸೂಲಿಯ ಕಿರಿಕಿರಿಯಿಂದ ಬೇಸತ್ತಿದ್ದರು. ವರುಷಗಳ ಹಿಂದೆ ಮಾಂಸ ವ್ಯಾಪಾರಸ್ಥ ಮುಸ್ಲಿಂ ಸೋದರನನ್ನು ಹತ್ಯೆಗೈದ ಪ್ರಕರಣದಿಂದಾಗಿ ಸಾಮಾನ್ಯ ಮುಸ್ಲಿಮರಿಗೆ ರಫೀಕ್‌ನ ಬಗ್ಗೆ ಅಸಮಾಧಾನವಿತ್ತು. ಒಂದೇ ಕಲ್ಲಿನಲ್ಲಿ ನಾಲ್ಕು ಮಾವಿನಕಾಯಿ ಉದುರಿಸಿದ ದಯಾನಂದರು ಮಾಧ್ಯಮಗಳಿಂದ ಶಹಬ್ಬಾಸ್‌ಗಿರಿ ಪಡೆದು ಮಂಗಳೂರಿನಲ್ಲಿ ನೆಲೆಗಟ್ಟಿಯಾಗಿಸಿ ಕೊಂಡರು. ನಂತರ ನಡೆದ ಹಿಂದೂ ಸಮಾಜೋತ್ಸವವನ್ನು



ಸಂಘ ಪರಿವಾರದ ಕೊಳ್ಳಿಗೆ ಜಿಲ್ಲಾದ್ಯಂತ ಕುಮ್ಮಕ್ಕು ಕೊಡಿದಾಗ

ಪುಟ 6 ಕ್ಕೆ

ಹೈದ್ರಾಬಾದ್ ಕರ್ನಾಟಕದಲ್ಲಿ ಉನ್ನತ ಶಿಕ್ಷಣದ ಖಾಸಗೀಕರಣ

ತತ್ತರಿಸಿದ ವಿದ್ಯಾರ್ಥಿ-ಶಿಕ್ಷಕರು


ಗುಲ್ಬರ್ಗಾ ವಿಶ್ವವಿದ್ಯಾಲಯ

ಭಾರತದಲ್ಲಿನ ಉನ್ನತ ಶಿಕ್ಷಣವು ಇಂದು ತೀವ್ರವಾಗಿ ವ್ಯಾಪಾರೀಕರಣಗೊಳ್ಳುತ್ತಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಸ್ವಾತಂತ್ರ್ಯದ ನಂತರ ದೇಶವನ್ನಾಳುತ್ತಿರುವ ವಿವಿಧ ಬಂಡವಾಳಶಾಹಿ ಸರ್ಕಾರಗಳು ಅನುಸರಿಸುತ್ತಿರುವ ಸಾಮಾಜಿಕ ಆರ್ಥಿಕ ನೀತಿಗಳು ಅದಕ್ಕೆ ಕಾರಣವಾಗಿದೆ. ಅದರಲ್ಲೂ ಎಂಬತ್ತರ ಮಧ್ಯದಿಂದ ಪ್ರಾರಂಭವಾದ ಜಾಗತೀಕರಣದ ಪ್ರಕ್ರಿಯೆ, ಆಳುವ ವರ್ಗದ ಸೈದ್ಧಾಂತಿಕ ನಿಲುವು, ನ್ಯಾಯಾಧಿಕರಣದ ಅತಿ ಕ್ರಿಯಾಶೀಲತೆ, ದೊಡ್ಡ ಉದ್ಯಮದ ಮನೆತನಗಳ (Business houses) ಸ್ವಂತ ಹಿತಾಸಕ್ತಿ, ನಮ್ಮ ಸರ್ಕಾರಗಳು ಉನ್ನತ ಶಿಕ್ಷಣಕ್ಕೆ ನೀಡುತ್ತಿದ್ದ ಅನುದಾನದ ನಿರಂತರ ಕಡಿತ ಮತ್ತು ಅದರಲ್ಲೂ ಖಾಸಗಿ ಹಾಗೂ ವಿದೇಶಿ ಖಾಸಗಿ ವಲಯದ ಬಗ್ಗೆ ನಮ್ಮ ಮಧ್ಯಮ ವರ್ಗ ಹಾಗೂ ಹೊಸ ಶ್ರೀಮಂತ ವರ್ಗದಲ್ಲಿ ಹುಟ್ಟಿದ ಆಕರ್ಷಣೆಗಳೆಲ್ಲವೂ ಉನ್ನತ ಶಿಕ್ಷಣದ ವ್ಯಾಪಾರೀಕರಣಕ್ಕೆ ದಾರಿ ಮಾಡಿವೆ.

1990ರ ದಶಕವು ಭಾರತದಲ್ಲಿ ಜಾಗತೀಕರಣದ ನೀತಿಗಳ ಜಾರಿಯ ಪ್ರಾರಂಭ. ಈ ಅವಧಿಯಲ್ಲಿ ಉನ್ನತ ಶಿಕ್ಷಣವು ಭಾರಿ ಪ್ರಮಾಣದ ಅನುದಾನ ಕಡಿತಕ್ಕೊಳಗಾಯಿತು. ಕೆಲ ವಿಶ್ವ ವಿದ್ಯಾಲಯಗಳಲ್ಲಿ ನೌಕರರ ತಿಂಗಳ ಸಂಬಳ ನೀಡುವುದು ಕಷ್ಟವಾಯಿತು. ಪುನ್ನಯ್ಯ ಸಮಿತಿಯ ವರದಿಯು, ಶೇ 25 ಮರುಕಳಿಸುವ ಖರ್ಚುಗಳನ್ನು ವಿದ್ಯಾರ್ಥಿಗಳಿಂದ ಪಡೆಯುವಂತೆ ಹೇಳಿತು.

1997ರಲ್ಲಿ ಕೇಂದ್ರದ ಹಣಕಾಸು ಸಚಿವಾಲಯದ ಚರ್ಚಾ ದಸ್ತಾವೇಜುನಲ್ಲಿ, ಶಿಕ್ಷಣವು ಒಂದು ಅನುತ್ಪಾದಕ (Non-merit good) ಎಂದು ವಿಶ್ಲೇಷಿಸಿತು. ಅಂದರೆ ಶಿಕ್ಷಣಕ್ಕೆ ಸಬ್ಸಿಡಿ ನೀಡುವುದು ಉಚಿತವಲ್ಲ ಎಂದು ಹೇಳಿತು.

ಸ್ವಾತಂತ್ರ್ಯ ಸಿಕ್ಕು 60 ವರ್ಷ ಕಳೆದರೂ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯಬೇಕಾದ 17 ರಿಂದ 23 ವರ್ಷದ ಯುವ ಜನ ಸಂಖ್ಯೆ ಕೇವಲ ಶೇ.7 ಇದೆ. ಕರ್ನಾಟಕದ ಹಿಂದುಳಿದ ಹೈದ್ರಾಬಾದ್ ಕರ್ನಾಟಕದಲ್ಲಿರುವ ಗುಲ್ಬರ್ಗಾ ವಿಶ್ವ ವಿದ್ಯಾಲಯದ ಚಿತ್ರಣವನ್ನು ನೋಡೋಣ.

ಇಡೀ ಹೈದ್ರಾಬಾದ್ ಕರ್ನಾಟಕದಲ್ಲಿ ಮೊಟ್ಟ ಮೊದಲ ಕಾಲೇಜು ಸ್ಥಾಪನೆಯಾದದ್ದು ಸರ್ಕಾರಿ ಪದವಿ ಕಾಲೇಜು 1935ರಲ್ಲಿ. ಆನಂತರ 1945ರಲ್ಲಿ ಬಳ್ಳಾರಿಯಲ್ಲಿ ವೀರಶೈವ ಕಾಲೇಜು ತೆರೆಯಿತು. ನಂತರ 1951 ರಿಂದ 1960 ಅವಧಿಯಲ್ಲಿ 6 ಕಾಲೇಜುಗಳ ಪ್ರಾರಂಭವಾದವು. ಅದರಲ್ಲಿ ಒಂದೇ ಒಂದು ಸರ್ಕಾರಿ ಕಾಲೇಜು ಹೀಗೆ ಒಟ್ಟು 1930 ರಿಂದ ಹಿಡಿದು 1990 ರವರೆಗೆ ಅಂದರೆ ಒಟ್ಟು 60 ವರ್ಷಗಳಲ್ಲಿ 31 ಪದವಿ ಕಾಲೇಜುಗಳು 5 ಬಿ.ಎಡ್., ಕಾಲೇಜುಗಳು ಮತ್ತು ಕಾನೂನು ಕಾಲೇಜುಗಳು ಪ್ರಾರಂಭವಾದವು. ಆದರೆ 1990 ದಶಕದ ಪ್ರಾರಂಭದಲ್ಲಿ ಭಾರತದಲ್ಲಿ ಜಾಗರೀಕರಣ ಪಾದಾರ್ಪಣೆ ಮಾಡಿದ ನಂತರ ಅಂದರೆ 1991 ರಿಂದ 2006 ರವರೆಗೆ ಕೇವಲ 15 ವರ್ಷಗಳಲ್ಲಿ 89 ಸಾಮಾನ್ಯ ಪದವಿ ಕಾಲೇಜುಗಳು 15 ಬಿ.ಎಡ್/ಬಿಪಿಎಡ್ ಕಾಲೇಜುಗಳು, 24 ಮ್ಯಾನೇಜ್‌ಮೆಂಟ್ ಕಾಲೇಜುಗಳು 6 ಕಾನೂನು ಕಾಲೇಜುಗಳು ಪ್ರಾರಂಭವಾದವು; ಈ 194 ಕಾಲೇಜುಗಳ ಪೈಕಿ 182 ಕಾಲೇಜುಗಳು ಖಾಸಗಿ ಕಾಲೇಜುಗಳಾಗಿದ್ದು, ಹಣಕಾಸು ನೆರವಿನ (Self Financing) ಕಾಲೇಜುಗಳಾಗಿವೆ. ಒಟ್ಟು ಇಲ್ಲಿರುವ 248 ಕಾಲೇಜುಗಳಲ್ಲಿ ಕೇವಲ 25 ಸರ್ಕಾರಿ ಕಾಲೇಜುಗಳಿದ್ದು, 36 ಸರ್ಕಾರಿ ಅನುದಾನಿತ ಖಾಸಗಿ ಕಾಲೇಜು ಗಳಿವೆ. ಅಂದರೆ ಶೇ.75 ಕಾಲೇಜುಗಳು ಈ ಭಾಗದ ಬಡವರು ಮತ್ತು ದೀನ ದಲಿತರಿಗೆ ಶಾಪವಾಗಿ ಪರಿಣಮಿಸಿವೆ.

ಬಿಎಡ್/ಬಿಪಿಎಡ್/ಬಿಬಿಎಂ ಕಾಲೇಜುಗಳ ವಿತಂಡವಾದ

ಇಲ್ಲಿರುವ ಒಟ್ಟು 75 ಬಿಎಡ್, 7 ಬಿಡಿಎಡ್ ಮತ್ತು 24 ಬಿಬಿಎಂ ಕಾಲೇಜುಗಳು ಹೈದ್ರಾಬಾದ್ ಕರ್ನಾಟಕದ ಬಡರೈತ, ಕೃಷಿ ಕಾರ್ಮಿಕ, ಮಧ್ಯಮವರ್ಗದ ಜನರ ರಕ್ತ ಹೀರುವ ಜಿಗಣೆಗಳಾಗಿ ಪರಿಣಮಿಸಿವೆ. ಎನ್‌ಸಿಟಿಯಿ ಹಾಗೂ ವಿಶ್ವವಿದ್ಯಾಲಯದ ಕಾನೂನಿನಂತೆ ಪ್ರತಿ ಕಾಲೇಜಿನಲ್ಲಿ ಯೋಗ್ಯ ಶೈಕ್ಷಣಿಕ ಅರ್ಹತೆಯುಳ್ಳ ಎಂ.ಎ., ಎಎಡ್, ಎಂ.ಎ, ಎಂ.ಪಿ.ಎಡ್ ಮತ್ತು ಎಂಬಿಎ ಅಭ್ಯರ್ಥಿಗಳು ಶಿಕ್ಷರಾಗಿರಬೇಕೆಂದಿದೆ. ಈ ನೂರಕ್ಕೆ ಮೇಲ್ಪಟ್ಟಿರುವ ಕಾಲೇಜುಗಳಲ್ಲಿ ಅಂತಹ ಒಬ್ಬನೇ ಶಿಕ್ಷಕನಿಲ್ಲ. ಕಾಲೇಜಿನಲ್ಲಿ ಪ್ರಯೋಗಾಲಯಗಳಿರಬೇಕೆಂದಿದೆ. ಯಾವುದೇ ವಿದ್ಯಾರ್ಥಿ ಅಂತಹ ಪ್ರಯೋಗಾಲಯ ಕಂಡಿಲ್ಲ. ಸುಸಜ್ಜಿತ ಗ್ರಂಥಾಲಯವಿರಬೇಕೆಂದಿದೆ, ಅದಂತೂ ಇಲ್ಲವೇ ಇಲ್ಲ.

ಬದಲಾಗಿ ಇಲ್ಲಿ ಶಿಕ್ಷಕರ ಬಾಳು, ಗುಲಾಮಗಿರಿಯ ಬಾಳಾಗಿದೆ. ಅವರಿಗೆ ತಿಂಗಳಿಗೆ 3 ರಿಂದ 4 ಸಾವಿರ ರೂಪಾಯಿ ಮಾತ್ರ ಕೊಡಲಾಗುತ್ತದೆ. ನಿಯಮದ ಪ್ರಕಾರ ಅವರಿಗೆ ಖಾಯಂ ಶಿಕ್ಷಕರಿಗೆ ನೀಡುವ ವೇತನ ಸಿಗಬೇಕು. ಆದರೆ ಖಾಯಂ ಶಿಕ್ಷಕರ ವೇತನಕ್ಕೆ ಸಹಿ ಹಾಕಿಸಿಕೊಂಡು, ಕೊಡುವುದು ಮಾತ್ರ ಪುಡಿ ಹಾಸು. ವಿದ್ಯಾರ್ಥಿಯೊಬ್ಬನಿಂದ 50 ಸಾವಿರದಿಂದ 1 ಲಕ್ಷದವರೆಗೂ ಹಣ ವಸೂಲಿಯಂತೂ ಬಿಟ್ಟಿದ್ದಲ್ಲ. ಆ ಹಣ ಏನಾಗುತ್ತಿದೆ?

ವರದಿ : **ಗಂಗಾ**

ತಪಾಸಣಾ ತಂಡದ ಮೇಲೆ ಗುಲಾಬಿ ಹೂಗಳ ಸುರಿಮಳೆ !

ಈ ಖದೀಮ ಕಾಲೇಜುಗಳ ಮೇಲೆ ಸರ್ಕಾರ ಅಥವಾ ವಿಶ್ವವಿದ್ಯಾಲಯದ ಹಿಡಿತವೇನೂ ಇಲ್ಲವೇ? ಇದೆ. ವರ್ಷಕ್ಕೊಮ್ಮೆ ಸೇರ್ಪಡೆ ಸಮಿತಿ (ಅಫಿಲಿಯೇಷನ್ ಕಮಿಟಿ) ಪ್ರತಿ ಕಾಲೇಜಿಗೆ ಹೋಗುತ್ತದೆ. ವಿವಿಯ ತಪಾಸಣ ಸಮಿತಿಯಲ್ಲಿ 'ಖ್ಯಾತ' ಪ್ರಾಧ್ಯಾಪಕರು ಸಿಂಡಿಕೇಟ್ ಸದಸ್ಯರು ಇರುತ್ತಾರೆ. ಇವರು ಕಾಲೇಜಿಗೆ ಕಾಲಿಡುವುದಕ್ಕೆ ಮುಂಚೆ, ಗೇಟಿನಿಂದಲೇ, ಮಹಾರಾಜರಿಗೆ ನೀಡುವ ಸ್ವಾಗತವಿರುತ್ತದೆ. ದಾರಿಯ ಎರಡೂ ಬದಿಗೆ 50-50 ಹುಡುಗಿಯರನ್ನು ನಿಲ್ಲಿಸಿ ಅವರ ಮೇಲೆ ಗುಲಾಬಿ ಹೂ ಮಳೆ ಗರೆಯಲಾಗುತ್ತದೆ. ಪ್ರಿನ್ಸಿಪಲ್ ಛೇಂಬರ್‌ಗೆ ಹೋದ ತಕ್ಷಣ ಯಥೇಚ್ಛವಾಗಿ ಗೋಡಂಬಿ ಇನ್ನಿತರ ಒಣ ಹಣ್ಣುಗಳ ನಾಷ್ಟ ಮತ್ತು ಥಮ್ಸ್ ಅಫ್ ನಂತರ ಕಾಲೇಜಿನ ದಸ್ತಾವೇಜುಗಳ ಕೆಲ ಪುಟ ತಿರುವುದು. ತಕ್ಷಣವೇ ಅವರನ್ನು ಊಟಕ್ಕೆಂದು ಐಷಾರಾಮಿ ಹೋಟೇಲ್‌ನಲ್ಲಿ ಒಗೆದು ಸಮಿತಿ ಸದಸ್ಯರು ಬೇಹುಶ್ ಆಗುವವರೆಗೂ ಕಾಲೇಜಿನವರು ನೋಡಿಕೊಳ್ಳುತ್ತಾರೆ. ಅವರು ಮಾರನೇ ದಿನ ಬೆಳಿಗ್ಗೆ ಹುಷಾರಾದ ಮೇಲೆ, ನಾಷ್ಟಾ ತಿನ್ನಿಸಿ, ಪ್ರತಿಯೊಬ್ಬರಿಗೂ ಪಾಕೆಟ್ ಕೊಟ್ಟು ಬೀಳ್ಕೊಡುತ್ತಾರೆ. (ಇದೆಲ್ಲಾ ಖರ್ಚನ್ನು ಕಾಲೇಜಿನ ವಿದ್ಯಾರ್ಥಿಗಳಿಂದ ಮ್ಯಾನೇಜ್‌ಮೆಂಟಿನವರು ಮೊದಲೇ ವಸೂಲಿ ಮಾಡಿರುತ್ತಾರೆ.) ಔದ್ಯೋಗಿಕವಾಗಿ ಹಿಂದುಳಿದಿರುವ ಗುಲ್ಬರ್ಗಾದಲ್ಲಿ ಎಲ್ಲ ಬಂಡವಾಳಶಾಹಿ ಪಕ್ಷಗಳ ಉನ್ನತ ರಾಜಕಾರಣಿಯಿಂದ ಹಿಡಿದು ಛೋಟಾ ರಾಜಕಾರಣಗಳಿಗೆ ಬಿಎಡ್/ಬಿಪಿಡ್/ಬಿಬಿಎಂ ಕಾಲೇಜುಗಳು, ಬಂಡವಾಳ ರಹಿತ, ಹಣ ಸಂಪಾದನೆಯ ಕಾರ್ಖಾನೆಗಳಾಗಿವೆ.

ಹಿಂದುಳಿದ ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ದಿನ ಬೆಳಗೆದ್ದರೆ ವಿಧಾನ ಸೌಧದಿಂದ ಹಿಡಿದು ಗ್ರಾಮ ಪಂಚಾಯಿತಿ ಗಳವರೆಗೂ ಬೊಗಳೆ ಹೊಡೆಯುತ್ತಿರುವವರು, ಇಲ್ಲಿನ ಉನ್ನತ ಶಿಕ್ಷಣದಲ್ಲಿ ನಡೆಯುತ್ತಿರುವ ಹಗಲು ದರೋಡೆ ತಡೆಯಲು ರಾಜ್ಯ ಸರ್ಕಾರ ವತಿಯಿಂದ ಹೆಚ್ಚಿನ ಸರ್ಕಾರಿ ಕಾಲೇಜುಗಳನ್ನು ತೆರೆಯಬೇಕು. ಮೆಡಿಕಲ್ ಕಾಲೇಜಿನಿಂದ ಕೇವಲ ಶ್ರೀಮಂತರಿಗೆ ಮತ್ತೆ ಲಾಭ, ಈ ಬಿಎಡ್/ಬಿಪಿಎಡ್/ಬಿಬಿಎಂ ನಲ್ಲಿ ಕಲಿಯುತ್ತಿರುವ ಬಡ ರೈತರ, ಕೃಷಿಕೂಲಿಕಾರರ, ಮಧ್ಯಮ ವರ್ಗದವರ ಮಕ್ಕಳಿಗೆ ನ್ಯಾಯ ದೊರೆಯಬೇಕಾದರೆ ಈ ರಕ್ಕ ಕಾಲೇಜುಗಳನ್ನು ಮಟ್ಟ ಹಾಕಿ, ನಿಜವಾಗಿಯು ಇಲ್ಲಿನ ಶ್ರೀಸಾಮಾನ್ಯನಿಗೆ ನ್ಯಾಯ ದೊರೆಯಲು ಸರ್ಕಾರ ಚಿಂತನೆ ನಡೆಸಿ ಕಾರ್ಯಾಚರಣೆ ಮಾಡಿದರೆ, ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿಯ ಒಂದು ಮುಖ್ಯ ಜನಪರ ಕೆಲಸ ಆದಂತಾಗುತ್ತದೆ.

ಎಸ್‌ಪಿ ವರ್ಗಾವಣೆ....

ಪುಟ 5 ರಿಂದ

ಯಶಸ್ವಿಗೊಳಿಸಲು ಎಸ್.ಪಿ. ಟೊಂಕ ಕಟ್ಟಿ ಕೆಲಸ ಮಾಡಿದರು. ಸಮಾಜೋತ್ಸವದ ಹಿಂದಿನ ರಾಜಕೀಯವನ್ನು ಜಿಲ್ಲೆಯ ಪ್ರಭಾವಿ ಪತ್ರಿಕೆ ಕರಾವಳಿ ಅಲೆ ಅನಾವರಣಗೊಳಿಸಿತ್ತು. ಸಹಿಸಲಾಗದ ಭಜರಂಗಿಗಳು ಕರಾವಳಿ ಅಲೆಯ ಕಛೇರಿಯನ್ನು ಹಾಡುಹಗಲೇ ಧ್ವಂಸಗೊಳಿಸಿದರು. ತನ್ನ ವಿರುದ್ಧ ನಿರಂತರ ವರದಿ ಪ್ರಕಟಿಸುತ್ತಿದ್ದ ಕರಾವಳಿ ಅಲೆಯ ಬಿ.ವಿ.ಸೀತಾರಾಮರ ವಿರುದ್ಧ ಕತ್ತಿ ಮಸೆಯುತ್ತಿದ್ದ ದಯಾನಂದ ಆರೋಪಿಗಳನ್ನು ಬಂಧಿಸದೇ ರಕ್ಷಿಸಿದರು.

ತನ್ನ ವಿರುದ್ಧ ಕರಾವಳಿ ಅಲೆ ಮತ್ತೆ ಬರೆಯತೊಡಗಿದಾಗ ಜೈನ ಮುನಿಗಳ ಪ್ರಕರಣವನ್ನು ನೆಪವಾಗಿಟ್ಟುಕೊಂಡು ಸಂಘ ಪರಿವಾರ, ಧಾರ್ಮಿಕ ಹಿತಾಸಕ್ತಿಗಳ ಜೊತೆಗೂಡಿದ ಎಸ್.ಪಿ. ಬಿ.ವಿ.ಸೀತಾರಾಂ ಮತ್ತು ಅವರ ಪತ್ನಿ ರೋಹಿಣಿಯನ್ನು ಮಧ್ಯರಾತ್ರಿ ಬಂಧಿಸಿ ಜೈಲಿಗಟ್ಟಿದರು. ಪತ್ರಿಕೆಯನ್ನು ನಿಲ್ಲಿಸುವ ಪ್ರಯತ್ನ ಮಾಡಿದರು. ರಾಜ್ಯಾದ್ಯಂತ ಸಿಪಿಐ(ಎಂ) ಡಿವೈಎಫ್‌ಐ ಮತ್ತು ಪ್ರಗತಿಪರ ಸಂಘಟನೆಗೆ ಪ್ರತಿಭಟನೆಯನ್ನು ಈ ಪ್ರಕರಣದಲ್ಲಿ ದಯಾನಂದರು ಎದುರಿಸಬೇಕಾಯಿತು.

ಕರಾವಳಿ ಅಲೆ ಪ್ರಕರಣ, ಎನ್‌ಕೌಂಟರ್, ಗೋಲಿಬಾರ್ ಪ್ರಕರಣದಲ್ಲಿ ಮಾನವಹಕ್ಕು ಆಯೋಗದ ನೋಟೀಸು ಪಡೆದರು. ಕೋಮುಗಲಭೆಯ ಸಂದರ್ಭದಲ್ಲಿ ವೈಫಲ್ಯಕ್ಕಾಗಿ ಅಲ್ಪಸಂಖ್ಯಾತ ಆಯೋಗದಿಂದ ತರಾಟೆಗೊಳಗಾದರು. ಇದು ಎಸ್.ಪಿ.ಯನ್ನು ಜಿಲ್ಲೆಯಲ್ಲಿ ವಿವಾದಾಸ್ಪದರನ್ನಾಗಿಸಿತು. ಈ ಪ್ರಕರಣ ಕರಾವಳಿ ಅಲೆಯಲ್ಲಿ ಮುಖಪುಟ ಸುದ್ದಿಯಾಗಿ ಪ್ರಕಟವಾಗತೊಡಗಿತು. ಐಜಿಪಿ ಸತ್ಯನಾರಾಯಣ ರೊಂದಿಗಿನ ಸಂಬಂಧವೂ ಹಳಸಿತು. ಈ ಎಲ್ಲಾ ಹಿನ್ನೆಲೆಯಲ್ಲಿ ದಯಾನಂದರನ್ನು ಇಂತಹ ಕುಖ್ಯಾತಿಯಿಂದ ಪಾರಾಗಲು ಸರ್ಕಾರ ಮೇ ತಿಂಗಳ ಆರಂಭದಲ್ಲಿ ಜಿಲ್ಲೆಯಿಂದ ವರ್ಗಾಯಿಸಿತು.

ಆದರೆ ಉಳ್ಳಾಲದಲ್ಲಿ ಚುನಾವಣೆ ಘೋಷಣೆಯಾದ ಕಾರಣ ಎಸ್.ಪಿ. ಮತ್ತೆ ಜಿಲ್ಲೆಯಲ್ಲೇ ಉಳಿದರು. ಅಂತೂ ಚುನಾವಣೆ ಮುಗಿದು ಈಗ ಕೋಲಾರಕ್ಕೆ ವರ್ಗಾವಣೆಯಾಗಿದ್ದಾರೆ.

ಜಿಲ್ಲೆಗೆ ಬರುವಾಗ ಅಪಾರ ನಿರೀಕ್ಷೆಯನ್ನು ಮೂಡಿಸಿ ಅತೀ ಹೆಚ್ಚು ವಿವಾದಕ್ಕೆ ಒಳಗಾಗಿ ಪೀಡೆ ತೊಲಗಿತು ಅನ್ನುವ ರೀತಿಯಲ್ಲಿ ವರ್ಗಾವಣೆಯಾಗಿದ್ದಾರೆ. ಜನ ಸಾಮಾನ್ಯರು, ಅಲ್ಪಸಂಖ್ಯಾತರು ನಿಟ್ಟುಸಿರು ಬಿಟ್ಟಿದ್ದಾರೆ.

ಈಗ ಉಡುಪಿಯಲ್ಲಿ ಎಎಸ್‌ಪಿ ಯಾಗಿರುವ ಯುವ ಅಧಿಕಾರಿ ಸತೀಶ್‌ಕುಮಾರ್ ಜಿಲ್ಲೆಗೆ ಆಗಮಿಸಿದ್ದಾರೆ. ಜನರಿಗೆ ಇವರ ಮೇಲೆ ಹೆಚ್ಚಿನ ನಿರೀಕ್ಷೆಯೇ ಇದೆ. ಆದರೆ ಇವರೂ ಎಸ್.ಪಿ. ದಯಾನಂದರಂತೆ ಸಚಿವ ನಾಗರಾಜ ಶೆಟ್ಟಿ ಮತ್ತು ಆರ್‌ಎಸ್‌ಎಸ್ ತಾಳಕ್ಕೆ ಕುಣಿಯುವರೇ ಕುಣಿಸುವರೇ ನೋಡಬೇಕು. ಅವಿಭಜಿತ ದಕ್ಷಿಣ ಕನ್ನಡ ಭಾಗವಾಗಿದ್ದ ಉಡುಪಿಯಲ್ಲಿದ್ದ ಸತೀಶ್ ಕುಮಾರ್ ಅವರಿಗೆ ಜಿಲ್ಲೆಯ ಪರಿಸ್ಥಿತಿಯ ಸಂಪೂರ್ಣ ಅರಿವಿದೆ.

ಅಪಾರ ನಿರೀಕ್ಷೆಯ ಮಧ್ಯೆ ಬಂದ ದಯಾನಂದರು ನಿರಾಶೆ ಮೂಡಿದರೆ ನಿರೀಕ್ಷೆಗಳನ್ನು ಹುಟ್ಟಿಸಿದ ಸತೀಶ್‌ಕುಮಾರ್ ಜನರ ವಿಶ್ವಾಸಗಳಿಸಲಿ ಕೋಮುಶಕ್ತಿಗಳನ್ನು ನಿಯಂತ್ರಣದಲ್ಲಿಡಲಿ ಜಿಲ್ಲೆಯನ್ನು ಹುರಿದು ಮುಕ್ಕುತ್ತಿರುವ ವಿವಿಧ ಮಾಫಿಯಾಗಳನ್ನು ಹದ್ದುಬಸ್ತಿನಲ್ಲಿಡಲಿ ಎನ್ನುವ ನಿರೀಕ್ಷೆ ಜಿಲ್ಲೆಯ ಪ್ರಜ್ಞಾವಂತರದ್ದು.

■ **ಮುನೀರ್ ಕಾಟಿಪ**

ಸುಮಾರು 24 ವರ್ಷಗಳ ಕಾಲ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳಾಗಿದ್ದ ಜ್ಯೋತಿಬಸುರವರು ಅಲ್ಲಿನ ಎಡರಂಗ ಸರ್ಕಾರ 30 ವರ್ಷ ಪೂರೈಸಿದ ಸಂದರ್ಭದಲ್ಲಿ ನೀಡಿದ ಸಂದರ್ಶನದ ಭಾಗ ಇದು

ಪಶ್ಚಿಮ ಬಂಗಾಳ ಎಡರಂಗ ಸರ್ಕಾರಕ್ಕೆ 30 ವರುಷ

ಬರೀ ಪರಿಹಾರವಲ್ಲ ಪರ್ಯಾಯ ಅಭಿವೃದ್ಧಿ ಮಾರ್ಗ

ಜ್ಯೋತಿಬಸು

"ಜೂನ್ 21, 1977ರಂದು ಪಶ್ಚಿಮಬಂಗಾಳದಲ್ಲಿ ಎಡರಂಗ ಸರಕಾರದ ಪ್ರತಿಷ್ಠಾಪನೆಯೊಂದಿಗೆ ಭಾರತೀಯ ರಾಜಕಾರಣದಲ್ಲಿ ಮತ್ತು ಭಾರತೀಯ ಜನಗಳ ಜೀವನದಲ್ಲಿ ಒಂದು ಹೊಸಯುಗ ಆರಂಭಗೊಂಡಿತು. ಪ್ರಸಕ್ತ ಸಾಮಾಜಿಕ ರಚನೆ ಮತ್ತು ಸಾಂವಿಧಾನಿಕ ಮಿತಿಗಳಲ್ಲಿ ಎಲ್ಲವನ್ನು ಬದಲಿಸಲು ಸಾಧ್ಯವಿಲ್ಲ ಎಂದು ನಮಗೆ ಗೊತ್ತಿತ್ತು. ಆದ್ದರಿಂದ ನಾವು ಜನಸಾಮಾನ್ಯರಿಗೆ ಕೇವಲ ಪರಿಹಾರಗಳನ್ನು ಕೊಡಿಸುತ್ತೇವೆ ಎಂದಷ್ಟೇ ಭರವಸೆ ನೀಡಿದ್ದೆವು. ಆದರೆ ಈಗ 30 ವರ್ಷಗಳ ನಂತರ, ಜನಗಳಿಗೆ ಕೇವಲ ಪರಿಹಾರಕ್ಕಿಂತ ಹೆಚ್ಚಿನದ್ದನ್ನು ಒದಗಿಸಲು ನಮಗೆ ಸಾಧ್ಯವಾಗಿದೆ ಎಂದು ನನ್ನ ಭಾವನೆ. ಜನಸಾಮಾನ್ಯರ ಹಿತಾಸಕ್ತಿಗಳ ರಕ್ಷಣೆಯಲ್ಲಿ ನಾವು ಒಂದು ಪರ್ಯಾಯ ಅಭಿವೃದ್ಧಿ ಮಾರ್ಗವನ್ನು ಜಾರಿಗೊಳಿಸಿದೆವು, ಅದೀಗ ಸ್ವಲ್ಪ ಫಲ ನೀಡುತ್ತಿದೆ" ಎಂದಿದ್ದಾರೆ ಹಿರಿಯ ಕಮ್ಯೂನಿಸ್ಟ್ ಮುತ್ಸದ್ದಿ ಜ್ಯೋತಿಬಸು.

ಮೂವತ್ತು ವರ್ಷಗಳ ಹಿಂದೆ ಪಶ್ಚಿಮಬಂಗಾಳ ವಿಧಾನಸಭಾ ಚುನಾವಣೆಗಳಲ್ಲಿ ಭಾರೀ ಬಹುಮತ ಗಳಿಸಿ ಎಡರಂಗ ಸರಕಾರ ಅಧಿಕಾರ ವಹಿಸಿಕೊಂಡಾಗ ಅದರ ಚುಕ್ಕಾಣಿ ಹಿಡಿದ ಜ್ಯೋತಿಬಸುರವರು ಎಡರಂಗ 30 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಸಂದರ್ಭದಲ್ಲಿ ಸಿಪಿಐ(ಎಂ)ನ ವಿವಿಧ ದೈನಿಕಗಳ ವರದಿಗಾರರ ಜತೆ ಮಾತನಾಡುತ್ತಾ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದರು.

ಜನಾದೇಶದ ನವೀಕರಣ

"ಪಶ್ಚಿಮ ಬಂಗಾಳದ ಜನತೆ ಮಾರ್ಕ್ಸ್‌ವಾದಿಗಳ ನೇತೃತ್ವದ ಮೈತ್ರಿರಂಗಕ್ಕೆ ಸರಕಾರ ನಡೆಸಲು ಒಂದು ಬೃಹತ್ ಜನಾದೇಶ ನೀಡುವುದರೊಂದಿಗೆ ಎಡರಂಗ ಅಧಿಕಾರದಲ್ಲಿ ಮೂವತ್ತು ವರ್ಷಗಳನ್ನು ಪೂರೈಸಿದೆ ಎಂಬ ಬಗ್ಗೆ ನನಗೆ ಅತೀವ ಸಂತೋಷವಾಗಿದೆ. ಜನಾದೇಶ ಮತ್ತೆ ಮತ್ತೆ ಆರು ಬಾರಿ ನವೀಕರಣಗೊಂಡಿದೆ" ಎಂದು ಅತ್ಯಂತ ದೀರ್ಘಕಾಲ ಮುಖ್ಯಮಂತ್ರಿಯಾಗಿದ್ದ ದಾಖಲೆ ನಿರ್ಮಿಸಿದ ಜ್ಯೋತಿಬಸು ಹೇಳಿದರು. ಅವರಿಗೆ ಈ ಜುಲೈ 8ರಂದು94 ವರ್ಷವಾಗುತ್ತದೆ.

ಈ ಅಪೂರ್ವ, ಐತಿಹಾಸಿಕ ಸಾಧನೆ ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆ ಕೇಳಿದಾಗ ಜ್ಯೋತಿ ಬಸುರವರು ಹಿಂದಿದ್ದ ಪರಿಸ್ಥಿತಿಯನ್ನು ನೆನಪಿಸಿಕೊಂಡರು. " ನೋಡಿ, ಯಾವುದೇ ಎಡರಂಗ ಸರಕಾರವನ್ನು 30 ವರ್ಷವೇನೂ ಸ್ವಲ್ಪ ಕಾಲವೂ ಮುಂದುವರೆಯಲು ಬಿಡುವುದಿಲ್ಲ ಎಂಬ ಸಮಯವೊಂದಿತ್ತು. ಏಕೆಂದರೆ ನಮ್ಮಂತಹ ಸಂಸದೀಯ ಪ್ರಜಾಪ್ರಭುತ್ವ ಕೇಂದ್ರದಲ್ಲಿ ಇದೆ, ಅಲ್ಲಿ ಬಂಡವಾಳಶಾಹಿ, ಭೂಮಾಲಕ ಪಕ್ಷಗಳದ್ದೇ ಕಾರುಬಾರು. 1957ರಲ್ಲಿ ಕೇರಳದಲ್ಲಿ ಮೊದಲ ಕಮ್ಯೂನಿಸ್ಟ್ ಸರಕಾರ ರಚನೆಯಾಯಿತು. ದಿವಂಗತ ಕಾಮ್ರೇಡ್ ಇಎಂಎಸ್ ನಂಬುದರಿಪಾದ್ ಅದರ ಮುಖ್ಯಮಂತ್ರಿಯಾಗಿದ್ದರು. ಆದರೆ ಎರಡೂವರೆ ವರ್ಷಗಳೊಳಗೆ ವಜಾ ಮಾಡಲಾಯಿತು. ಪಶ್ಚಿಮ ಬಂಗಾಳದಲ್ಲೂ ಅರವತ್ತರ ದಶಕದಲ್ಲಿ, ಎಪ್ಪತ್ತರ ದಶಕದ ಆರಂಭದಲ್ಲಿ ಭಾರೀ ಜನಾಂದೋಲನಗಳು ನಡೆದು ಹೊಸ ಪರಿಸ್ಥಿತಿಯೊಂದು ನಿರ್ಮಾಣವಾಯಿತು. ಇದರಿಂದಾಗಿ 1967ರಲ್ಲಿ ಮೊದಲ ಸಂಯುಕ್ತ ರಂಗ ಸರಕಾರ ಅಧಿಕಾರಕ್ಕೆ ಬಂತು. ಆದರೆ ಅದಕ್ಕೆ ಒಂಭತ್ತು ತಿಂಗಳ ಕಾಲ ಮಾತ್ರ ಅಧಿಕಾರ ನಡೆಸಲು ಅವಕಾಶ ಸಿಕ್ಕಿತು. ಮತ್ತೆ 1969ರಲ್ಲಿ ಸಂಯುಕ್ತರಂಗ ಸರಕಾರ-ಬಂತು. ಅದಕ್ಕೆ ಕೂಡಾ ಸಿಕ್ಕ ಅವಧಿ 13 ತಿಂಗಳು ಮಾತ್ರ. 1971ರಲ್ಲಿ ಇನ್ನೂ ಹೆಚ್ಚಿನ ಸ್ಥಾನಗಳಿಸಿಬಂದೆವು. ಆಗ ಸರಕಾರ ರಚಿಸಲು ಕೂಡಾ ಅವಕಾಶ ನೀಡಲಿಲ್ಲ. 1972ರಿಂದ ನಾವು ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲಿ ಹೋರಾಟ ಮುಂದುವರೆಸಿದೆವು" ಎಂದು ಜ್ಯೋತಿಬಸು ನೆನಪಿಸಿಕೊಂಡರು.

ಹೊಸತೇನಾಗಿರಲಿಲ್ಲ

"ಇವೆಲ್ಲಾ ನಮಗೆ, ಹಳೆಯ ತಲೆಮಾರಿನವರಿಗೆ ಹೊಸದೇನೂ ಆಗಿರಲಿಲ್ಲ. ಬ್ರಿಟಿಶರ ಆಳ್ವಿಕೆಯಲ್ಲಿ 1942ರವರೆಗೆ ಸ್ವಾತಂತ್ರ್ಯಾನಂತರ 1948ರಿಂದ 1952ರವರೆಗೆ ಬಹಳಷ್ಟು ದಮನವನ್ನು ಎದುರಿಸಿದ್ದೆವು. 1972ರಿಂದ ಪಶ್ಚಿಮಬಂಗಾಲದಲ್ಲಿ ನಾವು ಅನುಭವಿಸಿದ್ದನ್ನು ಮೂರು ವರ್ಷಗಳ ನಂತರ ಇಡೀ ದೇಶ ಎದುರಿಸಬೇಕಾಗಿ ಬಂತು. ಎಂತಹ ದಮನ ಬಂದರೂ ಆಳುವ ವರ್ಗಗಳೊಡನೆ ರಾಜಿ ಮಾಡಿಕೊಳ್ಳದ ಪರಂಪರೆ ನಮ್ಮದು. ಇದನ್ನು ಜನ ಗೌರವಿಸಿದರು. ಅವರಿಗೆ ತಮ್ಮಲ್ಲಿ ವಿಶ್ವಾಸವಿತ್ತು. ಆದ್ದರಿಂದಲೇ ಮೊದಲ ಎಡರಂಗ ಸರಕಾರ ರಚನೆಯಾದ 29 ವರ್ಷಗಳ ನಂತರದಲ್ಲಿ ಕಳೆದ ಚುನಾವಣೆಗಳಲ್ಲಿ ಮೂರನೇ ನಾಲ್ಕು ಬಹುಮತ ನೀಡಿದರು. ಸುಳ್ಳು ಪ್ರಚಾರ ನಡೆಸುತ್ತಿರುವವರಿಗೆಲ್ಲಾ ತಕ್ಕ ಉತ್ತರ ನೀಡಿದರು ಎಂದು ಜ್ಯೋತಿಬಸು ನೆನಪಿಸಿಕೊಂಡರು.

ರೈಟರ್ಸ್ ಬಿಲ್ಡಿಂಗ್ ಸೀಮಿತವಾಗಿರುವುದಿಲ್ಲ

ಎಡರಂಗ ಸರಕಾರಕ್ಕೆ ಇಷ್ಟೊಂದು ಜನಪರ ಕಾರ್ಯಕ್ರಮಗಳನ್ನು ತರಲು ಹೇಗೆ ಸಾಧ್ಯವಾಯಿತು. ಅದರ ಆದ್ಯತೆಗಳೇನು ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಜ್ಯೋತಿಬಸು ಎಡರಂಗ ಸರಕಾರದ ಆರಂಭವನ್ನು ನೆನಪಿಸಿಕೊಂಡರು "ನಾವು 1977ರಲ್ಲಿ ಅಧಿಕಾರ ವಹಿಸಿಕೊಂಡಾಗ 36 ಅಂಶಗಳ ಕಾರ್ಯಕ್ರಮದಲ್ಲಿ ನೀಡಿದ ನಮ್ಮ ಭರವಸೆಗಳ ಜ್ಯಾರಿಯ ಬಗ್ಗೆ ಗಂಭೀರ ಚಿಂತನೆ ನಡೆಸಿದೆವು. 1977ರಲ್ಲಿ ನಾವು ಚುನಾವಣೆಗಳಲ್ಲಿ ಗೆದ್ದಾಗ ರೈಟರ್ಸ್ ಬಿಲ್ಡಿಂಗ್ ಎದುರು ಒಂದು ದೊಡ್ಡ ಜನಸಮುದಾಯ ನೆರೆದಿತ್ತು.



ನಾವು ಈ ರೈಟರ್ಸ್ ಬಿಲ್ಡಿಂಗ್‌ಗೆ ಸೀಮಿತರಾಗಿರುವುದಿಲ್ಲ, ಬದಲಿಗೆ ಕಾರ್ಮಿಕರು, ನೌಕರರು ಮತ್ತು ರೈತರ ಪರವಾಗಿ ನಿಲ್ಲುತ್ತೇವೆ, ಜನಸಾಮಾನ್ಯರ ಎಲ್ಲಾ ವಿಭಾಗಗಳ ಪರವಾಗಿ ನಿಲ್ಲುತ್ತೇವೆ ಎಂದವರಿಗೆ ನಾನು ಹೇಳಿದೆ".

ಎಡರಂಗದ ಈ ಆದ್ಯತೆಗಳಿಗೆ ಕಾರಣವೇನು?

"ಏಕೆಂದರೆ ಎಡರಂಗ ಅಧಿಕಾರಕ್ಕೆ ಬಂದದ್ದು ಸಾಮೂಹಿಕ ಹೋರಾಟಗಳ ಮೂಲಕ. ಅದೊಂದು ಕೇವಲ ಚುನಾವಣಾ ರಂಗವಲ್ಲ. ಜನಗಳು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ನಮ್ಮ ಪಾತ್ರವನ್ನು ಕಂಡಿದ್ದರು. ಒಂದು ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಾವು ಇತಿಹಾಸವನ್ನು ನಿರ್ಮಿಸಿದೆವು. 1977ರಲ್ಲಿ ಮೊದಲ ಎಡರಂಗ ಸರಕಾರ ಸ್ಥಾಪನೆಗೊಂಡಾಗ ನೀಡಿದ ವಚನಗಳಲ್ಲಿ 90 ಶೇಕಡಾರಷ್ಟನ್ನು ನಾವು ಈಡೇರಿಸಿದ್ದೇವೆ ಎಂದು ನನ್ನ ನಂಬಿಕೆ. ಕೆಲವು ಕೊರತೆಗಳು ಇನ್ನೂ ಉಳಿದಿವೆ ಎಂಬುದು ನಿಜ. ಪ್ರತಿಯೊಂದು ಹಳ್ಳಿಗೆ ವಿದ್ಯುತ್ ನೀಡುವ ವಚನ ನೀಡಿದ್ದೆವು. ಅದಿನ್ನೂ ಈಡೇರಿಲ್ಲ. 2012ರೊಳಗೆ ಅದನ್ನೂ ಈಡೇರಿಸಲಾಗುವುದು ಎಂದು ನನಗೆ ತಿಳಿಸಲಾಗಿದೆ. ಏಳನೇ ಎಡರಂಗ ಸರಕಾರ ಆ ಬಗ್ಗೆ ದೃಢನಿರ್ಧಾರ ಮಾಡಿದೆ".

ಎಡರಂಗವನ್ನು ಇತರರಿಂದ ಭಿನ್ನವಾಗಿಸುವ ಲಕ್ಷಣವೇನು?

"ಅದೆಂದರೆ ನಾವು ಜನರಿಂದ ಏನನ್ನೂ ಬಚ್ಚಿಡುವುದಿಲ್ಲ. ನಮ್ಮ ನಕಾರಾತ್ಮಕ ಅಂಶಗಳನ್ನು ಕೂಡಾ. ನಮ್ಮ ವಿರುದ್ಧ ಮಾಡುವ ಟೀಕೆಗಳಿಗೆ ಕಿವಿಗೊಡಿ ಎಂದು ನಾವು ನಮ್ಮ ಕಾರ್ಯಕರ್ತರಿಗೆ ಹೇಳುತ್ತೇವೆ. ಆ ಬಗ್ಗೆ ಸಕಾರಾತ್ಮಕವಾದುದು ಏನನ್ನಾದರೂ ಮಾಡಲು ಸಾಧ್ಯವಿದ್ದರೆ ಅದನ್ನು ಮಾಡಬೇಕು, ಇಲ್ಲವಾದರೆ ನಮ್ಮ ಮಿತಿ ಕುರಿತು ಹೀಗೆಂದು ನೇರವಾಗಿ ಜನರಿಗೆ ಹೇಳಬೇಕು. ಇದು ನಮ್ಮ ಕಾರ್ಯ ನಿರ್ವಹಣೆಯ ರೀತಿ. ಹಲವಾರು ಸಂದರ್ಭಗಳಲ್ಲಿ ನ್ಯೂನ್ಯತೆಗಳಿಗೆ ಕೇಂದ್ರ ಸರಕಾರ ಹೊಣೆಯಾದರೂ, ನಮ್ಮ ಪ್ರತಿಷ್ಠೆಗೆ ಕುಂದು ತರಲು ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಆಗಾಗ ಅಡೆ ತಡೆ ತಂದರೂ ನಾವು ಅದೇ ರೀತಿ ಕಾರ್ಯನಿರ್ವಹಿಸಿದೆವು" ಎನ್ನುತ್ತಾರೆ ಜ್ಯೋತಿಬಸು.

ಈ ಸಂದರ್ಭದಲ್ಲಿ ದೇಶದ ಕಮ್ಯೂನಿಸ್ಟ್ ಆಂದೋಲನದ ಒಬ್ಬ ಹಿರಿಯ ನೇತಾರನಾಗಿ ನಿಮ್ಮ ಸಂದೇಶವೇನು ಎಂದು ಕೇಳಿದಾಗ ಜ್ಯೋತಿಬಸುರವರು "ನಮ್ಮ ಸರಕಾರ ಈಗ 31ನೇ ವರ್ಷವನ್ನು ಪ್ರವೇಶಿಸುತ್ತಿದೆ ಎಂಬ ಬಗ್ಗೆ ನನಗೆ ಅತೀವ ಆನಂದವಾಗಿದೆ. ಇದು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಐತಿಹಾಸಿಕ ಸಂಗತಿ. ಈಗ ನಾವು ಈ ದೀರ್ಘ ಅವಧಿಯಲ್ಲಿ ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಕೇರಳದಲ್ಲಿ ಏನು ಮಾಡಿದ್ದೇವೆ ಎಂಬುದನ್ನು ಜನಜನಿತಗೊಳಿಸಲು ದೇಶವ್ಯಾಪಿ ಪ್ರಚಾರಾಂದೋಲನ ನಡೆಸಬೇಕು. ದೇಶದೆಲ್ಲೆಡೆ ಜನರು ನಾವು ಈ ರಾಜ್ಯಗಳಲ್ಲಿ ಯಾವ ರೀತಿಯ ಪರ್ಯಾಯ ಕಾರ್ಯಕ್ರಮಗಳನ್ನು ಜ್ಯಾರಿಗೊಳಿಸಿದೆವು ಎಂದು ತಿಳಿಯಬೇಕು. ನಾವು ತೀವ್ರ ಸಾಂವಿಧಾನಿಕ ಮಿತಿಗಳ ಒಳಗೂ, ಅನುಕೂಲಕರವಾಗಿರುವ ಸಾಮಾಜಿಕ ರಾಜಕೀಯ ರಚನೆಯೊಳಗೂ ಮಾಡಲು ಸಾಧ್ಯವಾದದ್ದನ್ನು ಬೇರೆ ರಾಜ್ಯಗಳಲ್ಲಿ ಏಕೆ ಮಾಡಲಾಗಲಿಲ್ಲ ಎಂಬ ಪ್ರಶ್ನೆಯನ್ನು ಕೂಡಾ ನಾವು ಎತ್ತಬೇಕು" ಎಂದು ಕರೆ ನೀಡಿದರು.

"ಪ್ರಸಕ್ತ ಬಂಡವಾಳಶಾಹಿ ಭೂಮಾಲಕ ರಚನೆಯಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಅಲ್ಪ ಅವಕಾಶವಿದ್ದರೂ ಅದನ್ನು ಬಳಸಬೇಕು. ನಮ್ಮ ಗುರಿ ಒಂದು ವರ್ಗರಹಿತ, ಶೋಷಣಾರಹಿತ ಸಮಾಜವನ್ನು ಕಟ್ಟುವುದು. ಈ ಗುರಿಸಾಧನೆಗೆ ಇನ್ನೆಷ್ಟು ದೀರ್ಘಕಾಲ ಹಿಡಿದೀತೆಂದು ನನಗೆ ತಿಳಿದಿಲ್ಲವಾದರೂ ಅದನ್ನು ಸಾಧಿಸುವವರೆಗೆ ನಮ್ಮ ಹೋರಾಟವನ್ನು ಮುಂದು ವರಸಬೇಕು" ಎಂದರು ಈ ಹಿರಿಯ ಮುತ್ಸದ್ದಿ.

ನಕ್ಸಲ್ ಪಟ್ಟಿ....

ಪುಟ 3 ರಿಂದ

ಗೋವಿಂದರಾವ್, ಪ್ರೊ:ಕೆ.ರಾಮದಾಸ್(ದಿವಂಗತ), ಡಾ: ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಎ.ಕೆ.ಸುಬ್ಬಯ್ಯ ಮುಂತಾದ ಅನೇಕರು, ಸಿಪಿಐ(ಎಂ) ಮತ್ತು ಅನೇಕ ಸಾಮೂಹಿಕ ಸಂಘಟನೆಗಳು ಹೊರ ಬಂದರು. ಪ್ರಜಾಪ್ರಭುತ್ವದ ವಾತಾವರಣ ಇಲ್ಲದಿರುವ ಕಾರಣದಿಂದ ತಮ್ಮ ಮಾವೋವಾದಿ ಹಿಂದಿನ ಅಜೆಂಡಾವೇ ಮುಖ್ಯವಾಗಿ ಅವರಿಗೆ ಬಿಟ್ಟು ಗಟ್ಟಿ ಧ್ವನಿಯ ಪ್ರಗತಿಪರರನ್ನು ಕಳೆದುಕೊಳ್ಳಲು ಸಿದ್ಧವಿದ್ದರೇ ಹೊರತು ಪ್ರಜಾಸತ್ತಾತ್ಮಕವಾಗಿ, ಪಾರದರ್ಶಕವಾಗಿ ಕೆಲಸ ನಿರ್ವಹಿಸಲು 'ಆ ಸಣ್ಣ ಗುಂಪು' ಸಿದ್ಧವಿರಲಿಲ್ಲ. ಯಾಕೆಂದರೆ ಕೋಮುವಾದವೇ ಆಗಲಿ, ಆರ್ಥಿಕ ಉದಾರೀಕರಣವೇ ಇರಲಿ, ಗಿರಿಜನರ-ಭೂ ಹೀನದ ಪ್ರಶ್ನೆಗಳೇನೇ ಇರಲಿ ಆ ಕಾರಣಗಳು, ಕೋಮು ಸೌಹಾರ್ದ ವೇದಿಕೆ, ಕರ್ನಾಟಕ ವಿಮೋಚನಾ ರಂಗ, ಶಾಂತಿಗಾಗಿ ನಾಗರೀಕರ ವೇದಿಕೆ ಗಿರಿಜನರ ಸಮಿತಿ ಇತ್ಯಾದಿಗಳು ಕಾರ್ಯಕರ್ತರನ್ನು ಕಾಡಿಗೆ ರಿಕ್ರೂಟ್ ಮಾಡುವ ವೇದಿಕೆಗಳು' ಅದು ಹಾಗೆ ಉಳಿಯಬೇಕು ಎಂಬ ನಿರ್ಧಾರ ಅವರದ್ದು, ಆದ್ದರಿಂದ ಆ ಕಾಲಘಟ್ಟದಲ್ಲಿ ಬರುವವರು 'ಘನೋದ್ದೇಶಕ್ಕೆ' ಕೇವಲ ಮೆಟ್ಟಿಲುಗಳು ಅಷ್ಟೇ. (ಎಲ್ಲವೂ ಕ್ರಾಂತಿ ಹೆಸರಿನಲ್ಲಿ) ಈ ಅಂಶಗಳನ್ನು ಅರಿತು ಈಗ ವೇದಿಕೆಯೊಂದಿಗೆ ಇರುವ ಸಂಘಟನೆಗಳು ಹೊಂದಿರುವ ಸಂಪರ್ಕಗಳಿಂದ, ಒಂದು ಉದ್ದೇಶಗಳಿಗಾಗಿ ಅಲ್ಲಿದ್ದು ತೊಡಗಿಕೊಂಡವರು ಅಲ್ಲಿಂದ ಹೊರ ಬಂದು ವಿಶಾಲವಾದ ಪ್ರಜಾಸತ್ತಾತ್ಮಕ ಹೋರಾಟವನ್ನು ಕಟ್ಟಿ ಬೆಳೆಸಬೇಕಿದೆ.

ನಕ್ಸಲ್‌ವಾದದ ವಿರುದ್ಧದ ಹೋರಾಟವು ಕೋಮುವಾದ-ಮೂಲಭೂತದ ವಿರುದ್ಧ ಹಾಗೂ ಜನವಿರೋಧಿ ನೀತಿಗಳ ವಿರುದ್ಧದ ಜನತೆಯ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಲಗೊಳಿಸುತ್ತದೆ. ಆದುದರಿಂದಲೇ ಕೋಮುವಾದದ ಭಾರೀ ಅಪಾಯ ಎದುರಿಸಲು ಅದರ ವಿರುದ್ಧ ಹಾಗೂ ನಕ್ಸಲ್‌ವಾದದ ವಿರುದ್ಧ ಹೋರಾಟ ನಡೆಯಬೇಕಿದೆ ಎಂಬುದು. ಕೋಮುವಾದವನ್ನು ಎದುರಿಸುವೆವೆಂಬ ಭರದಲ್ಲಿ ನಾಡಿನ ಪ್ರಗತಿಪರರು ಇನ್ನೊಂದು ಪ್ರಪಾತಕ್ಕೆ ಬೀಳಬಾರದು. ಅಂತಹ ಭ್ರಮೆಗಳನ್ನು ತಪ್ಪು ಗ್ರಹಿಕೆಗಳನ್ನು ಕೊಡಗಿನಿ ನಿಚ್ಚಳವಾಗಿ ನಿಜವನ್ನು ಕಾಣಬೇಕು.

ಅತ್ಯಂತ ಪ್ರತಿಗಾಮಿ ಕೋಮುವಾದಿ ಫ್ಯಾಶಿಸ್ಟ್ ಮನೋಭಾವದ ಬಿಜೆಪಿಯು ರಾಜ್ಯದ ಅಧಿಕಾರದಲ್ಲಿ ಪಾಲು ಪಡೆದಿದ್ದು ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿಯಲು ಕಾದಿದೆ. ಕೇಂದ್ರ ಸ್ಥಾನಕ್ಕೆ ಬರುವುದಾದಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳು, ಚಳುವಳಿಗಳ ಮೇಲೆ ದಾಳಿಗಳೂ ಹೆಚ್ಚಲಿವೆ. ಇಂತಹ ಸಂದರ್ಭದಲ್ಲಿ ವಿಶಾಲವಾದ, ಜನತೆಯ ಪ್ರಜಾಸತ್ತಾತ್ಮಕ ಹೋರಾಟವನ್ನು ಬೆಳೆಸಿ ಪ್ರತಿರೋಧವನ್ನು ಒಡ್ಡಬೇಕು.

ಜನಶಕ್ತಿ ಕನ್ನಡ ವಾರಪತ್ರಿಕೆ

ಬಿರುಬೇಸಿಗೆಯ ತಾಪದಿಂದ ನರಳಿದ ಭೂಮಿಗೆ ಮುಂಗಾರುಮಳೆಯಿಂದ ಸುರಿದ ಅರಳಿ ನಿಂತಿದೆ. ಬಿತ್ತಿ ಬೆಳೆಯಲು ತಲೆದೂಗುವ ತೆನೆಗಳ ನೋಡಲು ರೈತರು ಉತ್ಸುಕರು. ಆದರೆ... ಬಿತ್ತಲು ಬೀಜಗಳೇ ಸಿಗುತ್ತಿಲ್ಲ. ಇದು ಯಾರ ತಪ್ಪು? ವ್ಯಾಪಾರಿಗಳದ್ದೇ, ಕೃಷಿ ಇಲಾಖೆ-ಸರ್ಕಾರದ್ದೇ? ಪ್ರತಿವರುಷವೂ ಇಂತಹ ದಾರುಣ ಸ್ಥಿತಿ ಯಾಕೆ?

ಮುಂಗಾರು ಮಳೆಯಲ್ಲಿ ಬೀಜದ ಬೆನ್ನತ್ತಿ

ಮಲ್ಲಯ್ಯ ಜಾಲಹಳ್ಳಿ

ರಾಯಚೂರು ಜಿಲ್ಲೆಯಲ್ಲಿ ಕಳೆದ ವರ್ಷ ಸಬ್ಸಿಡಿ ಬೀಜ ಹಂಚಿಕೆಯಲ್ಲಿ ಆದ ಅವ್ಯವಹಾರದ ವಿರುದ್ಧ ರೈತರು ಸಿಡಿದೆದ್ದು ಹೋರಾಡಿದರು. ಸರಕಾರ ಸರಿಯಾಗಿ ಬೀಜ ಪೂರೈಸಲು ಆಗದಿದ್ದರೂ ರೈತರ ಮೇಲೆ ಮಾತ್ರ ಧಾರಾಳವಾಗಿ ಲಾಠಿ ಚಾರ್ಜ್ ಮಾಡಿತ್ತು. ಈ ಹಿನ್ನಲೆಯಲ್ಲಿ ಜಿಲ್ಲಾ ಮಂತ್ರಿ ಆಲ್ಕೋಡ ಹನ್ಮಂತಪ್ಪ ಈ ವರ್ಷ ಬೀಜ ವಿತರಣೆಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಮುಂಗಾರುಮಳೆ ಆರಂಭಗೊಳ್ಳುವ ಮುಂಚೆಯೇ ಘೋಷಿಸಿದರು. ಆದರೆ ಜಿಲ್ಲೆಯ ಜನ ಈ ಘೋಷಣೆಯನ್ನೇನು ನಂಬಿದಂತೆ ಕಾಣಲಿಲ್ಲ.

ಯಾವಾಗಲೂ ಮಳೆಯನ್ನು ತಡವಾಗಿಯೇ ಕಾಣುವ ಬರದ ಜಿಲ್ಲೆ ರಾಯಚೂರಿಗೆ ಈ ಬಾರಿ ಆಶ್ಚರ್ಯವೆಂತಂತೆ ಮೇ24ರಂದೇ ಜಿಲ್ಲಾದ್ಯಂತ ವ್ಯಾಪಕ ಮಳೆ ಸುರಿಯಿತು. ನಾಲ್ಕಾರು ತಿಂಗಳನ್ನು ಕಡುಬಿಸಿಲಿನಲ್ಲೇ ಕಳೆದ ಜನತೆಗೆ ಮಳೆ ತಂಪು ನೀಡಿತು. ಆದರೆ ಬಿತ್ತನೆಗೆ ಸಾಕಾಗುವಷ್ಟು ಭೂಮಿ ಹಸಿಯಾಗಿರಲಿಲ್ಲ. ರೈತರು ಮತ್ತೊಂದು ಮಳೆಯಾದರೆ ಸಾಕು ಬಿತ್ತಬೇಕೆನ್ನುವ ಹುರುಪಿನಲ್ಲಿ ಬೀಜ ಹೊಂದಿಸಿಕೊಳ್ಳಲು ತಯಾರಿ ನಡೆಸಿದರು. ಎಲ್ಲಕ್ಕಿಂತ ಹೆಚ್ಚಿನ ಸಂಭ್ರಮವೆಂದರೆ ರೋಹಿಣಿ ನಕ್ಷತ್ರದಲ್ಲಿ ಮಳೆಬಂದದ್ದು. ಇಲ್ಲಿನ ನಾಡನುಡಿ "ರೋಹಿಣಿ ಮಳೆಗೆ ಬೀಜ ಬಿತ್ತಿದರೆ ಓಣಿ ತುಂಬಾ ಜೋಳ" ಎಂದಿದೆ. ಹೀಗಾಗಿ ರೈತರಲ್ಲಿ ಅಷ್ಟೊಂದು ಸಂತೋಷ.

'ಕೈಕೊಟ್ಟ ಸರ್ಕಾರ'

'ದೇವರು ವರ ಕೊಟ್ಟರೂ, ಪೂಜಾರಿ ಕೊಡಲಿಲ್ಲ" ಎಂಬಂತೆ ಮಳೆ ಬಂದರೂ ಸಹ ಸರಕಾರ ಬೀಜ ಹಂಚುವ ಮಾತನಾಡಿತೆ ವಿನಃ ಕೃತಿಯಲ್ಲಿ ಇಳಿಯಲಿಲ್ಲ. ಅಷ್ಟರಲ್ಲಿ ಜೂನ್2ರಂದು ಜಿಲ್ಲಾದ್ಯಂತ ಮತ್ತೊಂದು ಸಾರಿ ವ್ಯಾಪಕವಾಗಿ ಮಳೆಯಾಯಿತು. ರೈತರ ಸಹನೆಯ ಕಟ್ಟೆಯೊಡೆಯುವ ಮುನ್ನ ಜೂನ್4ರಿಂದ ಜಿಲ್ಲೆಯ ರೈತಸಂಪರ್ಕ ಕೇಂದ್ರದಲ್ಲಿ ಬೀಜ ಹಂಚಿಕೆ ಆರಂಭವಾಯಿತು. ಆದರೆ ಆರಂಭವಾದಷ್ಟೆ ಶೀಘ್ರವಾಗಿ ಅಂದರೆ ಮೂರೇ ದಿನಗಳಲ್ಲಿ ಬೀಜ ಖಾಲಿಯಾಯಿತು. ಪ್ರತಿ ಕೇಂದ್ರದ ಮುಂದೆ ನೂರರಿಂದ 500 ಕೆಲವೆಡೆ ಸಾವಿರದಷ್ಟು ರೈತರು ಬೀಜಕ್ಕಾಗಿ ಸಾಲಿನಲ್ಲಿ ನಿಂತರು. ಬೀಜ ದಾಸ್ತಾನು ಖಾಲಿ ಆದ್ದರಿಂದ ಹಂಚಿಕೆ ಇಲ್ಲವೆಂಬ ನೋಟೀಸುಗಳು ಸಂಪರ್ಕ ಕೇಂದ್ರಗಳ ಮುಂದೆ ರಾರಾಜಿಸಿದವು. ರೈತರು ರೊಚ್ಚಿಗೆದ್ದರು. ಆದರೆ ಜೂನ್ 7ರಂದು ಜಿಲ್ಲೆಯಲ್ಲಿ ದಾಖಲಾರ್ಹ 30.6 ಮಿ.ಮೀ ಮಳೆ ಸುರಿಯಿತು. ರೈತರ ಬೀಜ ಬಿತ್ತುವ ಹಂಬಲ ಇನ್ನಷ್ಟು ಚಿಗುರಿತು. ಆದರೆ ಕೇಂದ್ರಗಳಲ್ಲಿ ದಾಸ್ತಾನು ಖಾಲಿಯಾಗಿತ್ತು.



ಕಳ್ಳ ವ್ಯಾಪಾರ

ಕರ್ನಾಟಕ ಪ್ರಾಂತ ರೈತ ಸಂಘವು ಸೇರಿದಂತೆ ಜಿಲ್ಲೆಯಲ್ಲಿ ಸಂಘ ಸಂಸ್ಥೆಗಳು, ವಿರೋಧ ಪಕ್ಷಗಳ ಮುಖಂಡರು ಸರಕಾರದ ಬೀಜ ಹಂಚಿಕೆ ವೈಫಲ್ಯ ಖಂಡಿಸಿದವು. ಹೋರಾಟಕ್ಕೆ ಇಳಿಯಲು ಯೋಚಿಸಿದವು. ಆದರೆ ಜೂನ್ 8ರಂದು ರಾಯಚೂರಿನಲ್ಲಿ ರೈತರು ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿದರೆ, ದೇವದುರ್ಗದ ರೈತರು ರಸ್ತಾರೋಖೋ ನಡೆಸಿದರು. ಲಿಂಗಸೂಗೂರಿನಲ್ಲಿ ರೈತರು ಕೇಂದ್ರದ ಮೇಲೆ ಕಲ್ಲು ತೂರಾಟ ನಡೆಸಿದರು. ಅಡ್ಡ ಬಂದ ಪೊಲೀಸರಿಗೆ ಘೇರಾವ್ ಹಾಕಿದರು. ಎಲ್ಲಾ ಕಡೆ ಒಂದೇ ದೂರು. ಸಂಪರ್ಕ ಕೇಂದ್ರದ ಅಧಿಕಾರಿಗಳು ಬೀಜಗಳ ಕಳ್ಳ ವ್ಯಾಪಾರ ಮಾಡಿದ್ದಾರೆಂದು ಜಿಲ್ಲಾಧಿಕಾರಿಗಳು ಬೀಜ ಹಂಚಿಕೆಯ ಅವ್ಯವಹಾರ ಕಂಡುಹಿಡಿಯಲು ತಪಾಸಣೆ ತಂಡ ರಚಿಸುವಂತಾಯಿತು.

ಬಹುಪಾಲು - ಶ್ರೀಮಂತರ ಪಾಲು

ಆಗ ನಿಜವಾದ ಹುಳುಕು ಬಯಲಿಗೆ ಬಿತ್ತು. ಕೃಷಿ ಇಲಾಖೆ ರಾಜ್ಯ ಸರಕಾರಕ್ಕೆ ಬೀಜ ಸಬ್ಸಿಡಿ ಬೇಡಿಕೆ ಸಲ್ಲಿಸಿದ್ದು 12.25 ಕೋಟಿಗೆ. ಬಿಡುಗಡೆಯಾದದ್ದು ಕೇವಲ 2.14 ಕೋಟಿ ಮಾತ್ರ. ತುಪ್ಪ ಸುರಿವುದಾಗಿ ಘೋಷಿಸಿದ್ದ ಮಂತ್ರಿ ತುಟಿಗೆ ತುಪ್ಪ ಸವರಿದ್ದ. ಎಲ್ಲೆಡೆ ರೈತರು ಪ್ರತಿಭಟನೆಗೆ ಇಳಿದಾಗ ಪುನಃ 3 ಕೋಟಿ ಬಿಡುಗಡೆಯಾಯಿತು. ಆದರೂ ಜಿಲ್ಲೆಯ ರೈತರಿಗೆ ಇದು ಸಾಕಾಗುವುದಿಲ್ಲ. ಆದರೆ ತಾತ್ಕಾಲಿಕ ಶಮನಕ್ಕೆ ಇದು ದಾರಿ ಮಾಡಿಕೊಟ್ಟಿದೆ. ಜಿಲ್ಲೆಯಲ್ಲಿ 7,89,675 ಎಕರೆಯಲ್ಲಿ ಮುಂಗಾರು ಬಿತ್ತನೆ ಗುರಿಯಿದೆ. ಇದರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಹೊಂದಿರುವ ಭೂಮಿ 2.5 ಲಕ್ಷ ಎಕರೆ ಇದೆ. ಈ ರೈತರಿಗೆ ಸರ್ಕಾರದ ಸಬ್ಸಿಡಿ ಬೀಜ ಸಿಗಬೇಕಾದ್ದು. ಆದರೆ ಸಬ್ಸಿಡಿ ಕೋಟಾದಲ್ಲಿ ಬಂದ ಬೀಜದ ಬಹುಪಾಲು ಕೃಷಿಕೇಂದ್ರ ಅಧಿಕಾರಿಗಳ ಭ್ರಷ್ಟಾಚಾರದಿಂದಾಗಿ ರಾಜಕಾರಣಿಗಳ, ವ್ಯಾಪಾರಿಗಳ ಶ್ರೀಮಂತ ರೈತರ ಪಾಲಾಗುತ್ತದೆ.

ಜಿಲ್ಲೆಯ ಮುಂಗಾರು ಬಿತ್ತನೆಯ 3ನೇ ಒಂದು ಭಾಗದಷ್ಟು ಭೂಮಿ ಮಾತ್ರ ಸಣ್ಣ ಮತ್ತು ಅತಿ ಸಣ್ಣ ರೈತರದ್ದಾಗಿದೆ. ಉಳಿದ 3ನೇ 2 ಭಾಗದಷ್ಟು ಭೂಮಿ ದೊಡ್ಡ, ಶ್ರೀಮಂತ, ಭೂಮಾಲಕರ ಕೈಲಿದೆ. ಇವರು ರಾಜಕಾರಣಿಗಳ ಕೃಷಿ ಕೇಂದ್ರದ ಅಧಿಕಾರಿಗಳ ಮೇಲೆ ಹಿಡಿತ ಹೊಂದಿರುವ ಕಾರಣ ರಾತ್ರೋರಾತ್ರಿ ಬೀಜದ ಚೀಲಗಳು ದೊಡ್ಡವರ ಮನೆ ಇಲ್ಲವೇ ವ್ಯಾಪಾರಸ್ಥರ ಗೋಡೌನ್ ಸೇರುತ್ತವೆ. ಇದೆಲ್ಲಾ ಕಂಡ ರೈತರು ಈ ಸಾರಿ ಕೃಷಿ ಕೇಂದ್ರಗಳಿಗೆ ತಹಶೀಲ್ದಾರರಿಂದ ಸಂಜೆ ಸೀಲ್ ಹಾಕಿಸಿ ಮರುದಿನ ತಹಶೀಲ್ದಾರರೇ ಬಂದು ಸೀಲ್ ತೆಗೆಸಿ ಬೀಜ ಹಂಚುವ ಏರ್ಪಾಡು ಮಾಡುವವರೆಗೆ ಹೋರಾಟಗಳಾದವು.



ಅತಂತ್ರ

ಮುಖ್ಯವಾಗಿ ಕರ್ನಾಟಕ ಸರಕಾರ ಈ ವರ್ಷ ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ 100 ಕೋಟಿ ಬೆಲೆಯ ಬೀಜ ಹಂಚುವುದಾಗಿ ಘೋಷಿಸಿತು. ಈ 100 ಕೋಟಿ ಯಾತಕ್ಕೂ ಸಾಲದ ಮೊತ್ತ. ಕಳೆದ ವರ್ಷ ಇಡೀ ರಾಜ್ಯಾದ್ಯಂತ ಹೋರಾಟಗಳಾದರೂ ಸಹ ಸರಕಾರ ಸರಿಯಾದ ಅಂದಾಜು ಮಾಡದೆ ಕೇವಲ 100 ಕೋಟಿ ಮಾತ್ರ ಒದಗಿಸಿದ್ದು ಆಡಳಿತದ ವೈಫಲ್ಯ. ಇಡೀ ರಾಜ್ಯದ ಸಣ್ಣ ರೈತರೆಷ್ಟು, ಅತಿ ಸಣ್ಣ ರೈತರೆಷ್ಟು, ಅವರು ಹೊಂದಿರುವ ಭೂಮಿಯ ಪ್ರಮಾಣ, ಅವರು ಮುಂಗಾರಿನಲ್ಲಿ ಬಿತ್ತುವ ಬೀಜ ಪ್ರಮಾಣ ಆಯಾ ಹೋಬಳಿಗನುಗುಣವಾಗಿ ಬಿತ್ತುವ ಸಾಂಪ್ರದಾಯಿಕ ಬೀಜ ತಳಿಗಳು ಇವೆಲ್ಲಾ ಮುಂಗಡವಾಗಿ ಹೋಬಳಿವಾರು ಅಧ್ಯಯನ ಮಾಡಿ ಸಿದ್ಧತೆ ಮಾಡಿಕೊಳ್ಳಬೇಕಿದ್ದ ಸರಕಾರ ಅತ್ಯಂತ ನಿರ್ಲಕ್ಷ್ಯದಿಂದ 100 ಕೋಟಿ ಇದಕ್ಕಾಗಿ ಎಂದು ಘೋಷಿಸಿ ಸಣ್ಣ ರೈತರನ್ನು ಅತಂತ್ರ ಸ್ಥಿತಿಗೆ ತಳ್ಳಿತು.

ಈ ಎಲ್ಲಾ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಹೋರಾಟದ ಪರಂಪರೆ ಹೊಂದಿರುವ ನಮ್ಮ ರೈತರು ಪ್ರಧಾನಿಯವರ ಪ್ಯಾಕೇಜ್ ನಂಬದೆ, ರಾಜ್ಯ ಕೇಂದ್ರ ಸರಕಾರಗಳ ಹುಸಿ ಕೃಷಿ ನೀತಿ ನಂಬದೆ, ಮುಖ್ಯಮಂತ್ರಿಗಳ ಗ್ರಾಮವಾಸ್ತವ್ಯವಾಗಲಿ ಅಥವಾ ರೈತಸಂವಾದವಾಗಲೀ ಕೇವಲ ನಾಟಕಗಳೆಂಬುದನ್ನು ಅರಿತು ಹೋರಾಟಕ್ಕೆ ನುಗ್ಗಿ ನಕಲಿ ಬೀಜ ಗೊಬ್ಬರ, ಕ್ರಿಮಿನಾಶಕಗಳ ಜಾಲದಿಂದ ಪಾರಾಗಬೇಕಿದೆ. ○



ಬಿತ್ತನೆ ಬೀಜಕ್ಕಾಗಿ ಕಾದ ಸಾಲು



ಕೃಷಿ ಸಚಿವಗೆ ಏನು ಧಾಡಿ?

ಒಂದು ಅಂದಾಜಿನಂತೆ ರಾಜ್ಯದಲ್ಲಿ 50 ಲಕ್ಷ ಕ್ವಿಂಟಾಲ್ ಬೀಜ ಬಿತ್ತನೆಯಾಗುತ್ತದೆ. ಇದರಲ್ಲಿ ಕೃಷಿ ಇಲಾಖೆಯ ಪರವಾನಗಿ ಪಡೆದ 5000 ಖಾಸಗಿ ಕಂಪನಿಗಳು ಪೂರೈಸುವುದು 7 ಲಕ್ಷ ಕ್ವಿಂಟಾಲ್ ಮಾತ್ರ. ಉಳಿದ 43 ಲಕ್ಷ ಕ್ವಿಂಟಾಲ್‌ನಷ್ಟು ಬೀಜವನ್ನು ರೈತರೇ ವಿವಿಧ ಮೂಲಗಳಿಂದ ಹೊಂದಿಸಿಕೊಳ್ಳುತ್ತಾರೆ. ಈ ಹಂತದಲ್ಲಿಯೇ ನಕಲಿ ಬೀಜ ಮಾರಾಟಗಾರರ ದೊಡ್ಡಜಾಲ ಕೆಲಸ ಮಾಡುತ್ತದೆ. ಇದರಿಂದಾಗಿ ರೈತರು ದೊಡ್ಡ ನಷ್ಟಕ್ಕೆ ಬಲಿಯಾಗುತ್ತಾರೆ. ಇನ್ನೊಂದೆಡೆ ಕಂಪನಿಗಳ ಬೀಜಗಳ ಬಗ್ಗೆಯೂ ಭರವಸೆ ಹೊಂದುವಂತಿಲ್ಲ. ಈ ಹಿಂದೆ ಇಡೀ ಉತ್ತರ ಕರ್ನಾಟಕಕ್ಕೆ ಚಮತ್ಕಾರ ಕಂಪನಿ ಪೂರೈಸಿದ ಬೀಜಗಳನ್ನು ಬಿತ್ತಿ ರೈತರು ಬೆಳೆ ಬಾರದೆ ದಿವಾಳಿಯಾದರು. ದೀರ್ಘ ಕಾಲದ ಹೋರಾಟದ ನಂತರ ಅಲ್ಪ ಪರಿಹಾರ ಸಿಕ್ಕಿತು. ಕಳೆದ ವರ್ಷ ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಪಯಾನೀರ್, ಗಂಗಾಕಾವೇರಿ, ಸನ್‌ಬ್ರಾಂಡ್ ಬೀಜಗಳು ನಕಲಿ ಬಂದು ರೈತರು ಹೋರಾಟ ಮಾಡಬೇಕಾಯ್ತು.



ಖಾಶಂಪುರ್

ಇಷ್ಟೆಲ್ಲಾ ಕಳಪೆ ಬೀಜಗಳ ಪೂರೈಕೆಯಾದರೂ ಕೃಷಿ ಇಲಾಖೆ ಮಾತ್ರ ಕೈಚೆಲ್ಲಿ ಕೂತಿದೆ. ಕೇಂದ್ರ ಸರಕಾರದ ಬೀಜ ಕಾಯಿದೆ 1955, ಬೀಜ ಅಧಿನಿಯಮ 1966, ಬೀಜ ನಿಯಮಾವಳಿ 1968, ಬೀಜ ನಿಯಂತ್ರಣ ಆದೇಶ 1983 ಈ ಯಾವೊಂದು ಕಾಯಿದೆಯು ನಕಲಿ ಬೀಜ ಮಾರಾಟ ತಡೆಯುವಲ್ಲಿ ಯಶಸ್ವಿಯಾಗಿಲ್ಲ. ನಕಲಿ ಬೀಜ ಮಾರಾಟ ಮಾಡಿದ ಕಂಪನಿಗಳು ಸಿಕ್ಕಿಬಿದ್ದಾಗ ತಾತ್ಕಾಲಿಕ ಪರಿಹಾರ ಕೊಡಲಾಗುತ್ತಿದೆ. ವಿನಃ ಅವರ ಮೇಲೆ ಗಂಭೀರ ಕ್ರಿಮಿನಲ್ ಮೊಕದ್ದಮೆ ಹೂಡಿದ ಉದಾಹರಣೆ ಇಲ್ಲ. ಕೃಷಿ ಸಚಿವ ಬಂಡೆಪ್ಪ ಕಾಶಂಪುರ ನಕಲಿ ಬೀಜ ಮಾರಾಟಗಾರರನ್ನು ಗೂಂಡಾ ಕಾಯಿದೆಗೆ ಒಳಪಡಿಸಲಾಗುವುದು ಎಂದು ಘೋಷಿಸಿದ್ದಾರೆ. ಈಗ ಚಮತ್ಕಾರ ಕಂಪನಿಯು ಪೂರೈಸಿದ ಬೀಜಗಳು ಅವಧಿ ಮೀರಿದ ಬೀಜಗಳೆಂದು ವೈಜ್ಞಾನಿಕವಾಗಿ ಸಾಬೀತಾಗಿದೆ. ಕಂಪನಿಯ ಮಾಲೀಕರನ್ನು ಕೃಷಿ ಸಚಿವರು ಬಂಧಿಸಿ ಗೂಂಢಾ ಕಾಯ್ದೆಯಡಿ ಮಾಲಿಕರನ್ನು ತರುವರೆ? ಎಂದರೆ ಖಂಡಿತಾ ಇಲ್ಲ ಎನಿಸುತ್ತದೆ. ಪಯೋನಿರ್ ಕಾಳುಕಟ್ಟುವ ಹಂತದಲ್ಲಿ ಕೈಕೊಟ್ಟಿದೆ, ಸನ್‌ಬ್ರಾಂಡ್ ಮತ್ತು ಗಂಗಾ ಕಾವೇರಿ ಮೊಳಕೆ ಹಂತದಲ್ಲಿ ಕೈಕೊಟ್ಟಿದೆ. ಈಗಾಗಲೇ ಈ ಎಲ್ಲಾ ಕಂಪನಿಗಳ ಮೇಲೆ ಮಾನವಿ, ಕಾರಟಗಿ, ಗಂಗಾವತಿ, ಬಳ್ಳಾರಿಗಳಲ್ಲಿ ದೂರು ದಾಖಲಾಗಿವೆ. ರಾಯಚೂರಿನಲ್ಲಿ ತುಷಾರ ಗಿರಿನಾಥ್ ಜಿಲ್ಲಾಧಿಕಾರಿಯಾಗಿದ್ದಾಗ ಈ ಎಲ್ಲಾ ಕಂಪನಿಗಳ ನಕಲಿ ಬೀಜ ಪೂರೈಕೆ ಬಗ್ಗೆ ದೂರು ಕೊಡಲಾಗಿದೆ. ಆದರೆ ಪರಿಹಾರದ ಮಾತುಗಳು ಬಂದಿವೆ. ವಿನಃ ಕಂಪನಿ ಮಾಲೀಕರನ್ನು ಬಂಧಿಸಿ ಕ್ರಿಮಿನಲ್ ಮೊಕದ್ದಮೆ ಹೂಡಲು ಯಾರೊಬ್ಬರು ಮುಂದೆ ಬರುತ್ತಿಲ್ಲ. ಇಂತಹ ನರಸತ್ತ ಆಡಳಿತದಲ್ಲಿ ರೈತ ಹತಾಶನಾಗಿ ಆತ್ಮಹತ್ಯೆಗೆ ಹೋಗುತ್ತಿದ್ದಾನೆ. ಸರಕಾರವೇ ಪ್ರಾಯೋಜಿಸಿ ಕೊಲೆಗಳನ್ನು ಮಾಡುತ್ತಿದೆ.

ಕಳೆದ ವರ್ಷ ರಾಜ್ಯ ಸರಕಾರ 115 ಲಕ್ಷ ಟನ್ ಆಹಾರ ಉತ್ಪಾದನೆ ಗುರಿ ಇಟ್ಟುಕೊಂಡಿತ್ತು. ಆದರೆ ಉತ್ಪಾದನೆಯಾಗಿದ್ದು ಕೇವಲ 92 ಲಕ್ಷ ಟನ್ ಮಾತ್ರ. 23 ಲಕ್ಷ ಟನ್ ಕೊರತೆಯಾಯಿತು. ಇದಕ್ಕೆಲ್ಲಾ ನಕಲಿ ಬೀಜಗಳು, ಗೊಬ್ಬರ, ಕ್ರಿಮಿನಾಶಕಗಳು ಕಾರಣವಾದವು. ಆದರೆ ಸರಕಾರ ಮಾತ್ರ ನಕಲಿ ಬೀಜ, ಗೊಬ್ಬರ, ಕ್ರಿಮಿನಾಶಕಗಳ ವ್ಯವಸ್ಥಿತ ಜಾಲವೆ ಇದ್ದರೂ ಸಹ ಅದನ್ನು ಬೇರ್ಪಡಿಸಲು ಮುಂದಾಗುತ್ತಿಲ್ಲ. ಬೇಧಿಸಿದರೆ ತನ್ನ ಪಕ್ಷದ ಮುಖಂಡರುಗಳೇ ದೊಡ್ಡ ಸಂಖ್ಯೆಯಲ್ಲಿ ಸಿಕ್ಕಿ ಬೀಳುವರೆಂಬ ಅಂಜಿಕೆ ಸರಕಾರಕ್ಕೆ ಕಾಡುತ್ತಿರಬಹುದು.

ಸೇತು ಸಮುದ್ರಂ ವಿವಾದ

ಸಂಘ ಪರಿವಾರಕ್ಕಿನ್ನೊಂದು ಅಜೆಂಡಾ

ಭಾರತ ಮತ್ತು ಶ್ರೀಲಂಕಾ ನಡುವೆ ಸಮುದ್ರ ಆಳವಾಗಿಲ್ಲ. ಎರಡು ಭೂ ಪ್ರದೇಶಗಳ ನಡುವೆ ಸೇತುವೆಯಂತಿರುವ ಈ ರಚನೆಯನ್ನು 'ರಾಮಸೇತು' ಎಂದು ಕರೆಯಲಾಗುತ್ತದೆ. Adam's Bridge ಎಂತಲೂ ಅದನ್ನು ಕರೆಯಲಾಗುತ್ತದೆ. ಸೇತುವೆಯಂತಿರುವ ಈ ರಚನೆಯನ್ನು ಅಗೆದು ಹಡಗುಗಳು ಹಾದುಹೋಗಲು ಒಂದು ಕಾಲುವೆಯನ್ನು ನಿರ್ಮಿಸುವ ಯೋಜನೆಯು ಇಂದು ವಿವಾದ ಗ್ರಸ್ತವಾಗಿದೆ.



ಭಾರತ ಮತ್ತು ಶ್ರೀಲಂಕಾ ನಡುವೆ ಸಮುದ್ರವನ್ನು ಆಳವಾಗಿಸಿ ಹಡಗುಗಳು ಹಾದುಹೋಗಲು ಮಾರ್ಗವನ್ನು ರೂಪಿಸುವ ಯೋಜನೆ ಸುಮಾರು 150 ವರ್ಷಗಳಷ್ಟು ಹಳೆಯದಾಗಿದೆ. 1860ರಲ್ಲಿ 'ಸೇತು ಸಮುದ್ರಂ ಹಡಗು ಕಾಲುವೆ ಯೋಜನೆ' (ಎಸ್‌ಎಸ್‌ಸಿಪಿ) ಯನ್ನು ಮೊದಲು ರೂಪಿಸಲಾಗಿತ್ತು. ಪೂರ್ವ ಕರಾವಳಿಯ ಬಂದರುಗಳಿಗೆ ಮುಖ್ಯವಾಗಿ ತುತ್ತುಕೋಡಿ ಬಂದರಕ್ಕೆ ಹಡಗುಗಳನ್ನು ಆಕರ್ಷಿಸುವುದು ಮತ್ತು ಆ ಮೂಲಕ ಪೂರ್ವ ಕರಾವಳಿಯ ಅಭಿವೃದ್ಧಿಯನ್ನು ತೀವ್ರಗೊಳಿಸುವುದು ಈ ಯೋಜನೆಯ ಹಿಂದೆ ಇರುವ ಉದ್ದೇಶವಾಗಿತ್ತು.

ಸೇತುಸಮುದ್ರಂ ಯೋಜನೆಯ ಬಗ್ಗೆ ವಾದ ವಿವಾದಗಳು ನಡೆಯುತ್ತಲೇ ಬಂದಿವೆ. ಕೆಲವರು 'ಅದು ಎಂದೋ ಆಗಬೇಕಾಗಿತ್ತು' ಎಂದರೆ ಇನ್ನು ಕೆಲವರು ಅದರಿಂದ ಪರಿಸರಕ್ಕೆ ಧಕ್ಕೆಯಾಗಬಹುದೆಂಬ ಭೀತಿಯನ್ನು ವ್ಯಕ್ತಪಡಿಸಿದ್ದರು. ಈಗ ಕೇಂದ್ರ ಸರ್ಕಾರ ಶ್ರೀಲಂಕಾ ಸರ್ಕಾರದ ಸಹಕಾರದೊಂದಿಗೆ ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಬಿಜೆಪಿ ಮತ್ತು ಸಂಘಪರಿವಾರ ಈ ವಿವಾದಕ್ಕೆ ಕೋಮುವಾದಿ ತಿರುವು ಕೊಡಲು ಮುಂದಾಗಿದೆ. ಇದು ಕಾಂಗ್ರೆಸ್, ಡಿ.ಎಂ.ಕೆ. ಮತ್ತು ಎಡಪಕ್ಷಗಳ ಒಳಸಂಚು ಎಂದು ಆರೋಪಿಸುವ ಅವರು ಈ ಯೋಜನೆಯನ್ನು ಕೈಬಿಡದಿದ್ದರೆ ಚಳುವಳಿ ನಡೆಸಲಾಗುವುದೆಂದು ವಿಶ್ವ ಹಿಂದೂ ಪರಿಷತ್ತಿನ ಅಧ್ಯಕ್ಷ ಅಶೋಕ್ ಸಿಂಘಾಲ್ ಬೆದರಿಕೆ ಹಾಕಿದ್ದಾರೆ. ಶಂಕರಾಚಾರ್ಯರ ನಾಲ್ಕು ಪೀಠಗಳ ಜಗದ್ಗುರುಗಳು ಸಹ ಈ ಯೋಜನೆಯನ್ನು ವಿರೋಧಿಸಲು ಕರೆ ನೀಡಿದ್ದಾರೆ.

ವಾಸ್ತವವಾಗಿ, ಈ ಯೋಜನೆಯನ್ನು ತಮಿಳುನಾಡಿನ ಎಲ್ಲ ರಾಜಕೀಯ ಪಕ್ಷಗಳು ಬೆಂಬಲಿಸಿವೆ. ಈ ಯೋಜನೆಯ ಕೀರ್ತಿ ಯಾರಿಗೆ ಸಲ್ಲಬೇಕು ಎನ್ನುವ ವಿಷಯದಲ್ಲಿ ಜಯಲಲಿತಾರ ಎಐಎಡಿಎಂಕೆ, ವಿ.ಗೋಪಾಲಸ್ವಾಮಿ ಅವರ ಎಂಡಿಎಂಕೆ ಮತ್ತು ಎಂ.ಕರುಣಾನಿಧಿಯವರ ಡಿಎಂಕೆ ಪಕ್ಷಗಳ ನಡುವೆ ತೀವ್ರ ಪೈಪೋಟಿಯೇ ನಡೆದಿತ್ತು. ಮೊನ್ನೆ ಮೊನ್ನೆಯವರೆಗೆ ಬಿಜೆಪಿಯು ಸಹ ಈ ಯೋಜನೆಗೆ ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಚಾಲನೆ ಸಿಕ್ಕಿತು ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿತ್ತು.

ಯೋಜನೆಯ ಸ್ವರೂಪ


ಸೇತು ಸಮುದ್ರಂ ಕಾಲುವೆ ಯೋಜನೆಗೆ 2250 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜು ಮಾಡಲಾಗಿದೆ. ಇಲ್ಲಿ ಹಡಗುಗಳು ಹಾದುಹೋಗಲು ಬೇಕಾಗುವಷ್ಟು ಸಮುದ್ರ ಆಳವಾಗಿರದೆ ಇರುವುದರಿಂದ ಒಂದು ಕೃತಕ ಕಾಲುವೆಯನ್ನು ತೋಡುವುದೇ ಈ ಯೋಜನೆಯ ಉದ್ದೇಶವಾಗಿದೆ. ಈ ಕಾಲುವೆ ರಾಮಸೇತು ಮೂಲಕ ಹಾದು ಭಾರತದ ಆಗ್ನೇಯ ಕರಾವಳಿಯಲ್ಲಿನ ಮನ್ನಾರ್ ಕೊಲ್ಲಿ ಮತ್ತು ಪಾಕ್ ಕೊಲ್ಲಿ ಪ್ರದೇಶಗಳನ್ನು ಜೋಡಿಸಲಿದೆ. ಸುಮಾರು 260 ಕಿ.ಮೀ. ದೂರವನ್ನು ಕ್ರಮಿಸುವ ಈ ಕಾಲುವೆಯ ಅಗಲ 300 ಮೀ. ಆಗಲಿದ್ದು 12 ಮೀ. ಸರಾಸರಿ ಆಳ ಇರಲಿದೆ. ಇದರ ಮೂಲಕ ಸುಮಾರು ಹತ್ತರಿಂದ 12 ಸಾವಿರ ಟನ್ ಭಾರದ ಹಡಗುಗಳು ಹಾದು ಹೋಗಬಹುದಾಗಿದೆ. ಈಗ ಶ್ರೀಲಂಕಾವನ್ನು ಬಳಸಿಕೊಂಡು, 360 ಮೈಲು ದೂರವನ್ನು ಕ್ರಮಿಸಿ ಹಡಗುಗಳಿಗೆ ತುತ್ತುಕೋಡಿ ಬಂದರನ್ನು ತಲುಪಲು 36 ಗಂಟೆಗಳು ಬೇಕಾಗುತ್ತವೆ. ಇದರಿಂದ ಶ್ರೀಲಂಕಾಕ್ಕಿಂತ ಭಾರತಕ್ಕೆ ಹೆಚ್ಚು ಲಾಭವಾಗಲಿದೆ.



ಅಜೆಂಡಾ ಜಾರಿಯಲ್ಲಿ ಸಕ್ರಿಯರಾಗಿರುವ ಶಂಕರಪೀಠದ ಸ್ವಾಮಿಗಳು

ರಾಮಸೇತು ಮಾನವ ನಿರ್ಮಿತವೇ?

ಸೇತುಸಮುದ್ರಂ ಯೋಜನೆಗಾಗಿ ರಾಮಾಯಣ ಕಾಲದ ಸೇತುವೆಯನ್ನು ನಾಶಮಾಡಲಾಗುತ್ತಿದೆ ಎಂದು ಸಂಘಪರಿವಾರ ಗುಲ್ಲೆಬ್ಬಿಸಲು ಪ್ರಯತ್ನಿಸುತ್ತಿದೆ. ರಾಮನು ಲಂಕೆಗೆ ಹೋಗುವ ನಿರ್ಮಿಸಿದ ಸೇತುವೆಯೇ ಇದು ಎಂದು ಅದರ ಪ್ರತಿಪಾದನೆಯಾಗಿದೆ. ಆ ಸೇತುವೆ ಮಾನವ ನಿರ್ಮಿತ ಎಂಬುದನ್ನು 1966 ರಲ್ಲಿ ಅಮೇರಿಕಾದ ನಾಸಾ ಜೆಮಿನಿ XI ಗಗನ ನೌಕೆಯು ನಾಲ್ಕು ನೂರ ಹತ್ತು ಮೈಲಿ ಎತ್ತರದಿಂದ ತೆಗೆದಿರುವ ಚಿತ್ರದಿಂದ ಸ್ಪಷ್ಟವಾಗಿದೆ ಎಂದೂ ಆ ಸೇತುವೆಯ ವಿಶಿಷ್ಟ ರಚನೆ ಮತ್ತು ಅಲ್ಲಿ ದೊರಕಿರುವ ಅವಶೇಷಗಳ ಕಾರ್ಬನ್ ಡೇಟಿಂಗ್ ಅದು ಹದಿನೇಳು ಲಕ್ಷ ಐವತ್ತು ಸಾವಿರ ವರ್ಷಗಳಷ್ಟು ಹಳೆಯದೆಂಬುದನ್ನು ಖಚಿತಪಡಿಸಿದೆ ಎಂದು ಕಥೆ ಕಟ್ಟಿ ಹೇಳಲಾಗುತ್ತಿದೆ. ರಾಮಾಯಣ ಸಂಭವಿಸಿದ್ದು 'ತ್ರೇತಾಯುಗ' ದಲ್ಲಿ ಅಂದರೆ ಸುಮಾರು 17 ಲಕ್ಷ ವರ್ಷಗಳ ಹಿಂದೆ ಆಗಿರುವುದರಿಂದ ನಾಸಾ ಸಂಶೋಧನೆ ಸರಿಯಾಗಿಯೇ ಇದೆ ಎಂದು ಸಮರ್ಥಿಸಲಾಗುತ್ತಿದೆ.



ನಿತ್ಯಾನಂದಸ್ವಾಮಿ

'ನಾಸಾ' 1966 ರಲ್ಲಿ ನಡೆಸಿತ್ತೆನ್ನಲಾದ ಸಂಶೋಧನೆಯ ವೃತ್ತಾಂತವನ್ನು 1992 ರ ನಂತರ ಹೆಚ್ಚು ಪ್ರಚಾರಕ್ಕೆ ತರಲಾಯಿತು. ಈ ಅವಧಿಯಲ್ಲಿ ಕೊಲ್ಲಿ ಪ್ರದೇಶದಲ್ಲಿ ಯುದ್ಧದಲ್ಲಿ ನಿರತವಾದ ಅಮೇರಿಕಾದ ಬಗ್ಗೆ ಸಂಘ ಪರಿವಾರ ಶಕ್ತಿಗಳಿಗೆ ವಿಶೇಷ ಒಲವು ಮೂಡಲಾರಂಭಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಆದರೆ 'ಹಿಂದುಸ್ತಾನ್ ಟೈಮ್ಸ್' ನ ವಾಷಿಂಗ್‌ಟನ್ ವರದಿಗಾರ ಎಸ್.ರಾಜಗೋಪಾಲನ್ 2002 ಅಕ್ಟೋಬರ್ 17 ಸಂಚಿಕೆಯಲ್ಲಿ ಬರೆಯುತ್ತಾ ಸಂಘ ಪರಿವಾರ ಪ್ರಚಾರ ಮಾಡುತ್ತಿದ್ದ 'ನಾಸಾ ಸಂಶೋಧನೆ' ಯ ವೃತ್ತಾಂತವನ್ನು ಸ್ವತಃ ನಾಸಾ ಅಧಿಕಾರಿಗಳೇ ಅಲ್ಲಗಳೆದಿದ್ದಾರೆ ಎಂದು ಸ್ಪಷ್ಟಪಡಿಸಿದರು. ಗಗನ ನೌಕೆಯೊಂದರ ಮೂಲಕ ಪಡೆದ ಚಿತ್ರಗಳ ಮೂಲಕ ಒಂದು ಶಿಲಾಪದರದ ವಯಸ್ಸನ್ನಾಗಲಿ ಅದು ಮಾನವ ನಿರ್ಮಿತವೇ ಎಂದು ಹೇಳಲು ಸಾಧ್ಯವಿಲ್ಲವೆಂದು ಸ್ವತಃ 'ನಾಸಾ'ದ ಅಧಿಕಾರಿ ಮಾರ್ಕ್ ಹೆಸ್ಸ್ ಖಂಡತುಂಡವಾಗಿ ಹೇಳಿದ್ದಾರೆ ಎಂದು ಹಿಂದುಸ್ತಾನ್ ಟೈಮ್ಸ್ ವರದಿ ಮಾಡಿತು.

ಭೂ ಗರ್ಭಶಾಸ್ತ್ರಜ್ಞರು ಏನು ಹೇಳುತ್ತಾರೆ?

2003ರಲ್ಲಿ ತಿರುಚ್ಚಿಯ ಭಾರತಿದಾಸನ್ ವಿಶ್ವ ವಿದ್ಯಾಲಯದ Centre for Remote Sensing ವಿಭಾಗದ ಪ್ರೊ.ಎಸ್.ಎಂ. ರಾಮಸ್ವಾಮಿ ಅವರು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ ಪಾಕ್ ಕೊಲ್ಲಿಯ ಅಡ್ಡವಾಗಿ ಇರುವ ಈ ಸೇತುವೆಯಂತಹ ರಚನೆಯು ಸುಮಾರು 3,500 ವರ್ಷ ಹಳೆಯದು ಆಗಿದ್ದು ಸಂಘ ಪರಿವಾರದವರು ಹೇಳುವಂತೆ 17 ಲಕ್ಷ ವರ್ಷಗಳಷ್ಟು ಹಳೆಯದು ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಹಲವು ಸಣ್ಣ ಸಣ್ಣ ದ್ವೀಪಗಳನ್ನು ಜೋಡಿಸುವ ಸೇತುವೆಯಂತಿರುವ ಈ ಶಿಲಾಪದರವು ಮಾನವ ನಿರ್ಮಿತವಾದುದಲ್ಲ; ನೇರವಾಗಿ ರಾಶಿ ಬಿದ್ದ ಮರಳಿನಿಂದ ನೈಸರ್ಗಿಕವಾಗಿ ಅದು ರೂಪುಗೊಂಡಿದೆ ಎಂದು ಅವರು ವಿವರಿಸಿದ್ದಾರೆ.

2007 ಮಾರ್ಚ್ 17ರ ಹಿಂದೂ ದಿನಪತ್ರಿಕೆಯ ಸಂಚಿಕೆಯಲ್ಲಿ ತಮಿಳುನಾಡಿನ ಚಿದಂಬರಂ ಕಾಲೇಜಿನ ಭೂಗರ್ಭಶಾಸ್ತ್ರ ವಿಭಾಗ ಮತ್ತು ಸಂಶೋಧನಾ ಕೇಂದ್ರದ ವ್ಯಾಖ್ಯಾನಕಾರ ಎಸ್.ರಾಮಾನುಜಂ ಅವರ ಹೇಳಿಕೆಯೊಂದು ಪ್ರಕಟವಾಗಿದೆ. ಪಾಕ್ ಕೊಲ್ಲಿ ಮತ್ತು ಮನ್ನಾರ್ ಕೊಲ್ಲಿ ನಡುವಿನ ಸೇತುವೆಯಂತಹ ರಚನೆ ಆಳವಿಲ್ಲದ ನೀರಿನಲ್ಲಿರುವ ನಿಕ್ಷೇಪವಾಗಿದ್ದು ಗಾಳಿ, ನೀರು ಹೊತ್ತು ತಂದು ಹಾಕಿದ ಮರಳಿನಿಂದ ನಿರ್ಮಾಣವಾಗಿದೆಯಲ್ಲದೆ ಅದು ಮಾನವರಿಂದಾಗಲಿ ವಾನರರಿಂದಾಗಲಿ ರಚನೆಯಾದುದಲ್ಲ ಎಂದು ಹೇಳಿದ್ದಾರೆ. ಭಾರತ ಉಪಖಂಡವು ಅಂಟಾರ್ಕ್ಟಿಕದಿಂದ ಬೇರ್ಪಟ್ಟ ಸಾವಿರಾರು ವರ್ಷಗಳ ನಂತರ ರೂಪಗೊಂಡಿರುವ ಈ ರಚನೆಗೆ ಕರಾವಳಿಯ ನೀರಿನ ಹರಿವು ಕಾರಣವಾಗಿದೆ ಎಂದು ಅವರು ವಿವರಣೆ ನೀಡಿದ್ದಾರೆ.

ತ್ರೇತಾಯುಗದಲ್ಲಿ ಮಾನವರಿದ್ದರೆ?

ರಾಮಾಯಣವು ತ್ರೇತಾಯುಗದಲ್ಲಿ ಸಂಭವಿಸಿದ್ದರೆ ಮತ್ತು ತ್ರೇತಾಯುಗವು 17 ಲಕ್ಷ ವರ್ಷಗಳ ಹಿಂದೆ ಆಗಿ ಹೋಗಿದೆ ಎನ್ನುವುದಾದರೆ, 17 ಲಕ್ಷ ವರ್ಷಗಳ ಹಿಂದೆ ಭೂಮಿಯ ಈ ಪ್ರದೇಶದಲ್ಲಿ ಮಾನವ ಸಂತತಿ ಅಸ್ತಿತ್ವದಲ್ಲಿತ್ತೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ವೈಜ್ಞಾನಿಕ ಸಂಶೋಧನೆಗಳ ಪ್ರಕಾರ ಭೂಮಿಯ ಮೇಲೆ ಆಧುನಿಕ ಮಾನವ (ಹೋಮೋಸಾಪಿಯನ್ಸ್) ವಿಕಾಸಗೊಂಡು ಸುಮಾರು 2 ಲಕ್ಷ ವರ್ಷಗಳಾಗಿವೆ. ಇದಕ್ಕೂ ಒಂದೋ ಎರಡೋ ಲಕ್ಷ ವರ್ಷಗಳ ಹಿಂದೆ ಮಾನವ ಸಂತತಿಯ ಉಗಮವಾಗಿರಬಹುದು. ಆದರೆ 17 ಲಕ್ಷ ವರ್ಷಗಳ ಹಿಂದೆ ಭೂಮಿಯ ಮೇಲೆ ಮಾನವರು ಇದ್ದರು ಎಂದು ಸಾಬೀತುಪಡಿಸಲು ಯಾವ ಆಧಾರವೂ ಇಲ್ಲ. ಶ್ರೀಲಂಕಾವನ್ನು ಒಳಗೊಂಡ ಭಾರತದ ಈ ಉಪಖಂಡದಲ್ಲಿ ಮಾನವರು ಕಾಣಿಸಿಕೊಂಡು ಕೇವಲ 80 ಸಾವಿರ ವರ್ಷಗಳಾಗಿವೆ.

ಪರಿಸರದ ಪ್ರಶ್ನೆ

ಸೇತುಸಮುದ್ರಂ ಯೋಜನೆಯಿಂದ ಪರಿಸರದ ಮೇಲಾಗಬಹುದಾದ ಪರಿಣಾಮವನ್ನು ವೈಜ್ಞಾನಿಕವಾಗಿ ಪರಿಶೀಲಿಸುವುದು ಅಗತ್ಯವಿದೆ. ಆದರೆ ಈ ಪರಿಶೀಲನೆ ಎಲ್ಲ ಅಭಿವೃದ್ಧಿಯನ್ನು ವಿರೋಧಿಸುವ ಪರಿಸರ ವಾದಿಗಳ ದೃಷ್ಟಿಯಿಂದ ಆಗಬಾರದು. ಇಲ್ಲಿ ನಿರ್ಮಾಣ ಮಾಡಲಾಗುವ ಕಾಲುವೆ ಜೀವರಾಶಿಗಳ ಮೇಲೆ, ಸಸ್ಯರಾಶಿಗಳ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಸಾಧ್ಯತೆ ಇದೆಯಾ ಎಂಬುದನ್ನು ವಸ್ತು ನಿಷ್ಠವಾಗಿ ಪರಿಶೀಲಿಸುವುದು ಅಗತ್ಯವಿದೆ. ಅದು ಹಿಂದುಗಳ ಶ್ರದ್ಧೆಯ ಪ್ರಶ್ನೆ, ರಾಮ ಸೇತು ಎನ್ನುವ ಶಿಲಾಪದರವನ್ನು ಅಗೆದು ಕಾಲುವೆ ನಿರ್ಮಾಣ ಮಾಡಿದರೆ ಹಿಂದೂಗಳ ಭಾವನೆಗೆ ಧಕ್ಕೆಯಾಗುತ್ತದೆ ಎಂಬ ವಾದವನ್ನು ಎತ್ತಿಹಿಡಿಯುವ ಅಗತ್ಯವಿಲ್ಲ. ಹಿಂದುತ್ವ ಶಕ್ತಿಗಳಿಗೆ ಹಿಂದೂಗಳ ಭಾವನೆಗಳಿಗೆ ನೋವಾಗುವುದು ಮಾತ್ರ ಅರ್ಥವಾಗುತ್ತದೆ. ಇನ್ನುಳಿದವರಿಗೂ ಭಾವನೆಗಳಿರುತ್ತವೆ ಎಂಬುದು ಅವರಿಗೆ ಅರ್ಥವಾಗುವುದಿಲ್ಲ. ಜನತೆಯಿಂದ ಹೆಚ್ಚು ಹೆಚ್ಚಾಗಿ ತಿರಸ್ಕರಿಸಲ್ಪಡುತ್ತಾ ಮೂಲೆ ಗುಂಪಾಗುತ್ತಿರುವ ಇವರುಗಳು ಈಗ ರಾಮಸೇತು ಪ್ರಶ್ನೆಯನ್ನು ಬಳಸಿಕೊಂಡು ಮತ್ತೆ ಹಿಂದು ಮತ ಬ್ಯಾಂಕಿನ ಕ್ರೋಢೀಕರಣಕ್ಕೆ ಹೊರಟಿದ್ದಾರೆ.

ಭೂಗೋಳ, ಪುರಾಣ, ಕಾವ್ಯ

ರಾಮಾಯಣ ಕಾವ್ಯದಲ್ಲಿ ಪ್ರಸ್ತಾಪವಾಗಿರುವ ಅಯೋಧ್ಯಾ ನಗರವೇ ಈಗಿನ... ಉತ್ತರ ಪ್ರದೇಶದ ಅಯೋಧ್ಯೆ ಎಂದು ಸಂಘಪರಿವಾರದ ಜನ ವಿತಂಡ ಮಾಡುವುದು ನಮಗೆ ಚೆನ್ನಾಗಿ ಪರಿಚಯವಿದ್ದೇ ಇದೆ. ರಾಮ ಜನ್ಮಭೂಮಿ ಇಲ್ಲೇ ಇದೆ ಎಂದು ವಾದಿಸುತ್ತಾ ಸಂಘ ಪರಿವಾರ ಇಡೀ ದೇಶಕ್ಕೆ ಬೆಂಕಿ ಇಟ್ಟದ್ದು ನಮಗೆ ಗೊತ್ತಿದೆ.

ಕಾವ್ಯ, ಪುರಾಣಗಳಲ್ಲಿ ಬಂದ ನಗರ ಊರು ಪಟ್ಟಣ ಹೆಸರುಗಳನ್ನು ಆನಂತರ ತಮ್ಮ ತಮ್ಮ ಊರುಗಳಿಗೆ ಇಟ್ಟುಕೊಂಡಿರುವ ಸಾಧ್ಯತೆ ಇದೆ ಎಂಬುದೇ ಈ ಜನಗಳಿಗೆ ಹೊಳೆಯುವುದಿಲ್ಲ.

ರಾಮ ಲಂಕೆಗೆ ಸೇತುವೆ ಕಟ್ಟಿದ ಎಂಬುದು ಪುರಾಣ. ಇಂತಹ ಪುರಾಣಗಳೂ ಶೂನ್ಯದಲ್ಲಿ ಏನೂ ಸೃಷ್ಟಿಯಾಗಿರುವುದಿಲ್ಲ. ಪುರಾಣ, ಕಾವ್ಯಗಳನ್ನು ಸೃಷ್ಟಿಸಿದ ಜನರು ತಾವು ಕಂಡ ತಮ್ಮ ಸುತ್ತಮುತ್ತಲ ನೈಸರ್ಗಿಕ ಭೌಗೋಳಿಕ ಪರಿಸರವನ್ನು ಒಳಗೊಂಡಂತೆ. ಹಲವಾರು ವಿಷಯಗಳಿಂದ ಪ್ರಭಾವಿತರಾಗಿಯೂ ಪುರಾಣ, ಕಾವ್ಯಗಳನ್ನು ಸೃಷ್ಟಿಸಿರುವ ಸಾಧ್ಯತೆ ಇರುತ್ತದೆ. ಇಂತಹ ಸಾಧ್ಯತೆಯೂ ಸಂಘ ಪರಿವಾರಕ್ಕೆ ಹೊಳೆಯುವುದಿಲ್ಲ ಅಥವಾ ಇಂತಹ ಸಾಧ್ಯತೆಯನ್ನು ಪರಿಶೀಲಿಸುವುದೂ, ಈ ನಿಟ್ಟಿನಲ್ಲಿ ಯೋಚಿಸುವುದು ಅವರಿಗೆ ಬೇಕಿಲ್ಲ ಎಷ್ಟೇ ಆದರೂ 'ಯೋಚಿಸುವುದು ಚಿಂತಿಸುವುದು' ಇಂತದ್ದೆಲ್ಲಾ ಅಂದರೆ ಸ್ವಲ್ಪ ಅಷ್ಟಕ್ಕಷ್ಟೆ ಅಲ್ಲವೇ ಈ ಜನಕ್ಕೆ.

ನಡು ಮದ್ಯಾಣ ಮುಣುಗಿದ ಸೂರ್ಯ

ಅವಳ ಕಣ್ಣುಗಳು ನೀರ್ತುಂಬಿದ ಕೊಳಗಳಾಗಿದ್ದವು. ಗಂಟಲು ನರ ಉಬ್ಬಿ ಹೊರ ಬರುವ ದನಿಗೆ ತಡೆಯೊಡ್ಡುತ್ತಿತ್ತು. ಮುವ್ವತ್ತು ವರ್ಷ ಸಂಸಾರದ ನೊಗ ಹೊತ್ತವರು ಗಂಡ-ಹೆಂಡತಿ ಇಬ್ಬರೂ, 50ರ ಇಳಿ ವಯಸ್ಸಿನಲ್ಲಿ ಶಕ್ತಿಯೂ ಕುಗ್ಗಿದೆ. ಭಾರವೂ ಹೆಚ್ಚಿದೆ. ಒಂಟೆತ್ತು ರಂಟೆ ಹೊಡೆಯುವುದು ಹೇಗೆ? ಆದರೂ ರತ್ನಮ್ಮ ಎರಡುವರೆ ಎಕರೆ ತುಂಡು ಹೊಲದಲ್ಲಿ ಛಲದ ಬೀಜ ಬಿತ್ತಿ ಬೆಳೆಗಾಗಿ ಮತ್ತು ತಕ್ಕ ಬೆಲೆಗಾಗಿ ಕಾಯುತ್ತಿದ್ದಾಳೆ. ನಾನು ಸುಮ್ಮನೆ ಅವಳ ಮನಸ ಮಾತಿಗೆ ಕಿವಿಯಾಗಿ ಕುಳಿತ್ತಿದ್ದೆ.

"ಸಿಂಧನಕೇರಾದಿಂದ ಇಲ್ಲಿಗಿ ಬರ್ಲಾಕ-ಹೋಗ್ಲಾಕ ಶಂಬೋರ್ (ನೂರು ರೂ) ರೂಪಾಯಿ ಆಗ್ತದರೀ. ಕೈಗಡ ತಗೊಂಡು ಬಂದೀನಿ. ಯಾನ ಮಾಡಬೇಕು, ಹೆಗಲು ಕೊಟ್ಟು ದುಡ್ಯಾವನೇ ಹೊಂಟ ಹ್ವಾದ. ನವು ಜಿಂದಗಾಣಿದಾಗ ಸೂರ್ಯ ನಡು ಮದ್ಯಾಣೇ ಮುಣಗ್ಯಾನರೀ..." ಅಂತ ಹುಮನಾಬಾದ್ ತಾಲ್ಲೂಕಿನ ಸಿಂಧನಕೇರಾ ಹಳ್ಳಿಯ ರತ್ನಮ್ಮ ಒಂದು ವರ್ಷ ಹಿಂದೆ ನೇಣಿಗೆ ಕೊರಳೊಡ್ಡಿದ ಗಂಡನ ನೆನದು ಗದ್ಗದಿತಳಾಗಿ ಹೇಳುತ್ತಿದ್ದಳು.

'ಸೂರು ನನ ಗಂಡ ಕುಡದು ಸತ್ತಾನ, ಸಾಲಕ್ಕನೂ ಅವನಿಗ್ನೂ ಸಂಬಂಧ ಇಲ್ಲಂತ ಸರ್ಕಾರದೋರು ಸಹಾಯ ಮಾಡಲಾಕ ಮುಂದ ಬರಲಿಲ್ಲ... ಖರೆ ಹೇಳ್ತೀನ್ರೀ ಸಾಲ ಹೆಚ್ಚಾದಂಗ ನನ ಗಂಡ ಬಕ್ಕೋಳ ಕುಡಿಲಾಕ ಸುರು ಮಾಡದ. ಸಾವ್ಕಾರಿ ಸಾಲದೋರು ಮನಿಗೆ ಬಂದು ವಸೂಲಿಗೆ ನಿಂತ ಮ್ಯಾಲ ಅವನ ಬಾಯಾಂದು ಮಾತಗೋಳು ಸತ್ತು ಹೋದವು. ಬಂದ ವಾರ ಗಪ್ಪಾದಂವನು. ಯಾನಾಯ್ತೋ ಸತ್ತು ಹೋದವು. ಒಂದು ವಾರ ಗಪ್ಪಾದಂವನು ಯಾನಾಯ್ತೋ ಒಂದಿನ ಮುಂಜಾನಿ ಸಂಡಾಸಕ್ಕಂತ ತಂಬಿಗೆ ತಗೊಂಡು ಹೊಲದ ಕಡಿಗೆ ಹೋದವ್ನು ಹೊಳ್ಳಿ ಬರಲಿಲ್ಲರೀ ತಂಗೀ... ಹಾದಿಗೆ ಹೋಗಾ ಮಂದಿ ಮಾಯ್ನುಗಿಡಕ ಹೆಣಾ ನೇತಾಡಾದ ನೋಡಿ ಬಂದ ಹೇಳಿದ ಮ್ಯಾಲೇ ನಮಗ ಖಿನಾ ಆಯ್ತು.... ನಮುಗ ನಡು ನೀರಾಗ ನಿಂದರ್ಸಿ ಹ್ವಾದ...." ಅಂತ ರತ್ನಮ್ಮ ಬಾಯಿಗೆ ಸೆರಗೊತ್ತಿಕೊಂಡು ಬಿಕ್ಕತೊಡಗಿದಳು.

"ಏಟ್ ಸಾಲ ಮಾಡಿದ್ದ....?"


"ಯಾಡ್ ಲಕ್ಷದ ಮ್ಯಾಲ ಪನ್ನಾಸ್ ಹಜಾರ್ (21.5ಲಕ್ಷ) ವರ್ಷಾ ವರ್ಷಾ ಬಿತ್ತಬೇಕು. ಬೆಳಿಬೇಕು ಹೈರಾಣಾಗಿ. ಆದ್ರ ಲುಕ್ಸಾನದಾಗೇ ಬರಬೇಕು. ಸಾಲ ಮಾಡಿಲ್ಲಂದ್ರ ಮತ್ತು ಬಿತ್ತಂಗಿಲ್ಲ. ಮನಿ ತುಂಬ ಉಂಬಾ ಮಕ್ಕಳು. (ನಾಲ್ಕು ಗಂಡು ಮಕ್ಕಳು 2 ಹೆಣ್ಣಮಕ್ಕಳು) ಹೊಲಾ ಬಿಟ್ರ ಬ್ಯಾರೇ ಹಾದಿನೇ ಇಲ್ಲ. ಪಾರಗೊಳಿಗಿ ಓದಿಸಬೇಕಂದ್ರ ಅದಕ್ಕನೂ ಸಾಲ ಮಾಡಬೇಕು.

ಒಬ್ಬ ಮಗನಿಗೆ ಎಂಟನೆ ತನಕ ಓದ್ದಿ ಮುಂದಕ್ಕ ಚಾಗಲಿಲ್ಲ .(ನೀಗಲಿಲ್ಲ) ಬಿಡ್ತಿನ್ರಿ...". ರತ್ನಮ್ಮ ತನ್ನ ಗಂಡ ಭೀಮಸ್ಯಾ ಇಲ್ಲದ ಬದುಕು ನಡೆಸಲು ಕಳೆದ ವರ್ಷದಿಂದ ಬಹಳೇ ಹೈರಾಣಾಗುತ್ತಿರುವುದು ಢಾಳಾಗಿ ಗೋಚರಿಸುತ್ತಿತ್ತು. ಹಿರಿಯ ಮಗ ಪ್ರಕಾಶನಿಗೆ ಅಕ್ಷರದ ಮೇಲೆ ಅದಮ್ಯ ಪ್ರೀತಿ. ಆದರೆ ಹತ್ತು ಜನರ ಹೊಟ್ಟೆಗೆ ಅನ್ನಬೇಕಲ್ಲ.. ಅನ್ನ ಸಂಪಾದಿಸಲು ಹಣ ಬೇಕು. ಹಣ ಬೇಕೆಂದರೆ ಕೂಲಿಗೆ ಹೋಗಲೇಬೇಕು.

ಎರಡನೆಯ ಮಗ ದಯಾನಂದ ಹಿಗ್ಗಿನಿಂದ ಹೈಸ್ಕೂಲ ಕಟ್ಟೆ ಹತ್ತಿದ. ಆದರೆ ಫೀಜು ಕಟ್ಟುವವರು ಯಾರು? ಸಿಂಧನಕೇರಾದಿಂದ ಹುಮನಾಬಾದಿಗೆ ಹೋಗಬೇಕು.

"ಎರಡನೆಯ ಮಗನಿಗರೇ ಹ್ಯಾಂಗರೆ ಸಾಲಿಗೆ ಕಳಸಬೇಕಿತ್ತು"... ನಾನು ರತ್ನಮ್ಮಳಿಗೆ ಕೇಳಿದೆ.

"ನೀವಂಬಾದು ಖರೆ ಅದಾ. ದಿನಾ ಮುಂಜಾನಿ ಸಾಲಗಾರರ ಕಾಟ. ರಾತ್ರಿ ಆದ್ರ ಮನ್ಯಾಗ ನಮ್ದು ಗಂಡ ಹೆಣ್ತಿ ಜಗಡಾ. ಹೊಲ್ದಾಗ ಏನ ಬೆಳದುರ್ನೂ ಬರಖತ್ ಬರುವಲ್ದು. ಹ್ಯಾಂಗ್ ಓದಸಬೇಕು ನೀವರೆ ಹೇಳ್ರೀ...?"



ಖಾಸಗಿ ಸಾಲ, ಬ್ಯಾಂಕ್ ಸಾಲದಿಂದ ಜರ್ಜರಿತರಾಗಿದ್ದ ಗಂಡ ಹೆಂಡತಿಯ ಮಧ್ಯದಲ್ಲಿ ಜಗಳ ಕಾಲೂರಿತ್ತು. ಖಾಸಗಿ ಸಾಲದವರ ಅಪಮಾನ ಮರೆಯಲು ಭೀಮಸ್ಯಾ ಪಾಕೀಟು(ಸಾರಾಯಿ) ಮೊರೆ ಹೋಗುತ್ತಿದ್ದ. ಬೆಳೆದ ಎರಡು ಹೆಣ್ಣು ಮಕ್ಕಳ



ಬೀದರದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ವಿಧವಾ ಪತ್ನಿಯರಿದ್ದ ಸಮಾವೇಶದ ಬಳಿಕ ರತ್ನಮ್ಮಳ ಜೊತೆ ನೀಲಾ

ಮದುವೆ ಮಾಡಿದ್ದೇ ಹುಂಬ ಧೈರ್ಯವಾಗಿತ್ತು.

"ತಂಗೀ, ಮದಿ ಅಂದ್ರ ಸುಮ್ನ ಆಗ್ತದೇನು? ಹುಂಡಾ ಬಂಗಾರ, ಹಿಡದಂತಾ ಬಟ್ಟೆ-ಭಾಂಡಿ ಎಲ್ಲಾ ಮಾಡಲಾಕ ಮತ್ತು ಸಾಲ ಮಾಡಬೇಕಾಯ್ತು. ದನ ಕಾಯಾ ಪಾರಗನ್ನೂ ಪಂಚೀಸ್ ಹಜಾರ್ (25000) ಹುಂಡಾ(ವರದಕ್ಷಿಣೆ) ಕುಡಬೇಕು. ಬಡುರ ಮಕ್ಕಳಿಗೆ ಯಾರ ಮಾಡಕೋಬೇಕು ಹೇಳ್ರೀ? ಮತ್ತನು, ಹಾಂಗ... ಹಿಂದ ಮಾಡಿ ಹೆಣಮಕ್ಕಳ ಮದಿ ಮಾಡಿದೆವು.... ಆದ್ರ ಮದಿ ಸಾಲನೂ ಉಳದಾದ..."

"ರತ್ನಮ್ಮವ್ವ, ಸರ್ಕಾರದೋರು 1 ಲಕ್ಷ ಪರಿಹಾರ ಕೊಟ್ಟಾರಲ್ಲ...? ಆ ರೊಕ್ಕ ಏನ್ ಮಾಡದೀ....?"

"ಎನ್ರೀ ತಂಗಿ...ರೊಕ್ಕ ಹೊಂಟದ ಅಂಬಾ ಸುದ್ದಿ ಕೇಳಿನೇ ಸಾಲಗಾರರು ಮುನಿ ಮುಂದ ಲೈನ್ ಹಚ್ಚಾದುರು. ಯಾರಿಗೆ ಕುಡಬೇಕು ಯಾರಿಗೆ ಬಿಡಬೇಕು".... ಬಂದ ರೊಕ್ಕ ನಾಕ ದಿನದಾಗ ಹರದ ಹಂಚಿ ಹೋಯ್ತು..... ಈ ಕೈಲಿಂದ ಲಾಖ್ ರೂಪಾಯಿ ಎಣಿಸಲಿಲ್ಲ. ಈ ಕಣ್ಣ ಪಾಪಿಲಿಂದ ಲಾಖ್ ರೂಪಾಯಿ ನೋಡಲಿಲ್ಲ. ಹೀಂಗ ಬಂದ ಹಾಂಗ ಹೋಯ್ತು ಅಂಬಂಗಾಯ್ತು. ಇದ್ದ ಸಾಲಾ ಇದ್ದಂಗೇ ಅದಾ..."

"ಅಲ್ಲ ರತ್ನಮ್ಮ ನಾಕ್ ಮಕ್ಕಳು ದುಡಿಲಾಕ್ ಆಗ್ಯಾರ. ಸರ್ಕಾರ ರೇಷನ್ ಕಾರ್ಡ್ ಕೊಟ್ಟಿರಬೇಕು.... ಬದುಕರೇ ಚಿಂತಿಲ್ದಂಗ ನಡೆಸಬಹುದಲ್ಲಾ...?" ನನ್ನ ಪ್ರಶ್ನೆಗೆ ರತ್ನಮ್ಮ ಥಟ್ಟಂತ ಕಿಡಿ ಕಿಡಿಯಾದಳು...

"ಈ ಸರ್ಕಾರದ್ದು ಯಾನ ತಂದೀರಿ? ರೇಷನ್ ದುಕಾನದಾಗ ಹಿಟ್ಟಾಗ ಮುಗ್ಗನಂಥ ಅಕ್ಕಿ ಬಿಟ್ರ ಮತ್ತೇನದಾ...? ಇದು ಬಡುರ ಸರ್ಕಾರಲ್ಲ... ಬಡುರ ಕಾರ್ಡು ಸಾವ್ಕಾರರಿಗಿ ಕೊಟ್ಟದ... ಮತ್ತ ಮಕ್ಕಳು ಕೂಲಿಗೆ ಹೋಗತಾವ ಖರೆ ಅದ. ಕೈಗೆ ಬಂದ ಕೂಲಿದಾಗ ಸಂಸಾರ ನಡ್ಸಾದು ಭಾಳ ದುಸ್ತರ್ ಅದಾ. ಎಲ್ಲಾ ಪಿರೆ ಆಗಿ ಕುಂತದ..."

ಹೌದು ರತ್ನಮ್ಮ ಹೇಳುವ ಮಾತಿನಲ್ಲಿ ಖಂಡಿತ ಸತ್ಯಾಂಶ ಇದೆ. ಜೀವನಾವಶ್ಯಕ ವಸ್ತುಗಳ ಬೆಲೆ ಮುಗಿಲಿಗೆ ಮುಟ್ಟಿವೆ. ರೇಷನ್ ಕಾರ್ಡ್ ಇಲ್ಲ, ಕಾರ್ಡಿದ್ದರೂ ಅಕ್ಕಿ ಬಿಟ್ಟರೆ ಮತ್ತೇನು ಸಿಗದು. ಈ ಬಾರಿಯ ಕಬ್ಬು ಸಿಹಿಯ ಬದಲಿಗೆ ಕಹಿಯಾಗಿದೆ. ರೈತರು ಆತ್ಮಹತ್ಯೆ ಮಾಡಿಕೊಂಡರೆ ಕುರ್ಚಿ ಬಿಡುತ್ತೇನೆ ಎಂದ ಮುಖ್ಯಮಂತ್ರಿ ರತ್ನಮ್ಮನ ಪ್ರಶ್ನೆಗಳಿಗೆ ಉತ್ತರ ಕೊಡುವರೇ? "ರೈತರು ಸತ್ತರೆ ಸಾಯಲಿ..." ಎಂದ ಮಾಜಿ ಪ್ರಧಾನಿ ದೇವೇಗೌಡ್ರು, ಮಣ್ಣಿನ ಮಗನಲ್ಲ ಕಲ್ಲು ಹೃದಯದ ಮಗನಿರಬೇಕು...

ರತ್ನಮ್ಮಳಿಗೆ ಮಾತಾಡುವಾಗಲೇ ಅರವತ್ತು ವಯಸ್ಸಿನ ಸುಭಾಷ್ ಸಿರ್ಸೆ, ಎರಡೇ ತಿಂಗಳ ಹಿಂದೆ ಸಾಲ ಹೆಚ್ಚಾಗಿ ಕಬ್ಬು ಕಾರ್ಖಾನೆಗೆ ಹೋಗದೆ ಕಂಗಾಲಾದ ಹರೆಯದ ಮಗ (23 ವಯಸ್ಸು) ನನ್ನು ಕಳಕೊಂಡ ದುಃಖ ತಡೆಯದೆ ಹನಿಗಣ್ಣಾಗಿ ಆರ್ದ್ರತೆಯಿಂದ ನಿಂತಿದ್ದರು.

ರೈತ ನ್ಯಾಯಾಲಯದ ಕಟಕಟೆಯಲ್ಲಿ ಕರುಳು ಕರಗುವ ಕತೆಗಳು ಒಂದೊಂದಾಗಿ ಸಾಕ್ಷ್ಯ ನುಡಿಯುತ್ತಿದ್ದವು. "ರತ್ನಮ್ಮ ಈ ಕಟುಕರ ರಾಜ್ಯದಾಗ ಹೋರಾಟ ಬಿಟ್ರ ದಾರಿ ಇಲ್ಲ... ಏನಂತೀ?" ಅಂದೆ.

"ಸುಮ್ಮ ಕೂಡಾ ಬದಲಿಗೆ ಹೋರಾಡಾಣ ಬಿಡ್ರಿ..." ರತ್ನಮ್ಮಳ ಕಣ್ಣ ಕಾಂತಿಯಲ್ಲಿ ಒಂದು ಬೆಳಕಿನ ತುಣುಕಿತ್ತು.

○

ಕೋಲಾರದಲ್ಲಿ ವಿಶಿಷ್ಟ ಸಮಸ್ಯೆ

ಸಾಲ, ಮತ್ತೂ ಸಾಲ, ಸಿಗದ ಸಾಲ

ರೈತರ ದುಂಡು ಮೇಜಿನ ಸಭೆ

ಕೋಲಾರ ಜಿಲ್ಲೆಯ ರೈತರ ಪರಿಸ್ಥಿತಿ ಹೇಳತೀರದು. ಒಂದೆಡೆ ನೀರಾವರಿ ಸೌಲಭ್ಯವಿಲ್ಲದೆ ಹಪಹಪಿಸುತ್ತಿದ್ದಾರೆ. ಆದರೂ ಅನ್ಯ ಮಾರ್ಗವಿಲ್ಲದೆ ಲಕ್ಷಾಂತರ ರೂ.ಬಂಡವಾಳ ತೊಡಗಿಸಿ ಕೊಳವೆ ಬಾವಿ ಕೊರೆಸಿ ಬೆಳೆ ತೆಗೆದರೆ ಸೂಕ್ತ ಬೆಲೆ ಸಿಗದೆ ಆತ್ಮಹತ್ಯೆ ದಾರಿ ಹಿಡಿಯುವಂತಾಗಿದೆ. ಒಂದೆಡೆ ಬ್ಯಾಂಕ್‌ಗಳು ಸರಿಯಾದ ಸಮಯಕ್ಕೆ ಸಾಲ ನೀಡದೆ ರೈತರಿಗೆ ವಂಚನೆ ಮಾಡುತ್ತಿದ್ದರೆ ವಿಧಿಯಿಲ್ಲದೆ ಬೇರೆಯವರ ಹತ್ತಿರ ಶೇಕಡ 30ಕ್ಕಿಂತಲೂ ಹೆಚ್ಚು ಬಡ್ಡಿ ತೆತ್ತು ಸಾಲಪಡೆದು ವ್ಯವಸಾಯ ಕೃಷಿಗೆ ಬಂಡವಾಳ ತೊಡಗಿಸುವಂತಾಗಿದೆ. ಹೀಗಿದ್ದ ಮೇಲೆ ರೈತರು ಬದುಕುವುದಾದರೂ ಎಂತು?

ಇಂತಹ ಸಂದರ್ಭದಲ್ಲಿ ರೈತರಿಗೆ ನೆರವಾಗಬೇಕಾಗಿದ್ದ ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ. ಕೆಲವರನ್ನು ಹೊರತುಪಡಿಸಿದರೆ ಜಿಲ್ಲೆಯ ಜನಪ್ರತಿನಿಧಿಗಳು ನಮಗೂ ರೈತರಿಗೂ ಸಂಬಂಧ ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. ರೈತರಿಗಾಗಿಯೇ ಅಸ್ತಿತ್ವಕ್ಕೆ ಬಂದ ಮಹತ್ವಾಕಾಂಕ್ಷೆಯ ಸಹಕಾರ ಸಂಘಗಳು ರಾಜಕೀಯ ನಿರಾಶ್ರಿತರ, ಪುಡಾರಿಗಳ ಅಡ್ಡೆಗಳಾಗಿದ್ದು, ಇದ್ದ ಸಂಪನ್ಮೂಲ, ಹಣವನ್ನೆಲ್ಲ ಲೂಟಿ ಮಾಡಿದ್ದಾರೆ. ರೈತರು ಆಕಾಶ ದಿಟ್ಟಿಸುತ್ತ ಕೈಚೆಲ್ಲಿ ಕುಳಿತಿದ್ದಾರೆ.

ಈ ಕುರಿತು ಗಂಭೀರವಾಗಿ ಚಿಂತನೆ ನಡೆಸಿದ ಕರ್ನಾಟಕ ಪ್ರಾಂತ ರೈತಸಂಘ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು, ರೈತ ಮುಖಂಡರು ವಿವಿಧ ಸಂಘ ಸಂಸ್ಥೆಗಳ ಮುಖಂಡರುನ್ನು ಸೇರಿಸಿ ಜೂನ್ 22 ರಂದು ಕೋಲಾರದ ಸಹಕಾರಿ ಭವನದಲ್ಲಿ ದುಂಡು ಮೇಜಿನ ಸಭೆಯನ್ನು ಸಂಘಟಿಸಿತು. ಬಾಗೇಪಲ್ಲಿ ಶಾಸಕರಾದ ಜಿ.ವಿ.ಶ್ರೀರಾಮ ರೆಡ್ಡಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ಎಲ್ಲ ಮುಖಂಡರು ಗಹನವಾಗಿ ಚರ್ಚೆ ನಡೆಸಿ ರೈತರನ್ನು ಈ ಸಂಕಷ್ಟದಿಂದ ಪಾರು ಮಾಡಲು ಇರುವ ಹಲವಾರು ದಾರಿಗಳ ಬಗ್ಗೆ ಮಾತುಕತೆ ನಡೆಸಿದರು. ಹಲವಾರು ಪ್ರಮುಖ ನಿರ್ಣಯಗಳನ್ನು ಸಹ ಕೈಗೊಂಡರು.

ಬಾರದ ಶಾಸಕರು

ಜಿಲ್ಲೆಯ ಎಲ್ಲ ಶಾಸಕರಿಗೂ ಆಹ್ವಾನ ನೀಡಿದ್ದರೂ ಚಿಂತಾಮಣಿ ಶಾಸಕ ಸುಧಾಕರ ರೆಡ್ಡಿ ಮಾತ್ರ ಸಭೆಗೆ ಹಾಜರಾಗಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಆಲಂಗೂರು ಶ್ರೀನಿವಾಸ್ ಸೇರಿದಂತೆ ಇನ್ನೂ ಹಲವಾರು ಮುಖಂಡರು ತಮ್ಮ ವೈಯಕ್ತಿಕ ಕಾರಣಗಳಿಂದಾಗಿ ಸಭೆ ಗೈರು ಹಾಜರಾಗಿದ್ದು ರೈತರ ಕುರಿತ ಅವರ ಕಾಳಜಿಯನ್ನು ಶ್ರುತಪಡಿಸಿದರು.

ಸಾಲದ ಆತ್ಮಹತ್ಯೆಗಳು

ಜಿಲ್ಲೆಯ ರೈತರು ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಭಾರಿ ಬಂಡವಾಳ ತೊಡಗಿಸಬೇಕಾಗಿದೆ. ಬ್ಯಾಂಕ್‌ಗಳು ಮತ್ತು ಸಹಕಾರಿ ಸಂಘಗಳಿಂದ ಸಾಲ ದೊರೆಯದಿದ್ದ ಸಂದರ್ಭದಲ್ಲಿ ಖಾಸಗಿಯಾಗಿ ಹೆಚ್ಚಿನ ಬಡ್ಡಿದರಕ್ಕೆ ಸಾಲ ಪಡೆಯುವಂತಾಗಿದೆ. ಇಷ್ಟೆಲ್ಲ ಕಷ್ಟ ಪಟ್ಟು ಬೆಳೆ ಬೆಳೆದರೂ ಸೂಕ್ತ ಬೆಲೆ ಸಿಗದೆ ಹುಲಿ ಬಾಯಿಗೆ ಸಿಕ್ಕ ಹುಲ್ಲೆಯಂತಾಗಿದ್ದಾನೆ. ಈ ಸಂದರ್ಭದಲ್ಲಿ ಸಭೆಯಲ್ಲಿ ಮಾತನಾಡಿದ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಜಿಲ್ಲೆಯ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟರು. ಒಂದೆಡೆ ರೈತರು ಕೃಷಿಗೆ ತೊಡಗಿಸಬೇಕಾದ ಬಂಡವಾಳ ಹೆಚ್ಚಾಗಿದೆ. ಹೀಗಿರುವಾಗ ಬದುಕಲು ಏನಾದರೂ ಮಾಡಬೇಕೆಂದು ನಿರ್ಧರಿಸಿ ಕೃಷಿಯಲ್ಲಿ ತೊಡಗೋಣ ಎಂದರೆ ಬಳಿ ಬಂಡವಾಳ ಇಲ್ಲ.ಹಾಗಿದ್ದ ಮೇಲೆ ಏನು ಮಾಡುವುದು. ಸಾಲ ಮಾಡಬೇಕು. ಬ್ಯಾಂಕ್‌ಗಳು, ಸಹಕಾರಿ ಸಂಘಗಳಿಂದ ಸಾಲ ದೊರಯದಿದ್ದಾಗ ಅನ್ಯ ಮಾರ್ಗವಿಲ್ಲದೆ ಬಾಹ್ಯ ಸಾಲ ಪಡೆಯಬೇಕು. ಒಂದು ವೇಳೆ ಸಾಲ ಮಾಡಿ ಬೆಳೆ ತೆಗೆದರೆ ಸರಿಯಾದ ಬೆಲೆ ಸಿಗದೆ ರೈತರು ಆತ್ಮಹತ್ಯೆಯನ್ನು ಆಯ್ಕೆ ಮಾಡಿಕೊಳ್ಳುವಂತಾಗಿದೆ.ಯುಪಿಎ ಸರ್ಕಾರ 1ಲಕ್ಷ 40ಸಾವಿರ ಕೋಟಿ ರೂ. ಪರಿಹಾರ ಘೋಷಿಸಿದರೂ ಆತ್ಮಹತ್ಯೆಗಳು ನಿಲ್ಲುತ್ತಿಲ್ಲ ಎಂದು ಬಯ್ಯಾರೆಡ್ಡಿ ನೊಂದು ನುಡಿದರು.

ರಾಜ್ಯದಲ್ಲಿ 70.69ಲಕ್ಷ ರೈತ ಕುಟುಂಬಗಳಿದ್ದು, 23ಲಕ್ಷ ರೈತರಿಗೆ ಮಾತ್ರ ಸಾಲ ದಕ್ಕಿದೆ. ಇದರಲ್ಲಿ ಎರಡು ಮೂರು ಬಾರಿ ಪಡೆದ ದಗಲ್ಬಾಜಿಗಳೇ ಹೆಚ್ಚು. ಅಂದ ಮೇಲೆ ಇನ್ನೂ 43ಲಕ್ಷ ಕುಟುಂಬಗಳಿಗೆ ಸಾಲಸಿಕ್ಕಿಲ್ಲ ಎಂದರ್ಥ.

ಜಿಲ್ಲೆಯ ರೈತರಿಗೆ ಪ್ರತಿವರ್ಷ 50-60ಕೋಟಿ ರೂ.ಕೃಷಿ ಸಾಲದ ಅಗತ್ಯವಿದೆ. ಆದರೆ ಕೋಲಾರದ ಡಿಸಿಸಿ ಬ್ಯಾಂಕ್ ದಿವಾಳಿಯಾಗಿರುವುದರಿಂದ 2001ರಿಂದ ಸಾಲ ಸೌಲಭ್ಯ ಸ್ಥಗಿತಗೊಂಡಿದೆ. ಹಾಗಿದ್ದ ಮೇಲೆ ರೈತರು ಏನು ಮಾಡುವುದು ಎಂದು ಪ್ರಶ್ನಿಸಿದರು. ಬ್ಯಾಂಕ್‌ಗಳಲ್ಲಿ ಟ್ರಾಕ್ಟರ್‌ಗೆ ಸಾಲ ನೀಡುತ್ತಾರೆ ಆದರೆ ಕೃಷಿ ಸಾಲ ನೀಡುತ್ತಿಲ್ಲ. ಡಿಸಿಸಿ

ಪುಟ 12ಕ್ಕೆ

ದಲಿತರಿಗೆ ಮನೆಯೂ ಇಲ್ಲ... ಮಸಣವೂ ಇಲ್ಲ...

ಬೆಂಗಳೂರು ಭೂಮಿಯ ಬೆಲೆ ಏರಿದಂತೆ ಅದರ ಬಿಸಿ ಮಂಡ್ಯಕ್ಕೆ, ಬೆಲೆಗಳೂ ಗಗನಕ್ಕೆ! ಸಂಸಾರ ಬೆಳೆದಂತೆಲ್ಲಾ ದಲಿತರಿಗೆ ಇರುವ ಗೂಡು ಏನಕ್ಕೂ ಸಾಲದು. ಆದರೆ ಜಾಗ ಕೊಳ್ಳುವ ಸಾಮರ್ಥ್ಯ ಇಲ್ಲ, ಒಂದು ವೇಳೆ ಜಾಗ ಖರೀದಿಸಲು ಮುಂದಾದರೆ ಮಾರುವವರಿಲ್ಲ. ಯಾಕೆಂದರೆ ದಲಿತರನ್ನು ಸವರ್ಣೀಯರು ತಮ್ಮ ನಡುವೆ ವಾಸಿಸಲು ಬಿಡುತ್ತಾರೆಯೇ? ಹಾಗಾದರೆ...? ದಲಿತರಿಗಾಗಿ ವಾಸಕ್ಕೆ ಒಂದು ಸೈಟ್ ಸಿಗುವುದೆಂತು?

ಬೆಂಗಳೂರಿನಲ್ಲಿ ಭೂ ಮಾಫಿಯಾದ ಪಿಡುಗು ಆವರಿಸಿದಂತೆಲ್ಲಾ ಅದರ ತೀವ್ರತೆ ಅಕ್ಕಪಕ್ಕದ ಜಿಲ್ಲೆಗಳಲ್ಲೂ ಕಂಪನವನ್ನೇಳಿಸುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಭೂಮಿಯ ಬೆಲೆ ಗಗನಕ್ಕೇರಿದೆ. ಗುಂಟೆಯೊಂದಕ್ಕೆ 20 ಸಾವಿರದಿಂದ 50 ಸಾವಿರ ರೂಗಳವರೆಗೆ ಮುಟ್ಟಿದೆ. ಇದರ ತಕ್ಷಣದ ಪರಿಣಾಮವಾಗುತ್ತಿರುವುದು ಕೃಷಿ ಕೂಲಿಕಾರರಿಗೆ ಮುಖ್ಯವಾಗಿ ಶೇಕಡ 80-90 ರಷ್ಟು ಕೂಲಿಕಾರರಾಗಿರುವ ದಲಿತರಿಗೆ.

ಇತ್ತೀಚೆಗೆ ದಲಿತರ ಹಕ್ಕುಗಳಿಗಾಗಿನ ಪ್ರತಿಭಟನೆಗಾಗಿ ಜನರನ್ನು ಸಂಘಟಿಸಲು ಹಳ್ಳಿಗಳಿಗೆ ತೆರಳಿ ದಲಿತರ ನಡುವೆ ಕುಳಿತು ಮಾತಾಡಿದಾಗ ಅವರ ಸಂಕಷ್ಟದ ಸುರುಳಿಗಳು ಬಿಚ್ಚಿಕೊಂಡವು. ದಾಸನದೊಡ್ಡಿ ಎಂಬ ಗ್ರಾಮದಲ್ಲಿ 80-90 ದಲಿತ ಕುಟುಂಬಗಳಿವೆ. ಆ ಎಲ್ಲಾ ಕುಟುಂಬಗಳಿಗೂ ಕೂಲಿಯೇ ಆಧಾರ. ಅಷ್ಟು ಮನೆಗಳಲ್ಲಿ ಒಬ್ಬನೇ ಒಬ್ಬ ಯುವಕನಿಲ್ಲ. ಎಲ್ಲರೂ ಬೆಂಗಳೂರಿಗೆ ಕೂಲಿಗೆ ಹೋದವರೇ, ನೀರಾವರಿಯೂ ಇಲ್ಲದಿರುವುದರಿಂದ ಆ ಪ್ರದೇಶದಲ್ಲಿ ಕೂಲಿಯೂ ಕಡಿಮೆ. ವರ್ಷದಲ್ಲಿ ಕೇವಲ 3 ತಿಂಗಳು ಮಾತ್ರ ಕೂಲಿ ಸಿಗುವ ಊರು ಅದು.

ಅಲ್ಲಿರುವ ಎಲ್ಲಾ ಕುಟುಂಬಗಳಿಗಿರುವುದು 20-30 ಅಳತೆಯ ತಲಾ ಒಂದು ನಿವೇಶನ, ಸರ್ಕಾರಿ ಅನುದಾನದಿಂದ ಅಲ್ಲಿ ಮನೆಗಳನ್ನು ಕಟ್ಟಿಕೊಳ್ಳಲಾಗಿದೆ. ಈ ನಿವೇಶನಗಳನ್ನು ಬಿಟ್ಟರೆ ಅವರಿಗೆ ಇನ್ನೊಂದು ಇಂಚು ಜಾಗವೂ ಇಲ್ಲ. 80ರ ದಶಕದಲ್ಲಿ ಸರ್ಕಾರ ನಿವೇಶನ ನೀಡಿದ್ದನ್ನು ಬಿಟ್ಟರೆ ಕಳೆದ 20-25 ವರ್ಷಗಳಲ್ಲಿ ಸರ್ಕಾರದಿಂದ ಅಂತಹ ಯಾವುದೇ ಯೋಜನೆ ಬಂದಿಲ್ಲ. 20 ವರ್ಷಗಳ ಹಿಂದೆ ಗಂಡ-ಹೆಂಡತಿ ನಾಲ್ಕು ಮಕ್ಕಳಿದ್ದ ಒಂದು ಸಂಸಾರ ಇಂದು ನಾಲ್ಕು ಸಂಸಾರಗಳಾಗಿವೆ. ಆ ನಾಲ್ಕು ಸಂಸಾರಗಳು ಈಗ ಈ ಚಿಕ್ಕ ಜಾಗದಲ್ಲೇ ಬದುಕು ಸಾಗಿಸಬೇಕಿದೆ. ಮದುವೆಯಾದವರಿಗೆ ಖಾಸಗಿ ಬದುಕು ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿ ಇದೆ. ನಾವು ಮಾತನಾಡುವಾಗ ದಲಿತರಾಗಿ ಮಕ್ಕಳನ್ನು ಹಡೆದದ್ದು ತಪ್ಪಾಗಿ ಹೋಯಿತೆಂದು ನೊಂದುಕೊಂಡರು ಹಿರಿಯ ಈರಯ್ಯ.

ಹುಲ್ಲಗಾಲ ಎಂಬ ಗ್ರಾಮದಲ್ಲಿ ನೂರಕ್ಕೂ ಹೆಚ್ಚು ದಲಿತ ಕುಟುಂಬಗಳಿದ್ದು, ಅಲ್ಲಿಯೂ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ ಸರಿ ಸುಮಾರು ಇಲ್ಲಿರುವ ಎಲ್ಲಾ ಕುಟುಂಬಗಳು ಕೂಲಿಕಾರರೇ, ತಮ್ಮ ಹೊಟ್ಟೆಗೆ ರೇಷನ್ ಕೊಳ್ಳಲು ಶಕ್ತಿ ಇಲ್ಲದ ಇವರು ನಿವೇಶನ ಕೊಳ್ಳುವ ಮಾತಂತೂ ಸಾಧ್ಯವಿಲ್ಲ.

ನಾವು ಸಭೆ ನಡೆಸಿದ ತೊರೆಶೆಟ್ಟಿಹಳ್ಳಿ, ಎನ್.ಎಂ.ಹಳ್ಳಿ, ಕೆ.ಕೆ.ದೊಡ್ಡಿ, ಇಲ್ಲೆಲ್ಲಾ ಸರಿ ಸುಮಾರು ಇದೇ ಪರಿಸ್ಥಿತಿ.

ಜೀವಮಾನವಿಡೀ ದುಡಿದರೂ.....

ಇಂಚಿಂಚು ನೆಲವು ಲಾಭದ ಮೂಲವಾಗುತ್ತಿರುವ ಈ ದಿನಗಳಲ್ಲಿ ದಲಿತರು ಚಿನ್ನದ ಬೆಲೆ ನೀಡಿ ಭೂಮಿ ಕೊಳ್ಳುವುದಂತೂ ಸಾಧ್ಯವೇ ಇಲ್ಲ. ದಿನಕ್ಕೆ 25 ರೂ. ಕೂಲಿ ಗಳಿಸಿ ದಲಿತನೊಬ್ಬ ಜೀವಮಾನವಿಡಿ ದುಡಿದರೂ ಒಂದು ನಿವೇಶನ ಕೊಳ್ಳಲು ಸಾಧ್ಯವಿಲ್ಲ. ಎರಡನೆಯದಾಗಿ, ದಲಿತನೊಬ್ಬನಿಗೆ ನಿವೇಶನಕೊಳ್ಳುವ ಶಕ್ತಿ ಬಂದರೂ ಅವನು ಕೊಳ್ಳಲು ಜಾತಿ ವ್ಯವಸ್ಥೆ ಬಿಡುವುದಿಲ್ಲ. ಏಕೆಂದರೆ, ಯಾರೋ ದಲಿತನಿಗೆ ಸೈಟು ಕೊಟ್ಟು ಅವನನ್ನು ತಮ್ಮ ಮಧ್ಯೆ ಜೀವಿಸಲು ಅವಕಾಶ ಮಾಡಿಕೊಡಲು ಬಹುತೇಕ ಯಾವ ಸವರ್ಣೀಯನೂ ಒಪ್ಪುವುದಿಲ್ಲ. ಹಾಗಾಗಿ ದಲಿತರು ತಾವಾಗಿಯೇ ಭೂಮಿಯನ್ನು ಕೊಳ್ಳಲು ಅವರಿಗೆ ಶಕ್ತಿಯೂ ಇಲ್ಲ, ಪಾಳೇಗಾರಿ ವ್ಯವಸ್ಥೆ ಅದಕ್ಕೆ ಅವಕಾಶವನ್ನು ನೀಡುವುದಿಲ್ಲ. ಆದ್ದರಿಂದ ಸರ್ಕಾರವೇ ದಲಿತರಿಗೆ ನಿವೇಶನಕೊಡುವ ಕಾರ್ಯಕ್ರಮ ಹಮ್ಮಿಕೊಳ್ಳದಿದ್ದರೆ ಅವರ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಲಿದೆ.

ನಾವು ಹೋದ ಈ ಯಾವ ಹಳ್ಳಿಯಲ್ಲೂ ದಲಿತರಿಗೆ ನಿವೇಶನಗಳು ಇಲ್ಲದಿರುವುದು ಮಾತ್ರವಲ್ಲ ಹೆಣ ಹೂಳಲು ಸ್ಮಶಾನಗಳು ಇಲ್ಲ. ಭೂಮಿ ಇರುವವರನ್ನು ಬೇಡಿಯೋ, ಗೋಮಾಳ ಗಳಲ್ಲೋ ಶವ ಸಂಸ್ಕಾರ ಮಾಡುವ ದುಃಸ್ಥಿತಿ ದಲಿತರದ್ದು. ಖಾಲಿ ಕಂಡ ಎಲ್ಲಾ ಜಾಗಗಳನ್ನು ಭೂ ಮಾಫಿಯಾದ ಶಕ್ತಿಗಳು ಕಬಳಿಸುತ್ತಿರು ವುದರಿಂದ ಸರ್ಕಾರವೇ ದಲಿತರಿಗೆ ಪ್ರತ್ಯೇಕ ಸ್ಮಶಾನದ ಜಾಗಗಳನ್ನು ನೀಡುವ ಜವಾಬ್ದಾರಿ ತೋರಬೇಕಾಗಿದೆ. ಒಟ್ಟಿನಲ್ಲಿ ದಲಿತರ ಪರಿಸ್ಥಿತಿ ಬದುಕಲು ಮನೆಯೂ ಇಲ್ಲ, ಸತ್ತರೆ ಮಸಣವೂ ಇಲ್ಲ ಎಂಬಂತಾಗಿದೆ.

- ಟಿ.ಎಲ್.ಕೃಷ್ಣೇಗೌಡ

ಅಲ್ಪಸಂಖ್ಯಾತರು ಒಂದೆಡೆ ಸೇರಿದರೆ, ಏನಾದರೂ ಚಟುವಟಿಕೆ ನಡೆಸಿದರೆ ಅದೆಲ್ಲವೂ ಮತಾಂತರದ ಉದ್ದೇಶಕ್ಕಾಗೇ ಎಂದು ಸಂಘ ಪರಿವಾರದ ಜನಗಳು ತೀರ್ಮಾನಿಸಿಬಿಟ್ಟಿದ್ದಾರೆ. ಕುಂದಾಪುರದಲ್ಲಿ ರೋಗಿಯೊಬ್ಬರನ್ನು ಆಸ್ಪತ್ರೆಗೆ ತಂದು ಸೇರಿಸಿದ ಪಾದ್ರಿ ಮತ್ತು ಅವರ ಸಂಗಡಿಗರನ್ನು ಈ ದುಷ್ಟರು ಬಿಡಲಿಲ್ಲ, ಹಲ್ಲೆ ಮಾಡೇಬಿಟ್ಟರು. ಇಷ್ಟಕ್ಕೂ ಧರ್ಮ ಪ್ರಚಾರ ಮಾಡಿದರೆ ಅದೇನು ಅಪರಾಧವೇ?

ಧರ್ಮ ಪ್ರಚಾರ : ಅದೊಂದು ಅಪರಾಧವೇ?

ಭಾರತೀಯ ಸಮಾಜಕ್ಕೆ ಮತಾಂತರದ ವಿಚಾರವು ಅಪರಿಚಿತವೂ ಅಲ್ಲ ಆಶ್ಚರ್ಯಕರವೂ ಅಲ್ಲ. ಕ್ರಿಸ್ತಪೂರ್ವ 600 ರಷ್ಟು ಹಿಂದೆಯೇ ಭಾರತದಲ್ಲಿ ವೈದಿಕ ಧರ್ಮದಿಂದ ಬೌದ್ಧ, ಜೈನ, ಧರ್ಮಗಳಿಗೆ ಜನರು ಬಹುದೊಡ್ಡ ಪ್ರಮಾಣದಲ್ಲಿ ಮತಾಂತರ ಹೊಂದಿದ್ದಾರೆ. ಅನಂತರದಲ್ಲಿ ಕ್ರಿಶ್ಚಿಯನ್, ಇಸ್ಲಾಂ ಮತ ಧರ್ಮಗಳನ್ನು ಭಾರತದ ಜನ ಸ್ವೀಕರಿಸಿದ್ದಾರೆ.

ತಮಗೆ ಸರಿಕಂಡ ಧರ್ಮವನ್ನು ಸ್ವೀಕರಿಸುವ, ತಮಗೆ ಸರಿ ಎನಿಸದ ಮತ ಧರ್ಮವನ್ನು ತ್ಯಜಿಸುವ ಹಕ್ಕು, ಧಾರ್ಮಿಕ ಸ್ವಾತಂತ್ರ್ಯ ಯಾವುದೇ ವ್ಯಕ್ತಿಗೆ ಇರಬೇಕು. ಇದು ಪ್ರಜಾಪ್ರಭುತ್ವ ವ್ಯವಸ್ಥೆಯೊಂದರ ಕನಿಷ್ಠ ಅಗತ್ಯ. ಮತ್ತು ಅದು ಅನಿವಾರ್ಯ ಕೂಡ. ಅದೇ ರೀತಿಯಲ್ಲಿ ಯಾವುದೇ ವ್ಯಕ್ತಿ ತನಗೆ ಸರಿಕಂಡರೆ ಯಾವುದೇ ಧರ್ಮವನ್ನೂ ಆಚರಿಸದೇ ನಿರ್ಲಿಪ್ತವಾಗಿರಲು ಹಕ್ಕಿದೆ. ಇದು ಕೂಡ ಇದೇ ಧಾರ್ಮಿಕ ಹಕ್ಕಿನ ಭಾಗ.

ಭಾರತದ ಸಂವಿಧಾನವು ತನ್ನ ಪ್ರಜೆಗಳಿಗೆ ಇಂತಹ ಧಾರ್ಮಿಕ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾನ್ಯ ಮಾಡಿದೆ. ಧರ್ಮವನ್ನು ಆಚರಿಸುವ ಹಕ್ಕು ಮತ್ತು ಆಚರಿಸದಿರುವ ಹಕ್ಕು ಮಾತ್ರವಲ್ಲ, ತಮಗೆ ಸರಿಕಂಡ ಧರ್ಮದ ಕುರಿತು ಪ್ರಚಾರ ನಡೆಸುವುದೂ ಸಹ ಈ ಧಾರ್ಮಿಕ ಹಕ್ಕಿನ ಭಾಗವಾಗಿದೆ. ನಮ್ಮ ಸಂವಿಧಾನ ಈ ಹಕ್ಕನ್ನು ಅತ್ಯಂತ ಸ್ಪಷ್ಟವಾಗಿಯೇ ನಮೂದಿಸಿದೆ ಮತ್ತು ಇದರಲ್ಲಿ ಗೊಂದಲಗಳಿಗೇನು ಅವಕಾಶವಿಲ್ಲ.

ಆದರೆ ನಮ್ಮ ರಾಜ್ಯದಲ್ಲಿ ತಾವು ಹಿಂದೂಗಳೂ ಎಂದು ಹೇಳಿಕೊಳ್ಳುವ ಕೋಮುವಾದಿಗಳು ಮತಾಂಧರು ಮಂತಾಂತರದ ವಿಷಯದಲ್ಲಿ, ಮತಾಂತರ ನೆಪದಲ್ಲಿ ಅಲ್ಪ ಸಂಖ್ಯಾತ ಸಮುದಾಯದವರ ಮೇಲೆ ನಡೆಸುತ್ತಿರುವ ದೌರ್ಜನ್ಯ ದಬ್ಬಾಳಿಕೆಗಳು ಹದ್ದು ಮೀರುತ್ತಿವೆ. ತೋರಿಕೆಗಾದರೂ ಒಂದು ಜನಪರ, ಪ್ರಗತಿಪರವಾದ ಮುಖವಾಡ ವಿಲ್ಲದ - ಸನಾತನ ಜಾತಿವಾದಿ, ಮೂಢ, ವೈದಿಕ ಧರ್ಮವನ್ನು ಸಮರ್ಥಿಸಿಕೊಳ್ಳಲು ಸಾಧ್ಯವಾಗದ ಆರ್‌ಎಸ್‌ಎಸ್, ಭಜರಂಗದಳ, ವಿಶ್ವ ಹಿಂದೂ ಪರಿಷತ್ತಿನ ಕಿಡಿಗೇಡಿಗಳು ರಾಜ್ಯದ ಉದ್ದಗಲಕ್ಕೂ ಕ್ರಿಶ್ಚಿಯನ್ ಧರ್ಮೀಯರ ಮೇಲೆ, ಕ್ರಿಶ್ಚಿಯನ್ ಪಾದ್ರಿಗಳು, ಸಿಸ್ಟರ್‌ಗಳ ಮೇಲೆ, ಚರ್ಚ್‌ಗಳ ಮೇಲೆ ದಾಳಿಗಳನ್ನು ನಡೆಸುತ್ತಿದ್ದಾರೆ.

ಜೂನ್ 25 ರಂದು ಕುಂದಾಪುರದಲ್ಲಿ ಕೋಟೇಶ್ವರ ಕಟ್ಕೇರಿ ಕಾರ್ಮೆಲ್ ಆಶ್ರಮದ ಮುಖ್ಯ ಧರ್ಮ ಗುರು ಎಂ.ಸಿಲ್ವೆಸ್ಟರ್ ಮೇಲೆ ಭಜರಂಗಿ ಗೂಂಡಾಗಳು ಹಲ್ಲೆ ನಡೆಸಿದ್ದಾರೆ. ಕೋಲಾರದಲ್ಲಿ ಇಂತಹದ್ದೇ ಸರಣಿ ಘಟನೆಗಳು ನಡೆದಿವೆ. ಈ ಹಿಂದೆ ಮೈಸೂರು, ಹುಬ್ಬಳ್ಳಿ, ಮಂಗಳೂರು ಮುಂತಾದ ವಿವಿಧ ಪ್ರದೇಶಗಳಲ್ಲೂ ಇಂತಹದ್ದೇ ದಾಳಿಗಳು ನಡೆದಿದ್ದವು.

ಇಲ್ಲಿ ಒಂದು ಮೂಲಭೂತ ಪ್ರಶ್ನೆ ಏಳುತ್ತದೆ. ಕ್ರಿಶ್ಚಿಯನ್ ಧರ್ಮದ ಬಗೆಗೆ ಮಾತಾಡುವುದು, ಕರಪತ್ರ ಹಂಚುವುದು, ಯೇಸುವಿನ ಬೋಧನೆ, ಕುರಿತು ಹೇಳುವುದು ಕ್ರಿಮಿನಲ್ ಅಪರಾಧವೇ? ಕ್ರಿಶ್ಚಿಯನ್ನರು, ಅದನ್ನು ಸೇರುವ ಅಥವಾ ಬೆಂಬಲಿಸುವ ಮನಸುಳ್ಳ ಜನರು ಒಂದೆಡೆ ಕಲೆಯುವುದು. ಪ್ರಾರ್ಥಿಸುವುದು ದೇಶದ್ರೋಹವೇ? ಸಂವಿಧಾನ ಬಾಹಿರವೇ? ಇಷ್ಟಕ್ಕೂ ಮತಾಂತರದಿಂದ ನೊಂದ, ಅಪಮಾನಕ್ಕೆ ಗುರಿಯಾದ ಜನರ ಸಮಸ್ಯೆಗಳು ಪೂರ್ಣವಾಗಿ ನಿವಾರಣೆಯಾಗುವವೇ ಎಂಬುದೇ ಬೇರೆ ವಿಷಯ. ಆದರೆ ಜನರು ಬಯಸಿದರೆ ಯಾವುದೇ ಧರ್ಮವನ್ನಾದರೂ ಸ್ವೀಕರಿಸುವ ಹಕ್ಕಿರಬೇಕಲ್ಲವೇ?

ಗಣೇಶೋತ್ಸವ, ರಾಮನವಮಿ, ಮುಂತಾದ ಹಬ್ಬಗಳನ್ನು, ಅಣ್ಣಮ್ಮ ಎಲ್ಲಮ್ಮ ಅಯ್ಯಪ್ಪ, ಶನಿದೇವರ ಪೂಜೆ ಪುನಸ್ಕಾರಗಳನ್ನು ಜನರು ಸಾರ್ವಜನಿಕವಾಗಿ ಆಚರಿಸುತ್ತಿರುವಾಗ ಈ ಧಾರ್ಮಿಕ ಚಟುವಟಿಕೆಗಳಿಗೆ ತಡೆ ಹಾಕಲಾಗುವುದೇ?

ನಮ್ಮ ಮನೆಯ ಅಕ್ಕಪಕ್ಕ, ಗಲ್ಲಿ ಬೀದಿ, ಮೈದಾನ, ಊರ ಮುಂದೆ, ಎಲ್ಲೆಲ್ಲೂ ನಡೆಯುತ್ತಿರುವ ಇಂತಹ ಧಾರ್ಮಿಕ ಚಟುವಟಿಕೆಗಳಂತೆ-ಹರಿಕಥೆ, ಜಾತ್ರೆ, ಪೌರಾಣಿಕ ನಾಟಕಗಳಂತೆಯೇ ಬೈಬಲ್ ಬಗ್ಗೆ ಯೇಸುವಿನ ಬೋಧನೆಯ ಬಗೆಗೆ ಏನೋ ಕಾರ್ಯಕ್ರಮಗಳು ನಡೆಯುತ್ತಿವೆ ಎಂದೇಕೆ ಭಾವಿಸಬಾರದು.



ರೋಗಿಯನ್ನು ಆಸ್ಪತ್ರೆಗೆ ಕರೆ ತಂದವರ ಮೇಲೆ ಹಲ್ಲೆ

ಅಲ್ಪಸಂಖ್ಯಾತ ಕ್ರಿಶ್ಚಿಯನ್ನರು ನಡೆಸುತ್ತಿರುವ ಇಂತಹ ಚಟುವಟಿಕೆಗಳೆಲ್ಲಾ ಮತಾಂತರದ ಉದ್ದೇಶ ಇರಲೇ ಬೇಕೆಂದಿಲ್ಲ. ಒಂದೊಮ್ಮೆ ಇದ್ದರೂ ಅದು ಅಪರಾಧವೇನೂ ಅಲ್ಲವಲ್ಲ.

'ಹಿಂದೂ ಧರ್ಮದಂತಹ ಒಂದು ಧರ್ಮ ಈ ಜಗತ್ತಿನಲ್ಲೇ ಎಲ್ಲೂ ಇಲ್ಲ! (ಒಂದು ರೀತಿಯಲ್ಲಿ ಇದು ನಿಜವೂ ಹೌದು) ಅದಕ್ಕೆ ಭಾರಿ ಸಂಚಕಾರ ಬಂದಿದೆ' ಎಂದು ಬೊಬ್ಬೆ ಹೊಡೆದು ಯುವಕರನ್ನು ಉದ್ರೇಕಿಸಿ ಸಂಘ ಪರಿವಾರದ ಜನ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸುತ್ತಿದ್ದಾರೆ.

ಇನ್ನೊಂದು ಆಘಾತಕಾರಿ ವಿಚಾರ ಎಂದರೆ ಇಂತಹ ಸಂದರ್ಭಗಳಲ್ಲಿ ನಮ್ಮ ಪೋಲೀಸ್ ಇಲಾಖೆ ಮತ್ತು ಪತ್ರಿಕೆಗಳು ವರ್ತಿಸುವ ರೀತಿ, ಬರೆಯುವ ರೀತಿ. ಉದ್ರಿಕ್ತ ಜನತೆ ಅಲ್ಪಸಂಖ್ಯಾತರನ್ನು ಹಿಡಿದು ಬಡಿಯುವುದು. ಕಳ್ಳರನ್ನೋ ದರೋಡೆಕೋರರನ್ನೋ ಕೂಡಿ ಹಾಕಿದಂತೆ ಇವರನ್ನು ಹಿಡಿದು ಯಾವುದಾದರೂ ಕಟ್ಟಡದೊಳಗೆ ಕೂಡಿ ಹಾಕುವುದು. ಪೋಲೀಸರು ಬರುವುದು, ಕೊಲೆ ಮಾಡಿದವರನ್ನು ಎಳೆದುಕೊಂಡು ಹೋದಂತೆ ಎಳೆದೊಯ್ಯುವುದು, ಮೊಕದ್ದಮೆ ಹೂಡಿ ಲಾಕಪ್‌ಗೆ ಹಾಕುವುದು!! ಇವೆಲ್ಲವೂ ಅತ್ಯಂತ ಸಹಜ ಎಂಬಂತೆ ನಡೆಯುತ್ತಿದೆ.

ನಮ್ಮ ಬಹಳಷ್ಟು ಪತ್ರಿಕೆಗಳೂ ಇಂತಹ ವಿಚಾರಗಳ ಬಗೆಗೆ ಬರೆಯುವಾಗಲೂ ಸಂವಿಧಾನ ಕಾನೂನು ಎಲ್ಲ ಮರೆತು ತಮ್ಮದೇ ಧೋರಣೆಯಂತೆ ಬರೆಯುವುದು, ಆ ಬಗ್ಗೆ ಮಾಧ್ಯಮ ಲೋಕದ ಒಳಗಿನಿಂದ ಹೆಚ್ಚೇನು ಪ್ರತಿರೋಧ ಮೂಡಿ ಬರದಿರುವುದು ತುಂಬಾ ಆತಂಕಕರವಾಗಿದೆ. ಈಗಲೂ ನಮ್ಮೂರುಗಳಲ್ಲಿ ದಲಿತರು ಊರೊಳಗೆ ಬಂದರೆ, ಒಳ್ಳೆ ಬಟ್ಟೆ ಹಾಕಿಕೊಂಡರೆ, ನೀರು ಮುಟ್ಟಿದರೆ, ದೇವಸ್ಥಾನದ ಹತ್ತಿರ ಸುಳಿದರೆ ದನಗಳಿಗೆ ದನಗಳಿಗೆ ಬಡಿದಂತೆ ಬಡಿಯಾಗುತ್ತದೆ. ಮಲ ತಿನ್ನಿಸಲಾಗುತ್ತದೆ. ಖೂನಿಯೂ ಆಗೇ ಹೋಗುತ್ತದೆ.

ಇವರೇನು ಈಗಾಗಲೇ ಇಲ್ಲಿ ಹಿಂದೂ ರಾಷ್ಟ್ರ ಜಾರಿಗೆ ಬಂದೇ ಬಿಟ್ಟಿದೆ ಎಂದು ಕೊಂಡಿದ್ದಾರೋ ಅಥವಾ ಇಲ್ಲಿ ಏನು ಮಾಡಿದರೂ ದಕ್ಕಿಸಿಕೊಳ್ಳ ಬಹುದು ಎಂಬ ಭಂಡ ಧೈರ್ಯವೋ?

ಇಂಥ ಅಪಮಾನವನ್ನು ನಿವಾರಿಸಿಕೊಳ್ಳ ಬೇಕೆಂದು ಇನ್ನೊಂದು ಧರ್ಮದ ಕಡೆಗೆ ಯಾರಾದರೂ ಕಣ್ಣು ಹಾಯಿಸಿದರೆ ಮತ್ತೆ ಒಡೆತ. ಮತಾಂತರದ ವಿಚಾರದಲ್ಲಿನ ದಾಂಧಲೆ, ದಬ್ಬಾಳಿಕೆಗಳು ಜಾತಿ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಪ್ರಯತ್ನಗಳ ಮುಂದುವರಿಕೆಗಳಷ್ಟೇ. ಹೌದು ಅನ್ಯಧರ್ಮೀಯರನ್ನು ಹಿಂದೂ ಧರ್ಮಕ್ಕೆ ಮತಾಂತರ ಮಾಡುವ ಯತ್ನ ಯಾಕೆ ಹೆಚ್ಚಾಗಿ ಕಾಣುವುದಿಲ್ಲವೆಂಬ ಪ್ರಶ್ನೆಯೊಂದಿದೆ. ಇವರು ಪ್ರಯತ್ನ ಮಾಡುತ್ತಿದ್ದರೋ ಏನೋ. ಆದರೆ ಇಲ್ಲಿಗೆ ಬರುವವರನ್ನು ಯಾವ ಜಾತಿಗೆ ಸೇರಿಸುತ್ತಾರೆ. ಅದಕ್ಕೆ ಯಾವ ಜಾತಿಯವರು ಸಿದ್ಧವಾಗಿದ್ದಾರೆ?

■ ಆರ್. ರಾಮಕೃಷ್ಣ

ಸರ್ಕಾರದ ತಾತ್ಸರದ ವಿರುದ್ಧ

ಜುಲೈ 10 : ಅಂಗನವಾಡಿ ನೌಕರರ ಮುಷ್ಕರ

11ನೇ ಪಂಚವಾರ್ಷಿಕ ಯೋಜನೆ ಮಕ್ಕಳ ಕಲ್ಯಾಣದ ಕಾರ್ಯಕಾರಿ ಗುಂಪು ಐಸಿಡಿಎಸ್ ಮತ್ತು ಪೌಷ್ಟಿಕತೆ ಕುರಿತು ಅಧ್ಯಯನ ನಡೆಸಲು ನೇಮಿಸಿದ ಉಪ ಸಮಿತಿಯ ಕೆಲವು ಟಿಪ್ಪಣಿಗಳು ಭಾರತದ ಭವಿಷ್ಯದ ಮಾನವ ಸಂಪನ್ಮೂಲವಾಗಿರುವ ಮಕ್ಕಳ ಅಭಿವೃದ್ಧಿಯ ಬಗೆಗೆ ಸರ್ಕಾರದ ನಿರ್ಲಕ್ಷ್ಯವನ್ನು ಎತ್ತಿ ತೋರಿಸುತ್ತಿದೆ. 2005-2006ರ ಸಾಲಿನಲ್ಲಿ 1,88,168 ಅಂಗನವಾಡಿ ಕೇಂದ್ರಗಳನ್ನೊಳಗೊಂಡ 466 ಯೋಜನೆಗಳನ್ನು ಮಂಜೂರು ಮಾಡುವುದಕ್ಕಾಗಿ ಸರ್ಕಾರ ಹೇಳಿತ್ತು. ಆದರೆ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ, ಈ ಸಾಲಿನಲ್ಲಿ ಕೇವಲ 1,81,351 ಅಂಗನವಾಡಿ ಕೇಂದ್ರಗಳನ್ನೊಳಗೊಳ್ಳುವ 477 ಯೋಜನೆಗಳನ್ನು ಮಾತ್ರ ಮಂಜೂರು ಮಾಡಲಾಗಿದೆ. ಮಾರ್ಚ್ 31,2006 ರವರೆಗೆ ಒಟ್ಟು 7,48,229 ಅಂಗನವಾಡಿ ಕೇಂದ್ರಗಳನ್ನೊಳಗೊಂಡಿರುವ 5659 ಯೋಜನೆಗಳು ಕಾರ್ಯನಿರತವಾಗಿವೆ. ಅಂದರೆ 2005-2006 ರ ಸಾಲಿನಲ್ಲಿ ಘೋಷಿಸಿದ್ದ 466 ಯೋಜನೆಗಳಲ್ಲಿ ಕೇವಲ 7 ಯೋಜನೆಗಳು ಮತ್ತು ಒಟ್ಟು 9,52,877 ಕೇಂದ್ರಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ.

ರಾಜ್ಯ ಸರ್ಕಾರಗಳ ಬೇಡಿಕೆಗನು ಗುಣವಾಗಿ ಕೇಂದ್ರದ ಹಣಕಾಸು ಸಚಿವರು ತಮ್ಮ ಬಜೆಟ್‌ನ ಭಾಷಣದಲ್ಲಿ 1,07, 274 ಅಂಗನವಾಡಿ ಕೇಂದ್ರಗಳೂ ಮತ್ತು 25, 961 ಸಣ್ಣ ಅಂಗನವಾಡಿ ಕೇಂದ್ರಗಳನ್ನು ಒಳಗೊಳ್ಳುವ 173 ಹೊಸ ಯೋಜನೆ ಘೋಷಿಸಿದ್ದಾರೆ. ಇದು ಕೇವಲ ಅಂಕಿ ಅಂಶಗಳಿಗೆ ಮಾತ್ರ ಸೀಮಿತವಾಗಿದೆ.

ಐ.ಸಿ.ಡಿ.ಎಸ್. ಯೋಜನೆಯು ತಾನು ನೀಡುವ ಹಲವು ಸೇವೆಗಳಲ್ಲಿ ಬಲು ಮುಖ್ಯವಾದ 'ಬೆಳಗಿನ ಕಲ್ಯಾಣ' ವನ್ನು ಕೈಬಿಟ್ಟಿದೆ. ತಮಗಿಂತ ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವ ಹೆಣ್ಣು ಮಕ್ಕಳು ಮನೆಯಲ್ಲಿ ಉಳಿಯುವುದರಿಂದ ನೇರವಾಗಿ ಹೆಣ್ಣು ಮಕ್ಕಳ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತದೆ. ಮೇಲಾಗಿ ಅಸಂಘಟಿತ ಕ್ಷೇತ್ರದ ದುಡಿಯುವ ಮಹಿಳೆಯರ ಮಕ್ಕಳ ಇ.ಸಿ.ಇ. ಅಗತ್ಯತೆಯನ್ನು ಪೂರೈಸಲು ಅಂಗನವಾಡಿ ಕೇಂದ್ರಗಳನ್ನಾಗಿ ಹಾಗೂ ಕ್ರೀಚ್‌ಗಳಾಗಿ ಮಾರ್ಪಡಿಸಬೇಕಾಗುತ್ತದೆ. ರಾಷ್ಟ್ರೀಯ ಕ್ರಿಚ್ ಫಂಡ್ ಯೋಜನೆಯಡಿ ಶೇ.10 ಅಂಗನವಾಡಿ ಕೇಂದ್ರಕ್ಕೆ ಅವಕಾಶ ನೀಡಿದ್ದರೂ ಇದನ್ನು ರಾಜೀವ್‌ಗಾಂಧಿ ರಾಷ್ಟ್ರೀಯ ಕ್ರಿಚ್ ಯೋಜನೆಯಡಿ ವಿಲೀನಗೊಳಿಸಿ ಈ ಯೋಜನೆ ಸೌಲಭ್ಯ ಕೊನೆಗೊಂಡಿದೆ.

ಉದಾರೀಕರಣ, ಜಾಗತೀಕರಣದ ದಿನಗಳಲ್ಲಿ ಕೋರ್ಟ್‌ಗಳ ಹಲವು ತೀರ್ಮಾನಗಳು ದುಡಿಯುವ ವರ್ಗದ ವಿರೋಧವಾಗಿ ಬರುತ್ತಿದ್ದು ಮತ್ತು ಹಿಂದೆ ನೀಡಿದ್ದ ಪುರೋಗಾಮಿ ತೀರ್ಪುಗಳನ್ನು ಬದಲಿಸುವ ಹಲವು ನಿದರ್ಶನಗಳ ಹಿನ್ನೆಲೆಯಲ್ಲಿ ಕೋರ್ಟುಗಳನ್ನು ನಾವು ಹೆಚ್ಚು ಅವಲಂಬಿಸಬಾರದು ಎನ್ನುವ ಅಭಿಪ್ರಾಯವನ್ನು ಸುಪ್ರೀಂಕೋರ್ಟ್‌ನ ತೀರ್ಪು ಮತ್ತೊಮ್ಮೆ ಪುಷ್ಠಿಕರಿಸಿದೆ.

ದೇಶದ ಕೋಟಿ ಕೋಟಿ ಬಸುರಿ, ಬಾಣಂತಿಯರು, ಮಕ್ಕಳ ಆರೋಗ್ಯ ರಕ್ಷಣೆಗಾಗಿ ದುಡಿದು ಹೈರಾಣಾಗುವ ಅಂಗನವಾಡಿ ನೌಕರರನ್ನು ಸರ್ಕಾರಗಳು ನೌಕರರೆಂದು ಪರಿಗಣಿಸುವುದಿರಲಿ ಮನುಷ್ಯರೆಂದೂ ಸಹ ಪರಿಗಣಿಸಿದಂತಿಲ್ಲ. ಒಟ್ಟು ಯೋಜನೆಯನ್ನು ಸರ್ಕಾರ ನಿರ್ಲಕ್ಷಿಸುತ್ತಿದೆ. ನೌಕರರಿಗೆ ಕೊಟ್ಟ ಮಾತಿಗೆ ತಪ್ಪಿದೆ. ಅವರು ತೀವ್ರ ಹೋರಾಟದತ್ತ ಮುಂದಾಗಿದ್ದಾರೆ.

ಇದರ ಆಧಾರದಲ್ಲಿಯೇ 2006 ಜುಲೈ 25 ರಿಂದ ಆಗಸ್ಟ್ 5 ರ ತನಕ 10 ದಿನಗಳ ಐತಿಹಾಸಿಕ ಉಪವಾಸ ಸತ್ಯಾಗ್ರಹವನ್ನು ಮಾಡಲಾಯಿತು. ಪ್ರತಿ ಗ್ರಾಮಕ್ಕೂ ಹರಡಿರುವ ಇವರು ವಿವಿಧ ಭಾಷೆ, ಧರ್ಮ, ಮನೋಭಾವನೆ, ಜಾತಿ ಹಲವು ವೈಶಿಷ್ಟ್ಯಗಳಿಂದ ಕೂಡಿರುವ ಮಹಿಳೆಯರು 10 ದಿನಗಳ ಕಾಲ ಪಾರ್ಲಿಮೆಂಟಿನ ಎದುರು ಕೂರುವುದು. ಮೇ 10, 2007ರಂದು ಪೋಲೀಸರೇ ತಿಳಿಸಿದ ಹಾಗೆ 10,000 ಕಾರ್ಮಿಕರ ಚಳುವಳಿಯಲ್ಲಿ ಏಕಕಾಲದಲ್ಲಿ ಏಕ ಸ್ಥಳದಲ್ಲಿ ಬಂಧನಕ್ಕೊಳಗಾಗುವಂತಹ ಹೋರಾಟಗಳನ್ನು ಮಾಡುತ್ತಿದ್ದರೂ ಕೂಡ ಸರ್ಕಾರದ ಚಿಂತನೆ ಬದಲಾಗುತ್ತಿಲ್ಲ.

ಈ ಹೋರಾಟದ ಸಂದರ್ಭದಲ್ಲಿ ಆಗಸ್ಟ್ 3, 2006 ಕಾಂ.ಸೀತಾರಾಂ ಯೆಚೂರಿ, ಬಸುದೇವ್ ಆಚಾರ್ಯ, ಚಿತ್ತಬ್ರತ ಮುಜೂಂದಾರ್, ಕಾಂ.ಬೃಂದಾ ಕಾರಟ್, ಕಾಂ.ತಪನಸೇನ್, ಕಾಂ.ಹೇಮಲತಾ ಮತ್ತು ಕಾಂ ನೀಲಿಮಾ ಮೈತ್ರಾರವರು ಪ್ರಧಾನ ಮಂತ್ರಿಗಳ ಜತೆ ಮಾತುಕತೆ ನಡೆಸಿದ್ದರು. ಈ ಚರ್ಚೆ ಪ್ರಕಾರ ಐಸಿಡಿಎಸ್ ಯೋಜನೆಯನ್ನು ಪುನರ್ ರೂಪಿಸಲು ಮತ್ತು ಬಲಿಷ್ಠಪಡಿಸಲು 18 ಜನರ ಸಮಿತಿಯನ್ನು ನೇಮಕ ಮಾಡಲಾಗಿತ್ತು.

ಈ ಸಮಿತಿ 3 ತಿಂಗಳೊಳಗೆ ವರದಿ ಕೊಡಬೇಕೆಂದು ಷರತ್ತು ಇತ್ತು. ಆದರೆ ಈಗ 11 ತಿಂಗಳಾದರೂ ಈ ಸಮಿತಿಯ ವರದಿಯನ್ನು ಸಂಬಂಧಿಸಿದ ಸಚಿವರು ಬಹಿರಂಗಪಡಿಸಿಲ್ಲ. ಹಾಗೂ ಲೋಕಸಭೆಯಲ್ಲಿ ಚರ್ಚೆಗೂ ತರದೆ ಗುಪ್ತವಾಗಿರಿಸಿದೆ. ಸರ್ಕಾರದ ಈ ನೀತಿಯನ್ನು ವಿರೋಧಿಸಿ ಸಮಿತಿಯ ವರದಿಯನ್ನು ಚರ್ಚೆಗೊಳಪಡಿಸಬೇಕು, ಪ್ರಧಾನ ಮಂತ್ರಿಗಳು ಒಪ್ಪಿರುವ ಗೌರವ ಧನದ ಹೆಚ್ಚಳವನ್ನು ಜಾರಿಮಾಡಬೇಕು. ಮುಂತಾದ ಬೇಡಿಕೆಗಳಿಗಾಗಿ ಒತ್ತಾಯಿಸಿ ಜುಲೈ 10 ರ ಮುಷ್ಕರ ನಡೆಯುತ್ತಿದೆ.

ಬೇಡಿಕೆಗಳು: ಅಂಗನವಾಡಿ ನೌಕರರನ್ನು 3 ಮತ್ತು 4 ನೇ ನೌಕರರನ್ನಾಗಿ ಪರಿಗಣಿಸುವುದು. ಪರಿಗಣಿಸುವ ತನಕ 3000 ಹಾಗೂ 2000 ರೂ.ಗಳನ್ನು ತಿಂಗಳಿಗೆ ಪಾವತಿಸಬೇಕು. ಎಲ್ಲಾ ನೌಕರರಿಗೆ ಬೆಲೆ ಏರಿಕೆಗೆ ತಕ್ಕಂತೆ ಡಿ.ಎ. ಕೊಡಬೇಕು. ಎಲ್ಲಾ ನೌಕರರಿಗೆ ಇ.ಎಸ್.ಐ. ಇಪಿಎಫ್ ಸೌಲಭ್ಯ ಒದಗಿಸಬೇಕು. ಕರ್ನಾಟಕ ರಾಜ್ಯದ 'ಸುಮಂಗಲಿ ಸೇವಾಶ್ರಮದಡಿ'ಯಲ್ಲಿ ನಡೆಯುತ್ತಿರುವ 130 ಅಂಗನವಾಡಿ ಕೇಂದ್ರಗಳನ್ನು ಸರ್ಕಾರದ ವ್ಯಾಪ್ತಿಗೆ ಒಳಪಡಿಸುವುದು. ನಿವೃತ್ತಿ ಸೌಲಭ್ಯಗಳನ್ನು ನೀಡಬೇಕು ಎಂದು ಇತರ ಪ್ರಮುಖ ಬೇಡಿಕೆಗಳಾಗಿವೆ.

ಅಸಂಘಟಿತರು ಸಂಘಟಿತರಾಗಲಿ..

ದೇಶದಲ್ಲಿ ಅಸಂಘಟಿತ ಕಾಮಿಕರನ್ನು ಸಂಘಟಿಸುವುದು ಬಹಳ ಶ್ರಮದಾಯಕವಾದ ಕೆಲಸ. ಕಾರ್ಮಿಕರ ಕುರಿತು ನಿಜವಾದ ಕಾಳಜಿಯಿಂದ ಯಾವುದೇ ಸಮಸ್ಯೆಗಳನ್ನು ಎದುರಿಸಿ ಸಕ್ರಿಯವಾಗಿ ಹೋರಾಟ ನಡೆಸಲು ಎಡಪಂಥೀಯ ಟ್ರೇಡ್ ಯೂನಿಯನ್‌ಗಳಿಂದಲೇ ಸಾಧ್ಯ ವಾಗುತ್ತದೆ. ಸಿ.ಐ.ಟಿ.ಯು ಯಾವತ್ತೂ ಇಂತಹ ಹೋರಾಟಗಳ ಮುಂಚೂಣಿ ಯಲ್ಲಿರುತ್ತದೆ. ಆದುದರಿಂದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಂಘಟನೆಯನ್ನು ಸೇರಿ ಬಲಿಷ್ಟಗೊಳಿಸಬೇಕೆಂದು ಮಾಜಿ ಶಾಸಕ ಎ.ಕೆ.ಸುಬ್ಬಯ್ಯನವರು ದಿನಾಂಕ 23.5.2007ರಂದು ಕೊಡಗು ಜಿಲ್ಲೆಯ ವಿರಾಜಪೇಟೆ ಪಟ್ಟಣ ಪಂಚಾಯತಿಯ ಸಭಾಂಗಣದಲ್ಲಿ ನಡೆದ ಕೊಡಗು ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘದ ಮೂರನೇ ವಾರ್ಷಿಕ ಮಹಾಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ನುಡಿದರು.

ಅಧ್ಯಕ್ಷತೆ ವಹಿಸಿದ್ದ ಸಿ.ಐ.ಟಿ.ಯು ರಾಜ್ಯ ಸಮಿತಿಯ ಸದಸ್ಯರಾದ ಕಾಂ.ಡಿ.ವೆಂಕಟರಮಣ ಅವರು ಕರ್ನಾಟಕ ರಾಜ್ಯದ ಕಟ್ಟಡ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಕಾಯ್ದೆಯಲ್ಲಿ ಕಾರ್ಮಿಕರಿಗೆ ಸಿಗುವ ವಿವಿಧ ಪ್ರಯೋಜನಗಳ ಬಗ್ಗೆ ವಿವರವಾಗಿ ಉಲ್ಲೇಖಿಸಿ ಮುಂದಿನ ದಿನಗಳಲ್ಲಿ ಸಿಐಟಿಯು ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಡ ಕಾರ್ಮಿಕರನ್ನು ಸಂಘಟಿಸಿ ಅವರಿಗೆ ಕಾನೂನಿನ ಸೌಲಭ್ಯವನ್ನು ಒದಗಿಸುವಂತೆ ಕರೆ ನೀಡಿದರು.

ಅಬ್ದುಲ್ ರಜಾಕ್‌ರಿಂದ ಸ್ವಾಗತ. ಕಾರ್ಯದರ್ಶಿ ಕೆ.ಕೆ. ಸುಕುಮಾರ್ ವರದಿಯನ್ನು ಮಂಡಿಸಿದರು. ಖಜಾಂಚಿ ಯಾದ ಜೋಸ್ ವಾಜ್ ವಾರ್ಷಿಕ ಲೆಕ್ಕಾಚಾರವನ್ನು ಮಂಡಿಸಿದರು. ಬಳಿಕ ಹೊಸ ಕಾರ್ಯಕಾರಿ ಸಮಿತಿ ಮತ್ತು ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಐ.ಆರ್.ಪ್ರಮೋದ್ ಗೌರವ ಅಧ್ಯಕ್ಷರು, ಶ್ರೀ ಅಬ್ದುಲ್ ರಜಾಕ್ ಅಧ್ಯಕ್ಷರು, ಎ.ಸೇದು ಹಾಗೂ ಎಮ್.ಬಿ.ಕಮಲ ಉಪಾಧ್ಯಕ್ಷ ರಾಗಿಯೂ ಕೆ.ಕೆ.ಸುಕುಮಾರ್ ಮತ್ತು ಸರಸ್ವತಿ ಜಂಟಿ ಕಾರ್ಯದರ್ಶಿಯಾಗಿಯೂ ಟಿ.ಆರ್.ಗೋಪಾಲ ಖಜಾಂಚಿಯಾಗಿಯೂ ಒಟ್ಟು 16 ಜನ ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಸರ್ವ ಒಮ್ಮತದಿಂದ ಆಯ್ಕೆ ಮಾಡಲಾಗಿದೆ.

- ಐ.ಆರ್.ಪ್ರಮೋದ್

ದಾಂಡೇಲಿಯಲ್ಲಿ ಸಮರ್ಪಕ ರೇಷನ್‌ಗಾಗಿ ರಸ್ತೆ ತಡೆ

ದಾಂಡೇಲಿಯಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಕರೆಯ ಮೇರೆಗೆ ಸಮರ್ಪಕ ರೇಷನ್ ವ್ಯವಸ್ಥೆಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಒತ್ತಾಯಿಸಿ, ರಸ್ತೆ ತಡೆ ಏರ್ಪಡಿಸಲಾಯಿತು. ನಗರದ ವಿವಿಧ ವಿಭಾಗಗಳಿಂದ ಜನ ಭಾಗವಹಿಸಿದ್ದರು.

ರಸ್ತೆ ತಡೆ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಮಂಜುನಾಥ ಪುಲ್ಕರ, ಶಾಖಾ ಕಾರ್ಯದರ್ಶಿ ಜಿ.ಆರ್. ನಾಯಕ್, ಸದಸ್ಯರಾದ ಭೀಮರಾವ್ ಜೇರಟಗಿ, ಡಿ.ಎಸ್.ಕಲ್ಲುಟ್ಕರ್, ಬಿ.ಎಲ್. ನಾಯ್ಕ, ಡಿವೈಎಫ್ಐ ಡಿ.ಸ್ಯಾಮಸನ್, ಪಾರ್ವತಿ ಸರನಾಯ್ಕ, ಪದ್ಮಾ ಲಕ್ಷಣಸಿಂಗ, ಸಲ್ಮಾನ ಪಾವಲು ಶ್ರೇಯಾಸ್ ಪೇಪರ್ ಮಿಲ್ ಪದಾಧಿಕಾರಿಗಳು, ನಾಮದೇವ ಪಾಟೀಲ, ಶಿವಾಜಿ, ಬಾಬು ಗಾವಳಕರ ಮುಂತಾದವರು ಭಾಗವಹಿಸಿದ್ದರು. ಪೇಪರ್ ಮಿಲ್ ಯೂನಿಯನ್ ಪದಾಧಿಕಾರಿ ವಿದಯ ನಾಯ್ಕ, ಎಂ.ಎಚ್. ನಾಯ್ಕ, ರಾಜಾಸಾಲರವರು ಕೂಡ ಭಾಗವಹಿಸಿದ್ದರು.

ವರದಿ:ಎಚ್.ಬಿ.ನಾಯಕ್

.......ರೈತರ ದುಂಡುಮೇಜಿನ ಸಭೆ

ಪುಟ 10 ರಿಂದ

ಬ್ಯಾಂಕ್ ಈಗ ಸಾಲ ನೀಡಿದರೆ ಶೇಕಡ 4ರ ಬಡ್ಡಿದರಕ್ಕೆ ಸಾಲದೊರೆಯುತ್ತದೆ. ರೈತರನ್ನು ಈ ಸದ್ಯಕ್ಕೆ ಸಂಕಷ್ಟದಿಂದ ಪಾರು ಮಾಡಬೇಕಾದರೆ ಡಿಸಿಸಿ ಬ್ಯಾಂಕ್‌ಗೆ ಕನಿಷ್ಠ 60-70 ಕೋಟಿ ರೂ.ಹಣ ಬೇಕಾಗಿದೆ. ಆದರೆ ಬ್ಯಾಂಕ್ ಆ ಪರಿಸ್ಥಿತಿಯಲ್ಲಿ ಇಲ್ಲ. ಇದರ ಬಗ್ಗೆ ಪಕ್ಷಬೇಧ ಮರೆತು ಚರ್ಚಿಸಿ ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕೆಂದರು.

ಡಿಸಿಸಿ ಬ್ಯಾಂಕ್ ದಿವಾಳಿಯಾಗಿದ್ದು, ಅದಕ್ಕೆ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಹಾಗೂ ಬ್ಯಾಂಕನ್ನು ಪುನಶ್ಚೇತನಗೊಳಿಸಲು ಕನಿಷ್ಠ 60ಕೋಟಿ ರೂ.ಹಣ ತರಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ರೇಷ್ಮೆ ಬೆಳೆಗಾರರ ಸಂಘದ ಸಂಚಾಲಕರಾದ ಬ್ಯಾಲಹಳ್ಳಿ ಗೋವಿಂದಗೌಡ ಒತ್ತಾಯಿಸಿದರು.

ಸಹಕಾರ ಉಳಿಸುವ ಚಳುವಳಿ

ಜಿಲ್ಲೆಯಲ್ಲಿರುವ 180 ಸಹಕಾರಿ ಸಂಘಗಳಲ್ಲಿ 20 ಸಂಘಗಳು ಮಾತ್ರ ಎತ್ತುವಳಿ ಸಾಲ ಪಡೆಯಲು ಅರ್ಹವಾಗಿವೆ ಎಂದು ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡರಾದ ಹೋಳೂರು ಶಂಕರ್ ತಿಳಿಸಿದರು. ಅಪೆಕ್ಸ್ ಬ್ಯಾಂಕ್‌ನಿಂದ 15 ಕೋಟಿ ಬರಲಿದೆ ಎಂದು ಹೇಳುತ್ತಿದ್ದಾರಾದರೂ ಇನ್ನೂ ಬಂದಿಲ್ಲ. ಬ್ಯಾಂಕ್ ದಿವಾಳಿಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವುದರೊಂದಿಗೆ ಎಲ್ಲರೂ ಒಗ್ಗಟ್ಟಾಗಿ ಸಹಕಾರ ಸಂಘ ಉಳಿಸುವ ಚಳವಳಿ ಮಾಡಬೇಕೆಂದು ಸಲಹೆ ನೀಡಿದರು.

ಜಿಲ್ಲೆಯ ಸಹಕಾರ ರಂಗ ಉಳಿಸಲು ಪಕ್ಷಾತೀತವಾಗಿ ಎಲ್ಲರೂ ಪ್ರಯತ್ನ ಮಾಡಬೇಕು. ಇಂತಹ ಕೆಲಸಗಳನ್ನು ಮಾಡಿದರೆ ಪಕ್ಷಕ್ಕೆ ಮತ್ತು ತಮಗೆ ವೈಯುಕ್ತಿಕವಾಗಿ ಲಾಭ ಏನು ಎಂಬ ಕೆಟ್ಟ ಯೋಚನೆಗಳನ್ನು ಯಾರೂ ಮಾಡಬಾರದು ಎಂದು ಶಾಸಕ ಸುಧಾಕರ್ ರೆಡ್ಡಿ ಹೇಳಿದರು. ಜಿಲ್ಲೆಗೆ ಉದ್ಯೋಗ ಖಾತರಿ ಯೋಜನೆ ನೀಡಿಲ್ಲ ಎಂಬ ಬಗ್ಗೆ ಗಂಭೀರವಾಗಿ ಟೀಕಿಸಿದ ಅವರು ಹೆಚ್ಚು ಆತ್ಮಹತ್ಯೆಗಳನ್ನು ಮಾಡಿಕೊಂಡಿರುವ ಜಿಲ್ಲೆಗಳಿಗೆ ಯೋಜನೆ ಮಂಜೂರು ಮಾಡಿದ್ದಾರೆ ನಾವು ಆತ್ಮಹತ್ಯೆ ಮಾಡಿಕೊಳ್ಳಬೇಕಾ ಎಂದು ನೊಂದು ನುಡಿದರು. ಜಿಲ್ಲೆಯ ಬಗ್ಗೆ ರಾಜ್ಯ ಸರ್ಕಾರ ಹೊಂದಿರುವ ನಿರ್ಲಕ್ಷ ಧೋರಣೆಯನ್ನು ಖಂಡಿಸಿದರು. ಜಿಲ್ಲೆಯ ಜನಪ್ರತಿನಿಧಿಗಳ ಧ್ವನಿಗೆ ಬೆಲೆ ಇಲ್ಲದಂತಾಗಿದೆ ಎಂದು ವಿಷಾಧ ವ್ಯಕ್ತಪಡಿಸಿ, ಡಿಸಿಸಿ ಬ್ಯಾಂಕ್ ಪುನಶ್ಚೇತನಕ್ಕೆ ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದರು.

ರಾಜಕೀಯ ನಿರಾಶ್ರಿತರ ತಾಣ

ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಡಿಸಿಸಿ ಬ್ಯಾಂಕ್ ರಾಜಕೀಯ ನಿರಾಶ್ರಿತರ ಆಶ್ರಯತಾಣವಾಗಿದೆ ಎಂದು ದೂರಿದರು. ರಾಜಕಾರಣಿಗಳು ಮತ್ತು ಸಿಬ್ಬಂದಿ ಜಿಲ್ಲೆಯ ಸಹಕಾರಿ ರಂಗ ದಿವಾಳಿಗೆ ಪ್ರಮುಖ ಕಾರಣ ಎಂದು ದೂರಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೃಷಿ ಕುರಿತು ಹೊರಬೇಕಾಗಿದ್ದ ಜವಾಬ್ದಾರಿಯಿಂದ ನುಣುಚಿ ಕೊಂಡಿರುವುದ ರಿಂದ ಸಹಕಾರ ರಂಗ ಉಳಿಯದಿದ್ದಲ್ಲಿ ರೈತರು ಉಳಿಯಲು ಸಾಧ್ಯವಿಲ್ಲ ಎಂಬಂತಾಗಿದೆ. ರಾಜ್ಯ ಸರ್ಕಾರಗಳಿಗೆ ರಾಜಕೀಯ ಇಚ್ಛಾಶಕ್ತಿ ಇಲ್ಲ.ಎಲ್ಲದಕ್ಕೂ ಕೇಂದ್ರ ಸರ್ಕಾರದತ್ತ ಮುಖ ತಿರುಗಿಸುವಂತಾಗಿದೆ.

ಸಹಕಾರ ರಂಗದ ಕುರಿತು ವೈದ್ಯನಾಥನ್ ಸಮಿತಿ ವರದಿ ಸಲ್ಲಿಸಿದ್ದು ಸಚಿವ ಸಂಪುಟ ಅನುಮೋದನೆಯನ್ನೂ ನೀಡಿದೆ. ಆದರೆ ಅದನ್ನು ಅನುಷ್ಠಾನಗೊಳಿಸುವ ಶಕ್ತಿ ಸರ್ಕಾರಕ್ಕೆ ಇಲ್ಲದಾಗಿದೆ. ಪ್ರಬಾವಶಾಲಿ ವ್ಯಕ್ತಿಗಳು ಇದರ ಹಿಂದೆ ಕೆಲಸ ಮಾಡಿವೆ ಎಂದು ಟೀಕಿಸಿದರು. ಕೋಲಾರ ಜಿಲ್ಲೆಗೆ ಶಾಶ್ವತ ನೀರಾವರಿ ಸೌಲಭ್ಯ ಒದಗಿಸುವ ಕುರಿತು ಮುಖ್ಯಮಂತ್ರಿ ವಿರೋಧ ಹೊಂದಿದ್ದಾರೆ. ಪರಮಶಿವಯ್ಯ ವರದಿಯನ್ನು ವಿರೋಧಿಸುವ ಉದ್ದೇಶದಿಂದ ಕೆ.ಸಿ.ರೆಡ್ಡಿ ವರದಿಯನ್ನು ಮುಂದಿಡಲಾಗುತ್ತಿದೆ ಎಂದು ಆರೋಪಿಸಿದರು.

ನಿರ್ಣಯ


ಈ ಕೆಳಕಂಡ ನಿರ್ಣಯಗಳನ್ನುಸಭೆಯಲ್ಲಿ ಕೈಗೊಳ್ಳಲಾಯಿತು. ಸಾಲಮನ್ನಾ ಯೋಜನೆಯನ್ನು ಕೋಲಾರ ಜಿಲ್ಲೆಗೆ 2000ದಿಂದ ನೀಡುವಂತೆ ತಿದ್ದುಪಡಿ ತರುವಂತೆ ಒತ್ತಾಯಿಸಬೇಕು. ವಾಣಿಜ್ಯ ಬ್ಯಾಂಕರ್‌ಗಳ ಸಭೆ ನಡೆಸಿ ರೈತರಿಗೆ ಸಾಲ ನೀಡುವಂತೆ ಒತ್ತಾಯ ಹೇರಬೇಕು. ಡಿಸಿಸಿ ಬ್ಯಾಂಕ್ ಅವ್ಯವಹಾರ ಕುರಿತು ತನಿಖೆ ನಡೆಸಲು ಒತ್ತಾಯಿಸಬೇಕು. ಈ ಸಂಬಂಧ ಮುಖ್ಯ ಮಂತ್ರಿ ಮತ್ತು ಹಣಕಾಸು ಇಲಾಖೆಯೊಂದಿಗೆ ಚರ್ಚಿಸಬೇಕು. ಈಹಿನ್ನೆಲೆಯಲ್ಲಿ ಜಿಲ್ಲಾ ಕೇಂದ್ರದಲ್ಲಿ ಹೋರಾಟವನ್ನು ಸಂಘಟಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. ರೈತ ಮುಖಂಡರಾದ ಗಂಗಿರಡ್ಡಿ, ಸೂರಿ, ಎಸ್‌ಎಫ್‌ಐ, ಡಿವೈಎಫ್‌ಐ ಸೇರಿದಂತೆ ಇನ್ನೂ ಹಲವಾರು ಸಂಘಸಂಸ್ಥೆಗಳ ಮುಖಂಡರು ಸಭೆಯಲ್ಲಿ ಮಾತನಾಡಿದರು.

ತಾಯ್ನಾಡಿಗಾಗಿ ಹಂಬಲಿಸುತ್ತಿರುವ ಪ್ಯಾಲಿಸ್ತೇನ್ ನೆಲದಲ್ಲಿ...

ಕಾಂ. ವಿ.ಜೆ.ಕೆ.ನಾಯರ್

ನಿರೂಪಣೆ : ಕೆ.ಮಹಾಂತೇಶ್

ಹಿರಿಯ ಕಾರ್ಮಿಕ ನೇತಾರರಾದ ಕಾಂ. ವಿ.ಜೆ.ಕೆ.ನಾಯರ್ ಇತ್ತೀಚೆಗೆ ಪ್ಯಾಲೆಸ್ಟೇನ್‌ಗೆ 'ಶಾಂತಿಗಾಗಿ ಮುತುವರ್ಜಿ' ಎನ್ನುವ ಕಾರ್ಯಕ್ರಮದ ಸಂಬಂಧ ತೆರಳಿದ್ದರು. ಯುರೋಪ್‌ನ ಯಹೂದ್ಯರಿಂದ ಆಕ್ರಮಣಕ್ಕೆ ಗುರಿಯಾಗಿ ತಮ್ಮ ತಾಯ್ನಾಡನ್ನೇ ಕಳೆದುಕೊಂಡು, ಇಲ್ಲಿಯ ಯಹೂದಿಗಳು ಸ್ಥಾಪಿಸಿಕೊಂಡ ಇಸ್ರೇಲ್ ದೇಶದ ದುಷ್ಟ ದಬ್ಬಾಳಿಕೆಯಲ್ಲಿ ನಲುಗುತ್ತಿರುವ, ಪಾಲೆಸ್ಟೇನ್ ಜನರ ಸಂಕಷ್ಟಗಳನ್ನು, ತಾವು ಕಣ್ಣಾರೆ ಕಂಡ ಜೀವಂತ ಚಿತ್ರಣವನ್ನು ಇಲ್ಲಿ ತೆರೆದಿಟ್ಟಿದ್ದಾರೆ ವಿ.ಜೆ.ಕೆ.ಯವರು



ಪ್ಯಾಲಿಸ್ತೇನಿಯರ ತಾಯ್ನಾಡು ಜೇರುಸೆಲಂನ್ನು ಇಸ್ರೇಲ್ ವಶಪಡಿಸಿ ಕೊಂಡು ಈ ಜೂನ್ 4ಕ್ಕೆ 40 ವರ್ಷಗಳಾಯಿತು. 1967ರಲ್ಲಿ ಸತತವಾಗಿ ಆರು ದಿನಗಳ ಕಾಲ ನಡೆದ ಯುದ್ಧದ ಬಳಿಕ ಇಸ್ರೇಲ್ ಪ್ಯಾಲಿಸ್ತೇನಿಯರ ಮೇಲೆ ಈ ಆಕ್ರಮಣ ನಡೆಸಿ ಅದನ್ನು ವಶಪಡಿಸಿ ಕೊಂಡಿತ್ತು. ಅಂದಿನಿಂದ ಆರಂಭಗೊಂಡ ಪ್ಯಾಲಿಸ್ತೇನಿಯರ ನರಕಯಾತನೆಯ ಬದುಕು ಇಂದಿಗೂ ಮುಂದುವರೆದಿದೆ. ಇಸ್ರೇಲ್ ಪ್ಯಾಲಿಸ್ತೇನನ್ನು ಆಕ್ರಮಿಸಿಕೊಂಡು 40 ವರ್ಷಗಳು ಕಳೆದ ಹಿನ್ನೆಲೆಯಲ್ಲಿ ಇಸ್ರೇಲ್ ಕಮ್ಯೂನಿಸ್ಟ್ ಪಕ್ಷ ಹಾಗೂ ಪ್ಯಾಲಿಸ್ತೇನ್ ಪೀಪಲ್ಸ್ ಪಕ್ಷಗಳು ಜೇರುಸಲೇಂ ಶಾಂತಿಗಾಗಿ ಎಂಬ ಮೂರು ದಿನಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದವು. ಇದರಲ್ಲಿ ಭಾಗವಹಿಸುವ ಸಲುವಾಗಿ ನಾನು ಸಿಐಟಿಯುವಿನ ಪ್ರತಿನಿಧಿಯಾಗಿ ಜೇರುಸಲೇಂಗೆ ತೆರಳಿದ್ದೆ.

ಜೂನ್ 2ರಿಂದ 4ರವರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಒಟ್ಟು 12 ದೇಶಗಳಿಂದ 27 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಭಾರತದಿಂದ ಸಿಪಿಐ(ಎಂ) ಪರವಾಗಿ ಕಾಂ.ಸಿತಾರಾಂ ಯೆಚೂರಿ, ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದ ಸಂಘಟನೆಯ ರಾಜೀವ್ ರಾಜನ್ ಮತ್ತು ಸಿಟು ಪ್ರತಿನಿಧಿಯಾಗಿ ನಾನು ಭಾಗವಹಿಸಿದ್ದೆವು. ಅಲ್ಲದೆ ಅಮೇರಿಕಾ, ಬ್ರಿಟನ್, ಇಟಲಿ, ಪೋರ್ಚುಗಲ್, ಗ್ರೀಸ್, ಫ್ರಾನ್ಸ್ ದೇಶಗಳ ಕಮ್ಯೂನಿಸ್ಟ್ ಪಕ್ಷಗಳ ಪ್ರತಿನಿಧಿಗಳು, ನಾರ್ವೆಯ ಸೋಷಿಯಲಿಸ್ಟ್ ಲೆಫ್ಟ್ ಪಕ್ಷ, ಡೆನ್ಮಾರ್ಕ್‌ನ ರೆಡ್ ಗ್ರೀನ್ ಅಲೆಯನ್ಸ್ ಹಾಗೂ ಜರ್ಮನಿ ಮತ್ತು ಸೈಪ್ರೆಸ್ ದೇಶಗಳ ಪ್ರತಿನಿಧಿಗಳಲ್ಲದೆ ಹಲವಾರು ಮಹಿಳಾ ಸಂಘಟನೆಗಳ ಪ್ರತಿನಿಧಿಗಳು, ಸೀತಾರಾಂ ಯೆಚೂರಿ ಸೇರಿದಂತೆ ಐವರು ಸಂಸದರು ಪಾಲ್ಗೊಂಡಿದ್ದರು.

ಪ್ರಮುಖ ಉದ್ದೇಶ :

ಮೂರು ದಿನಗಳ ಈ ಕಾರ್ಯಕ್ರಮದ ಪ್ರಮುಖ ಉದ್ದೇಶ ಜೇರುಸಲೇಂನಲ್ಲಿ ಶಾಂತಿಗಾಗಿ ಮುತುವರ್ಜಿ ವಹಿಸುವು ದಾಗಿತ್ತು. ಹಲವು ದಶಕಗಳಿಂದ ಮಧ್ಯ ಪ್ರಾಚ್ಯದಲ್ಲಿ ಉಂಟಾಗಿರುವ ಬಿಕ್ಕಟ್ಟು ಕೊನೆಗೊಳ್ಳಬೇಕಾದರೆ ಇಸ್ರೇಲ್ ಎರಡು ದೇಶಗಳ ಸ್ಥಾಪನೆ ಒಪ್ಪಂದಕ್ಕೆ ಒಪ್ಪಿಕೊಳ್ಳಬೇಕು. ಮಾತ್ರವಲ್ಲ ಪ್ಯಾಲಿಸ್ತೇನ್ ಜನವಸತಿ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಿಸಲಾಗಿರುವ ಬೃಹದಾಕಾರದ ಪ್ರತ್ಯೇಕ ಗೋಡೆಗಳನ್ನು ನಾಶಪಡಿಸಬೇಕು. 1967 ಜೂನ್ 4ಕ್ಕಿಂತ ಮೊದಲು ಯಾವ ರೀತಿಯ ಗಡಿಗಳಿದ್ದವೂ ಅದಕ್ಕೆ ಬದ್ಧವಾಗಬೇಕು. ಅಲ್ಲದೆ ಜೆರುಸಲೇಂನ್ನು ಎರಡು ದೇಶಗಳು ತಮ್ಮ ರಾಜಧಾನಿಯನ್ನಾಗಿ ಒಪ್ಪಿ ಕೊಳ್ಳುವುದರ ಮೂಲಕ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ನಿರ್ಣಯದಂತೆ ನಿರಾಶ್ರಿತರ ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂಬುದಾಗಿತ್ತು.

ಕ್ರೋಧದ ಹೆಜ್ಜೆ :

ಮೂರು ದಿನಗಳ ಈ ಸಭೆಯ ಅಂತಿಮ ದಿನದಂದು ಭಾಗವಹಿಸಿದ್ದ ಪ್ರತಿನಿಧಿ ಗಳೆಲ್ಲರೂ ಮೆರವಣಿಗೆ ಮೂಲಕ ಇಸ್ರೇಲ್ ಆಕ್ರಮಿಸಿದ್ದ ಪ್ಯಾಲಿಸ್ತೇನಿಯರ ನೆಲದಲ್ಲಿ ತಮ್ಮ ಕ್ರೋಧದ ಹೆಜ್ಜೆಗಳನ್ನಿಟ್ಟು ಪ್ರತಿಭಟನೆ ವ್ಯಕ್ತಪಡಿಸಿದರು. ಜೆರುಸಲೇಂನ ಪಶ್ಚಿಮ ಭಾಗದಲ್ಲಿ ಹಸಿರು ರೇಖೆಯ ಮೂಲಕ ಇಸ್ರೇಲ್ ಪಶ್ಚಿಮ ಮತ್ತು ಪೂರ್ವ ಜೇರುಸಲೇಂನ್ನು ಇಬ್ಭಾಗಿಸಿದೆ. ನಾವು ಅಲ್ಲಿಗೆ ಮೆರವಣಿಗೆ ನಡೆಸಿದ ಸಂದರ್ಭದಲ್ಲೂ ಅಪಾರ ಸಂಖ್ಯೆಯ ಪೊಲೀಸರನ್ನು ನಿಯೋಜಿಸಿ ಇಸ್ರೇಲ್ ತನ್ನ ಕ್ರೂರ ಮುಖ ಪ್ರದರ್ಶಿಸಿತು. ಮಾತ್ರವಲ್ಲ ಘೋಷಣೆ ಕೂಗಿದ ಪ್ಯಾಲಿಸ್ತೇನಿನ ಪ್ರತಿನಿಧಿಗಳನ್ನು ಹತ್ತಿಕ್ಕಲು ಯತ್ನಿಸಿತು. ಆದಾಗ್ಯೂ ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಎರಡೂ ದೇಶಗಳ ಹಲವು ಗಣ್ಯರು ಭಾಗವಹಿಸಿದ್ದರು.


ಜೈಲಿನಲ್ಲಿರುವ ಪ್ಯಾಲಿಸ್ತೇನ್ ಸಂಸದರು

ಜೂನ್ 3ರಂದು ನಮ್ಮನ್ನು ರಮಲ್ಲಾಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಪ್ಯಾಲಿಸ್ತೇನಿನ ರಾಷ್ಟ್ರೀಯಮಂಡಳಿಯ ಶಾಸಕಾಂಗ ಸಭೆ ನಡೆಯುತ್ತಿತ್ತು. ಆದರೆ ಆ ಶಾಸಕಾಂಗದ ಒಳ ಪ್ರವೇಶಿಸುತ್ತಿದ್ದಂತೆ ನಮಗೆಲ್ಲಾ ಆಶ್ಚರ್ಯಗೊಳಿಸಿದ್ದು 41 ಸಂಸತ್ ಸದಸ್ಯರ ಭಾವಚಿತ್ರಗಳು. ಈ ಎಲ್ಲಾ ಫೋಟೋಗಳನ್ನು ಖಾಲಿ ಕುರ್ಚಿಗಳಲ್ಲಿ ಇರಿಸಲಾಗಿತ್ತು. ಈ ಬಗ್ಗೆ ಶಾಸಕಾಂಗದ ಅಧಿಕಾರಿಗಳನ್ನು ನಾವು ಕೇಳಿದೆವು. ಅವರು ನೀಡಿದ ಉತ್ತರ ಕೇಳಿ ಬೆಚ್ಚಿಬಿದ್ದೆವು. ಪ್ಯಾಲಿಸ್ತೇನಿಯರಿಂದ ಜನಪ್ರತಿನಿಧಿಗಳಾಗಿ ಆಯ್ಕೆಗೊಂಡ 41 ಸಂಸದರನ್ನು ಸಕಾರಣವಿಲ್ಲದೆ ಬಂಧಿಸಿ ಇಸ್ರೇಲ್ ತನ್ನ ಜೈಲಲ್ಲಿಟ್ಟಿದೆ. ಇದು ಪ್ಯಾಲಿಸ್ತೇನ್ ಜನರ ವಿರುದ್ಧ ಇಸ್ರೇಲ್ ನಡೆದುಕೊಳ್ಳುತ್ತಿರುವ ದಬ್ಬಾಳಿಕೆಗೆ ಪ್ರತ್ಯಕ್ಷ ದಾಖಲೆಯಂತಿತ್ತು. ಮಾತ್ರವಲ್ಲ ಪ್ರಜಾಪ್ರಭುತ್ವವನ್ನು ಇಸ್ರೇಲ್ ಹೇಗೆ ಗೌರವಿಸುತ್ತಿದೆ ಎಂಬುದನ್ನು ಈ ಘಟನೆ ಬಯಲು ಮಾಡಿತ್ತು. 135 ಸಂಸದರಲ್ಲಿ 41 ಜನರನ್ನು ಸೆರೆಮನೆಯಲ್ಲಿಟ್ಟು ಆ ಮೂಲಕ ಯಾವುದೇ ರೀತಿಯ ಶಾಸಕಾಂಗದ ಚಟುವಟಿಕೆಯೂ ನಡೆಯದಂತೆ ಇಸ್ರೇಲ್ ರೂಪಿಸಿದ ತಂತ್ರ ಇದಾಗಿದೆ.

ಇಸ್ರೇಲ್‌ನ ದಮನಕಾರಿ ನೀತಿ

ಪ್ಯಾಲಿಸ್ತೇನಿನ ಹಮಾಸ್ ಪಕ್ಷವನ್ನು ಇಸ್ರೇಲ್ ಒಪ್ಪಿಕೊಳ್ಳುತ್ತಿದೆಯೋ ಎಂದು ನಾವು ಶಾಸಕಾಂಗದ ನಾಯಕರನ್ನು ಕೇಳಿದೆವು. ಅದಕ್ಕೆ ಉತ್ತರಿಸಿದ ಅವರು ಪ್ಯಾಲಿಸ್ತೇನಿಯರ ಐಕ್ಯ ಸರ್ಕಾರವನ್ನು ಇಸ್ರೇಲ್ ಒಪ್ಪಿಕೊಳ್ಳುವುದೇನೆಂದರೆ, ಇಸ್ರೇಲ್ ಪಿಎಲ್‌ಓ ಜೊತೆ ಮಾಡಿಕೊಂಡ ಓಸ್ಲಾ ಒಪ್ಪಂದವನ್ನು ಒಪ್ಪಿಕೊಂಡಂತೆ. ವಿದೇಶಿ ನೀತಿಗೆ ಸಂಬಂಧಿಸಿದ ವಿಚಾರವನ್ನು ಪಿಎಲ್‌ಓಗೆ ವಹಿಸಲಾಗಿದೆ. ಐಕ್ಯ ಸರ್ಕಾರವನ್ನು ಇಸ್ರೇಲ್ ಮಾನ್ಯ ಮಾಡುವುದಾದರೆ ನಮ್ಮ ಸರ್ಕಾರದಲ್ಲಿ ಭಾಗಿಯಾದ ಎಲ್ಲಾ ಪಕ್ಷಗಳು ಸಹಮತ ವ್ಯಕ್ತಪಡಿಸುತ್ತಿವೆ. ಆದರೆ ಸ್ವತ: ಇಸ್ರೇಲ್ ಇದನ್ನು ಆರಂಭದಿಂದಲೂ ಒಪ್ಪುತ್ತಿಲ್ಲ ಮಾತ್ರವಲ್ಲ, 3/1 ಭಾಗ ಸಂಸದರನ್ನು ಬಂಧಿಸಿದೆ. ಅಲ್ಲದೆ ಕೊಲೆ, ದಬ್ಬಾಳಿಕೆಗಳನ್ನು ನಡೆಸುತ್ತಾ ದಮನಕಾರಿ ನೀತಿಯನ್ನು ಹರಿಯಬಿಟ್ಟಿದೆ ಎಂದು ಅವರು ಉತ್ತರಿಸಿದರು. ನಮ್ಮ ಈ ಭೇಟಿ ಸಂದರ್ಭದಲ್ಲಿ ಅಲ್ಲಿನ ರಾಷ್ಟ್ರೀಯ ಮಂಡಳಿಯನ್ನುದ್ದೇಶಿಸಿ ಕಾಂ.ಸೀತಾರಾಂ ಯೆಚೂರಿ ಸೇರಿದಂತೆ ಯುರೋಪ್ ಪಾರ್ಲಿಮೆಂಟಿನ ನಾರ್ವೆ ಮತ್ತು ಗ್ರೀಸ್ ಸಂಸದರು ಮಾತನಾಡಿದರು.

ರಮಲ್ಲಾಕ್ಕೆ ಪಯಣ



ಪ್ಯಾಲೆಸ್ಟೇನಿಯನ್ನರ ತಾಯ್ನೆಲವನ್ನು ವಿಭಜಿಸಿದ ಗೋಡೆ

ಪ್ಯಾಲಿಸ್ತೇನಿಯರ ರಾಷ್ಟ್ರೀಯ ಸರ್ಕಾರ ಕಾರ್ಯನಿರ್ವಹಿಸುತ್ತಿರುವುದು ಜೇರುಸಲೇಂ ಕೇಂದ್ರವಾದ ರಮಲ್ಲಾದಲ್ಲಿ, ಜೇರುಸಲೇಂನಿಂದ ರಮಲ್ಲಾಕೆ ಇರುವ ದೂರ ಕೇವಲ 17 ಕಿ.ಮೀ ಮಾತ್ರ. ಆದರೆ ಜೇರುಸಲೇಂನಿಂದ ರಮಲ್ಲಾಕ್ಕೆ ಹೋಗುವ ದಾರಿಯನ್ನು ಇಸ್ರೇಲ್ ಆಕ್ರಮಿಸಿಕೊಂಡು ಬಂದ್ ಮಾಡಿ ಅಡ್ಡಗೋಡೆ ನಿರ್ಮಿಸಿದೆ. ಹೀಗಾಗಿ ರಮಲ್ಲಾಕ್ಕೆ ನಾವು ಹೋಗಲು ಸುಮಾರು ಒಂದೂವರೆ ಗಂಟೆ ಸುತ್ತುಬಳಸಿ ಪ್ರಯಾಣಿಸಬೇಕಾಯಿತು. ಇನ್ನೂ ಪ್ಯಾಲಿಸ್ತೇನಿಯರು ಪ್ರಯಾಣಿಸ ಬೇಕಾದರಂತೂ ಪ್ರತಿ ಹಂತದಲ್ಲೂ ಹಿಂಸೆಯನ್ನು ಅನುಭವಿಸುತ್ತಲೇ, ಜ್ಯೂಗಳಿಗಾಗಿ ನಿರ್ಮಿಸಿರುವ ಕಲ್ಲು ಮಣ್ಣಿನ ರಸ್ತೆಯಲ್ಲಿಯೇ ಚಲಿಸಬೇಕು. ಈ ಎರಡೂ ನಗರಗಳ ಮಧ್ಯೆದಲ್ಲಿರುವ ಚೆಕ್ ಪಾಯಿಂಟ್‌ನ್ನು ದಾಟಬೇಕಾದಾಗಲಂತೂ ಇಸ್ರೇಲ್ ಸೈನಿಕರ ಕ್ರೂರ ಮುಖ ನಿಜವಾಗಿಯೂ ಹೇಗಿರುತ್ತದೆ ಎಂಬುದನ್ನು ನಾವು ಪ್ರತ್ಯಕ್ಷ ಕಾಣುವ ಅವಕಾಶ ಸಿಕ್ಕಿತು.

ಅಮಾನವೀಯ ಅಡ್ಡ ಗೋಡೆಗಳು :


ಜೆರುಸಲೇಂ ತಲುಪಿದ ಮೊದಲ ದಿನವೇ ನಮಗೆ ಮನುಷ್ಯ ವಿರೋಧಿ ಪ್ರತ್ಯೇಕ ಗೋಡೆಗಳ ದರ್ಶನವಾಯಿತು. ಇಸ್ರೇಲ್ ಆಕ್ರಮಿಸಿರುವ ಪ್ಯಾಲಿಸ್ತೇನಿನ ಜನವಸತಿ ಪ್ರದೇಶಗಳ ಮಧ್ಯದಲ್ಲಿಯೇ ನಿರ್ಮಿಸಲಾಗಿರುವ ಈ 720 ಕಿ.ಮೀ ಉದ್ದದ ಗೋಡೆಗಳು ಅಕ್ಷರಶ: ಪ್ಯಾಲಿಸ್ತೇನಿಯರ ಬದುಕನ್ನೇ ಇಬ್ಭಾಗಿಸಿವೆ. ಪ್ರತಿ ಜನವಸತಿ ಪ್ರದೇಶಗಳಲ್ಲೂ 8ರಿಂದ 11 ಮೀಟರ್ ಎತ್ತರದ ಪ್ರತ್ಯೇಕ ಗೋಡೆಗಳನ್ನು ಇಸ್ರೇಲ್ ನಿರ್ಮಿಸಿದೆ. ಇಸ್ರೇಲ್ ದುರುದ್ದೇಶ ಪೂರಕವಾಗಿಯೆ ನಿರ್ಮಿಸಿದ ಈ ಗೋಡೆಗಳ ಪರಿಣಾಮ ಹೇಗಾಗಿದೆಯೆಂದರೆ.... ಕೃಷಿ ಭೂಮಿಯಿಂದ ರೈತರನ್ನು, ಕಛೇರಿಗಳಿಂದ ನೌಕರರನ್ನು, ಶಾಲೆಗಳಿಂದ ವಿದ್ಯಾರ್ಥಿಗಳನ್ನು, ಆಸ್ಪತ್ರೆಗಳಿಂದ ರೋಗಿಗಳನ್ನು ಪ್ರತ್ಯೇಕಿಸಲಾಗಿದೆ. ಮಾತ್ರವಲ್ಲ, ಒಂದು ಕಡೆಯಿರುವ ತಂದೆ ತಾಯಿ, ಬಂಧುಗಳನ್ನು ಭೇಟಿಯಾಗುವುದೇ ಪ್ಯಾಲಿಸ್ತೇನಿಯರಿಗೆ ದುಸ್ತರವಾಗಿದೆ.

ಜೀಸಸ್‌ನ ಜನ್ಮ ಸ್ಥಳಕ್ಕೂ ನಿರ್ಬಂಧ :

ಕ್ರಿಸ್ತನ ಜನ್ಮಸ್ಥಳ ಬೆತ್ಲೆಹೋಂ. ಇದು ಇರುವುದು ಪ್ಯಾಲಿಸ್ತೇನಿನಲ್ಲಿ, ಹೀಗಾಗಿ ಇದು ಜಗತ್ತಿನಲ್ಲಿರುವ ಕ್ರೈಸ್ತರಿಗೆ ಪವಿತ್ರ ಯಾತ್ರಾ ಕೇಂದ್ರವಾಗಿದೆ. ಆದರೆ ಪ್ರವಾಸಿಗರು ಬೆತ್ಲೆಹೋಂಗೆ ಭೇಟಿ ನೀಡಬೇಕಾದರೆ ಇಸ್ರೇಲ್ ಪ್ರವಾಸಿ ಏಜೆಂಟರನ್ನೇ ಅವಲಂಬಿಸುವಂತಹ ಪರಿಸ್ಥಿತಿ ನಿರ್ಮಿಸಲಾಗಿದೆ. ಅಷ್ಟು ಮಾತ್ರವಲ್ಲದೆ ಪವಿತ್ರ ಬೆತ್ಲೆಹೋಂಗೆ ಹೊಂದಿ ಕೊಂಡಿರುವ ಓಲಿವ್ಸ್ ಕೃಷಿ ಪ್ರದೇಶವನ್ನೇ ಇದರಿಂದ ಗೋಡೆ ನಿರ್ಮಿಸಿ ಪ್ರತ್ಯೇಕಿಸಿರುವುದನ್ನು ನಾವು ಕಣ್ಣಾರೆ ಕಂಡೆವು.

ಇಸ್ರೇಲ್ ಕಾನೂನಿನ ಪ್ರಕಾರ ಯಾವುದೇ ಕೃಷಿ ಭೂಮಿಯನ್ನು ಮೂರು ವರ್ಷಗಳ ಕಾಲ ಉಳುಮೆ ಮಾಡಿಲ್ಲವೆಂದರೆ ಅಂತಹ ಭೂಮಿಯನ್ನು ವಶಪಡಿಸಿಕೊಳ್ಳುವ ಅಧಿಕಾರ ಸರ್ಕಾರಕ್ಕಿದೆ. ಇದನ್ನೇ ಬಳಸಿ ಇಸ್ರೇಲ್ ಪ್ಯಾಲಿಸ್ತೇನಿಯರ ಭೂಮಿಯನ್ನು ಕಬಳಿಸಿ ಆ ಮೂಲಕ ಅವರ ಆರ್ಥಿಕತೆಯನ್ನು ನಾಶಪಡಿಸುವ ಪ್ರಯತ್ನ ನಡೆಸಿದೆ. ಇಸ್ರೇಲ್‌ನ ಈ ಪ್ರಯತ್ನ ಕೇವಲ ಕೃಷಿ ಭೂಮಿಗೆ ಮಾತ್ರ ಸೀಮಿತವಾಗಿಲ್ಲ. ಪ್ಯಾಲಿಸ್ತೇನಿಯರ ಪ್ರಮುಖ ನಗರಪಟ್ಟಣಗಳನ್ನೆಲ್ಲಾ ಇಂತಹ ಗೋಡೆಗಳ ಮೂಲಕ ಇಭ್ಭಾಗಿಸಲಾಗಿದೆ. ಒಂದು ಕಾಲದಲ್ಲಿ ವ್ಯಾಪಾರ ವಹಿವಾಟಿನಿಂದ ತುಂಬಿದ್ದ ಅರಾಮ್ ನಗರವೇ ಇದಕ್ಕೆ ಪ್ರತ್ಯಕ್ಷ ಉದಾಹರಣೆ. ಆ ವಾಣಿಜ್ಯ ನಗರಿಯ ಮಧ್ಯೆದಿಂದ ಇಸ್ರೇಲ್ ಅಡ್ಡಗೋಡೆ ನಿರ್ಮಿಸಿದ ಪರಿಣಾಮ ಇಡೀ ನಗರವೇ ಸ್ತಬ್ಧಗೊಂಡಿದೆ. ಇಂತಹ ಬೃಹತ್ ಗೋಡೆಗಳನ್ನು ಕಟ್ಟುವುದಲ್ಲದೇ ಅದರ ಸುತ್ತ ಬಿಗಿ ಪೊಲೀಸರನ್ನು ಹಾಕಿ ನಿತ್ಯ ಪ್ಯಾಲಿಸ್ತೇನಿಯರಿಗೆ ಬೆದರಿಕೆ ಹಾಕಲಾಗುತ್ತಿದೆ. ಇಸ್ರೇಲ್ ಆಕ್ರಮಿತ ಪ್ರದೇಶಗಳಲ್ಲಿ ಪ್ಯಾಲಿಸ್ತೇನಿಯರು ಯಾವುದೇ ಕಟ್ಟಡ ಕಟ್ಟುವುದಕ್ಕಾಗಲಿ, ರಿಪೇರಿ ಮಾಡುವುದಕ್ಕಾಗಲಿ ಇಸ್ರೇಲ್ ಅವಕಾಶ ನೀಡದೆ ನಿರ್ಬಂಧ ವಿಧಿಸಿದೆ. ಅಲ್ಲದೆ ಪ್ಯಾಲಿಸ್ತೇನಿಯರ ಕಟ್ಟಡಗಳನ್ನು ನಿರಂತರವಾಗಿ ಇಸ್ರೇಲ್ ಆಡಳಿತ ನೆಲಸಮ ಮಾಡುತ್ತಿದೆ. ಹೀಗೆ ವಶಪಡಿಸಿಕೊಂಡಿರುವ ಪ್ರದೇಶದಲ್ಲಿ ವಾಸಿಸುವ ಜನರಿಗೆ ಕನಿಷ್ಠ ನಾಗರಿಕ ಸೌಲತ್ತುಗಳನ್ನು ಸಹಾ ನೀಡುತ್ತಿಲ್ಲ. ಒಟ್ಟಾರೆ ಕಳೆದ ಹಲವು ದಶಕಗಳಿಂದ ಈ ರೀತಿಯ ಆಕ್ರಮಣವನ್ನೇ ನಡೆಸಿಯೇ ಪ್ಯಾಲಿಸ್ತೇನಿಯರ ಶೇ.70ರಷ್ಟು ಕೃಷಿಭೂಮಿ ಹಾಗೂ ನೀರಿನ ಸಂಪನ್ಮೂಲವನ್ನು ಇಸ್ರೇಲ್ ಕಬಳಿಸಿದೆ. ಇಸ್ರೇಲ್‌ನ ಈ ಅತಿರೇಕದ ವಿರುದ್ಧ ಸಹಜವಾಗಿಯೆ ಪ್ಯಾಲಿಸ್ತೇನ್ ಜನರಲ್ಲಿ ಆಕ್ರೋಶ ಮನೆ ಮಾಡಿದೆ. ಹಾಗಾಗಿ ನಿತ್ಯ ಇಸ್ರೇಲ್ ಪೊಲೀಸರ ವಿರುದ್ಧ ತಿರುಗಿ

ಪುಟ 15 ಕ್ಕೆ






■ ಜಯ

ವಾಯುಶಕ್ತಿಯಿಂದ ವಿದ್ಯುತ್ ಉತ್ಪಾದನೆ

ವಾಯುಶಕ್ತಿಯಲ್ಲಿರುವ ಚಲನ ಶಕ್ತಿಯನ್ನು ಯಂತ್ರಶಕ್ತಿಯಾಗಿ ಪರಿವರ್ತಿಸುವ ಯಂತ್ರಕ್ಕೆ ವಾಯು ಟರ್ಬೈನ್ ಎಂದು ಕರೆಯುತ್ತಾರೆ. ಈ ಯಂತ್ರಶಕ್ತಿಯನ್ನು ನೇರವಾಗಿ ತನ್ನ ಚಾಲನೆಗಾಗಿ ಬಳಸಿಕೊಳ್ಳುವ ಯಂತ್ರಕ್ಕೆ ಗಾಳಿಯಂತ್ರ (Wind Mill) ಎಂದು ಕರೆಯಲಾಗುತ್ತದೆ. ಉದಾಹರಣೆಗೆ: ಪಂಪ್‌ಗಳು, ಇತ್ಯಾದಿ. ಆದರೆ ಯಂತ್ರ ಶಕ್ತಿಯನ್ನು ಬಳಸಿಕೊಂಡು ವಿದ್ಯುತ್‌ನ್ನು ಉತ್ಪಾದಿಸುವ ಯಂತ್ರಕ್ಕೆ ವಾಯು ವಿದ್ಯುದುತ್ಪಾದಕ ಯಂತ್ರ (Wind generator) ಎಂದು ಕರೆಯಲಾಗುತ್ತದೆ.

ಎತ್ತರದ ಪ್ರದೇಶಗಳಿಗೆ ಹೋದಂತೆಲ್ಲ ಭೂಮಿಯ ಮೇಲ್ಮೈನೊಂದಿಗೆ ಘರ್ಷಣೆ ಕಡಿಮೆಯಾಗುವುದರಿಂದ ಗಾಳಿಯು ಹೆಚ್ಚಿನ ವೇಗದಲ್ಲಿ ಬೀಸುತ್ತದೆ. ಎತ್ತರದ ಪ್ರದೇಶಗಳಲ್ಲಿ ನಿರಂತರವಾಗಿ ಘಂಟೆಗೆ 100 ಮೈಲಿ ವೇಗದಲ್ಲಿ ಬೀಸುವ ಗಾಳಿಶಕ್ತಿಯನ್ನು ಚಲಿಸುವ ಟರ್ಬೈನ್‌ಗಳ ಮೇಲೆ ಹಾಯಿಸಲಾಗುತ್ತದೆ. ವಾಯು ಶಕ್ತಿಯು ಟರ್ಬೈನ್‌ಗೆ ತನ್ನ ಶಕ್ತಿಯನ್ನು ವರ್ಗಾಯಿಸುತ್ತದೆ. ಇದರಲ್ಲಿ ವಾಯು ಸಾಂದ್ರತೆ, ವಾಯು ವೇಗ, ಮತ್ತು ಟರ್ಬೈನ್‌ಗಳು ಪ್ರಧಾನ ಪಾತ್ರ ವಹಿಸುತ್ತವೆ. ಸಾಮಾನ್ಯವಾಗಿ ಜನರೇಟರ್‌ಗಳನ್ನು ಟರ್ಬೈನ್‌ನ ಹಿಂಭಾಗದಲ್ಲಿ ಅಳವಡಿಸಿ ರುತ್ತಾರೆ. ಅದು ಟರ್ಬೈನ್ ಉತ್ಪಾದಿಸುವ ಯಂತ್ರಶಕ್ತಿಯನ್ನು ಉಪಯೋಗಿಸಿಕೊಂಡು ವಿದ್ಯುಚ್ಛಕ್ತಿಯನ್ನಾಗಿ ಪರಿವರ್ತಿಸುತ್ತದೆ.



ಪ್ರತಿಯೊಂದು ಟರ್ಬೈನ್‌ಗೆ ಹೆಚ್ಚೆಂದರೆ ಎರಡು ಅಥವಾ ಮೂರು ಬ್ಲೇಡ್‌ಗಳನ್ನು ಅಳವಡಿಸಲಾಗುತ್ತದೆ. ವೇಗವಾಗಿ ಚಲಿಸುವ ಟರ್ಬೈನ್‌ಗಳನ್ನು ದುರಸ್ತಿ ಕಾರ್ಯಕ್ಕಾಗಿ ನಿಲ್ಲಿಸುವ ಸಲುವಾಗಿ ವಿದ್ಯುದಯ ಸ್ಕಾಂತ-ಆಧಾರಿತವಾದ ಬ್ರೇಕ್‌ಗಳನ್ನು ಆರಂಭದಲ್ಲಿ ಬಳಸಿ ನಂತರ ಡ್ರಮ್ ಅಥವಾ ಡಿಸ್ಕ್ ಬ್ರೇಕ್‌ಗಳನ್ನು ಒತ್ತಲಾಗುತ್ತದೆ. ಟರ್ಬೈನ್ ಬ್ಲೇಡ್‌ಗಳನ್ನು ಕಾರ್ಬನ್ ಫೈಬರ್ ಅಥವಾ ಎಪಾಕ್ಸಿ ರೆಸಿನ್ ಗಳಿಂದ ತಯಾರಿಸಲಾಗುತ್ತದೆ.



ಹಲವಾರು ರಾಷ್ಟ್ರಗಳಲ್ಲಿ ಗಾಳಿಯಂತ್ರ ಗಳಿಂದ ಸಣ್ಣ ಪ್ರಮಾಣದ ವಿದ್ಯುತ್ ಉತ್ಪಾದಿಸಿ ಬ್ಯಾಟರಿಗಳಲ್ಲಿ ಸಂಗ್ರಹಿಸಿಟ್ಟು ಮನೆಗಳಿಗಾಗಿ ಬಳಸಿಕೊಳ್ಳಲಾಗುತ್ತದೆ.

ಕಡಲತೀರದಿಂದ ಸುಮಾರು ಮೂರು ಕಿ.ಮೀ ಗಿಂತ ಹೆಚ್ಚು ದೂರದಲ್ಲಿ ಒಳನಾಡಿ ನಲ್ಲಿ ಸ್ಥಾಪಿಸುವ ಗಾಳಿಯಂತ್ರಗಳಿಗೆ ಒಳನಾಡಿನ ಗಾಳಿಯಂತ್ರಗಳೆಂದೂ, ಭೂಪ್ರದೇಶದಿಂದ 10 ಕಿ.ಮೀ ಗಿಂತ ಹೆಚ್ಚು ದೂರದಲ್ಲಿ ಸಮುದ್ರದೊಳಗೆ ಸ್ಥಾಪಿಸುವ ಗಾಳಿಯಂತ್ರಗಳಿಗೆ ಸಾಗರೋತ್ತರ ಗಾಳಿಯಂತ್ರಗಳೆಂದು ಕರೆಯಲಾಗುತ್ತದೆ. ಇವೆರಡೂ ಸ್ಥಳಗಳ ಮಧ್ಯೆ ಸ್ಥಾಪಿಸುವ ಗಾಳಿಯಂತ್ರಗಳು ಕಡಲ ಸಮೀಪದ ಗಾಳಿಯಂತ್ರಗಳೆನಿಸಿಕೊಳ್ಳುತ್ತವೆ.

ವಾಯು ವಿದ್ಯುದುತ್ಪಾದನೆಯಲ್ಲಿ ಜರ್ಮನಿಯು 20,000 ಮೆಗಾ ವ್ಯಾಟ್ ಉತ್ಪಾದನೆಯೊಂದಿಗೆ ವಿಶ್ವದಲ್ಲೇ ಅಗ್ರಸ್ಥಾನದಲ್ಲಿದ್ದರೆ, 7,000 ಮೆಗಾವ್ಯಾಟ್ ಉತ್ಪಾದನೆಯೊಂದಿಗೆ ಭಾರತ 4 ನೇ ಸ್ಥಾನದಲ್ಲಿದೆ. ಪ್ರಸ್ತುತ ವಿಶ್ವದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಕೇವಲ ಶೇ. 1 ರಷ್ಟು ಮಾತ್ರ ವಾಯು ವಿದ್ಯುದುತ್ಪಾದನೆಯ ಪಾಲಿದೆ. ನವೀಕರಿಸಬಲ್ಲ ಸಂಪನ್ಮೂಲ ವಾಗಿರುವ ವಾಯುಶಕ್ತಿಯಿಂದ ಇನ್ನೂ ಹೆಚ್ಚಿನ ಮಟ್ಟದ ವಿದ್ಯುತ್ ಉತ್ಪಾದಿಸಲು ಸಾಧ್ಯವಿದ್ದರೂ ಆರಂಭಿಕ ಬಂಡವಾಳವನ್ನು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸ ಬೇಕಾಗುತ್ತದೆ. ಆದರೆ, ಯಾವುದೇ ರೀತಿಯ ಮಾಲಿನ್ಯ ಉಂಟಾಗದ್ದರಿಂದ ವಾಯು ಶಕ್ತಿಯನ್ನು ಕಡಿಮೆ ವೆಚ್ಚದಲ್ಲಿ ಇನ್ನಷ್ಟು ಸದ್ಬಳಕೆ ಮಾಡಿಕೊಳ್ಳಲು ಪ್ರಯತ್ನಗಳು ನಡೆದಿವೆ. ಕರ್ನಾಟಕದ ಕಪ್ಪತಗುಡ್ಡ (ಧಾರವಾಡ), ಜೋಗಿಮಟ್ಟಿ (ಚಿತ್ರದುರ್ಗ), ಗೋಕಾಕ್ (ಬೆಳಗಾಂ), ಮಾಲಗಟ್ಟಿ, ಹನುಮಸಾಗರ (ರಾಯಚೂರು), ಬೊಮ್ಮನಹಳ್ಳಿ, ಹನುಮನಮಟ್ಟಿ (ಧಾರವಾಡ) ಗಳಲ್ಲಿ ಸುಮಾರು 720 ಮೆಗಾವ್ಯಾಟ್ ವಾಯು ವಿದ್ಯುದುತ್ಪಾದನೆ ಮಾಡಲಾಗುತ್ತಿದೆ.



■ ಜಿ.ಎಸ್.ಮಣಿ

ಏನಾಯ್ತು ? ಜಗತ್ತಿನಾದ್ಯಂತ 'ಭಾರತದಲ್ಲಿ ಮಾಡಿದ ಸರಕು'ಗಳ ಹೊಳೆ ಹರಿಸುವ ಕನಸು !

ಉದಾರೀಕರಣದಿಂದ ಭಾರತದ ರಫ್ತು ಸಾಮರ್ಥ್ಯ ಹೆಚ್ಚಾಗಿ ಭಾರತದ ಸರಕುಗಳು ಜಗತ್ತಿನೆಲ್ಲೆಡೆ ರಫ್ತಾಗುತ್ತವೆ ಎಂದು ನಿರೀಕ್ಷಿಸಲಾಗಿತ್ತು. ಭಾರತದಲ್ಲಿ ಕಡಿಮೆ ಬೆಲೆಗೆ ಶ್ರಮಿಕರ ಶ್ರಮ ಲಭ್ಯವಿದ್ದುದರಿಂದ ಉತ್ಪಾದನಾ ವೆಚ್ಚ ಕಡಿಮೆ ಇರುವುದರಿಂದ ಬೆಲೆಯ ಅನುಕೂಲದಿಂದಾಗಿ ರಫ್ತು ಹೆಚ್ಚಾಗುತ್ತದೆ ಎಂಬ ವಾದ ಉದಾರೀಕರಣವಾದಿಗಳದ್ದು, ಜಗತ್ತಿನಾದ್ಯಂತ 'ಭಾರತದಲ್ಲಿ ಮಾಡಿದ' ಸರಕುಗಳ ಹೊಳೆ ಹರಿಯಲಾಗುತ್ತದೆ ಎಂಬುದು ಇವರ ನಿರೀಕ್ಷೆ. ಚೀನಾ ಈ ರೀತಿ ಬೆಳೆಯಬಹುದಾದರೆ ನಾವೇನು ಕಮ್ಮಿ ಎಂಬುದೂ ಅವರ ಪ್ರಶ್ನೆ.

ಈಗ ಒಂದೂವರೆ, ದಶಕಗಳು ಉದಾರೀಕರಣ ನಡೆದಿದೆ. ಜಗತ್ತಿನಾದ್ಯಂತ 'ಭಾರತದಲ್ಲಿ ಮಾಡಿದ' ಸರಕುಗಳ ವಿಷಯದಲ್ಲಿ ನಮ್ಮ ಆಮದು ಅಂದರೆ ನಾವು ತರಿಸಿಕೊಳ್ಳುವ ವಸ್ತುಗಳ ಪ್ರಮಾಣದಲ್ಲಿ ಹೆಚ್ಚಾಗಿದೆ. ನಮ್ಮ ಒಟ್ಟಾರೆ ರಫ್ತು ಅಂದರೆ ನಾವು ಹೊರಗೆ ಕಳಿಸುವುದು ಸ್ವಲ್ಪ ಪ್ರಮಾಣದಲ್ಲಿ ಇತ್ತೀಚೆಗೆ ಹೆಚ್ಚಾಗಿರುವುದು ನಿಜ. 2000 ದಿಂದೀಚಿನ ವರ್ಷಗಳ ರಫ್ತನ್ನು ನೋಡಿದರೆ ಇದು ಗೊತ್ತಾಗುತ್ತದೆ. ಆದರೆ ಈ ರಫ್ತು ಯಾವ ಸರಕುಗಳಿಂದ ಆಗಿದೆ? ಈ ರಫ್ತು ಹೆಚ್ಚಳ ಅದಿರು ಮತ್ತು ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಆಗಿದೆ. ಅದಿರು ಹೆಚ್ಚಿನ ಪ್ರಮಾಣದಲ್ಲಿ ಚೀನಾಕ್ಕೆ ರಫ್ತಾಗಿದೆ. ಅಲ್ಲಿ ಮುಂದಿನ ಒಲಂಪಿಕ್ಸ್ ನಡೆಯಲಿರುವುದರಿಂದ ಹೆಚ್ಚಿನ ಬೇಡಿಕೆ ಬಂದು ಇದು ಸಾಧ್ಯವಾಗಿದೆ. ನಾವು ಅವನ್ನೇ ಹೆಚ್ಚು ಪ್ರಮಾಣದಲ್ಲಿ ರಫ್ತು ಮಾಡಿದ್ದೇವೆಂದರೆ ಈ ಅದಿರನ್ನು ಸಂಸ್ಕರಿಸುವ ಸಾಮರ್ಥ್ಯ ನಮ್ಮಲ್ಲಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ರಫ್ತು ಕಚ್ಚಾ ಸಾಮಗ್ರಿಗಳಿಂದಲೇ ಬರುವುದು ಎಂಬುದೂ ಗೊತ್ತಾಗುತ್ತದೆ. ಉದಾರೀಕರಣದಿಂದಾಗಿ ನಮ್ಮ ಉತ್ಪಾದನಾ ಸಾಮರ್ಥ್ಯ ನಿಜವಾಗಿ ಹೆಚ್ಚಾಗಿದೆಯೇ ಎಂಬುದೇ ಪ್ರಶ್ನೆ.

ಇನ್ನು ಪೆಟ್ರೋಲಿಯಂ ಉತ್ಪನ್ನಗಳು, ಈ ಉತ್ಪನ್ನಗಳನ್ನು ನಾವು ಆಮದು ಮಾಡಿಕೊಳ್ಳುತ್ತಿರುವುದೇ ಹೆಚ್ಚು. ನಾವು ಈ ಉತ್ಪನ್ನಗಳನ್ನು ಅಲ್ಪ ಪ್ರಮಾಣದಲ್ಲಿ ರಫ್ತು ಮಾಡಿದ್ದರೂ ದೇಶಕ್ಕೆ ಒಟ್ಟಾರೆ ಲಾಭವಾಗಲಾರದು. ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ನಮ್ಮ ಸಾಂಪ್ರದಾಯಿಕ ರಫ್ತು ಸರಕುಗಳಾದ ಜವಳಿ, ಆಭರಣ, ಚರ್ಮ ಇತ್ಯಾದಿಗಳ ಪಾಲು ರಫ್ತಿನಲ್ಲಿ ಕಡಿಮೆಯಾಗುತ್ತ ಬಂದಿರುವುದು. ರಸಾಯನಿಕಗಳು ಮತ್ತು ಎಂಜಿನಿಯರಿಂಗ್ ಸರಕುಗಳ ರಫ್ತು ಸ್ವಲ್ಪ ಪ್ರಮಾಣದಲ್ಲಿ ಏರಿದೆ.

ಸಕ್ಕರೆ, ಕಬ್ಬಿಣೇತರ ಲೋಹಗಳು, ಕಚ್ಚಾ ಹತ್ತಿ, ಶೇಂಗಾ, ಅಲ್ಯೂಮಿನಿಯಂ, ಅರೆ ಸಂಸ್ಕರಿಸಿದ ಉಕ್ಕು ಮತ್ತು ಕಬ್ಬಿಣ ಇತ್ಯಾದಿಗಳಲ್ಲೂ ನಮ್ಮ ರಫ್ತು ಹೆಚ್ಚಿದೆ. ಅಲ್ಪಮಟ್ಟಿಗೆ ಭಾರತ ಜಾಗತಿಕವಾಗಿ ತನ್ನ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಿಕೊಂಡಿದೆ ನಿಜ. ಆದರೆ ಇದು ತೀರ ಕೆಳಮಟ್ಟದಲ್ಲಿ ಆಗಿರುವಂತಹದ್ದು, ಒಟ್ಟಾರೆಯಾಗಿ ನೋಡಿದರೆ ಭಾರತದ ವಿದೇಶಿ ವ್ಯಾಪಾರದಲ್ಲಿ ಆ ರಫ್ತಿಗಿಂತ ಆಮದೇ ಹೆಚ್ಚಿನ ಪ್ರಮಾಣದಲ್ಲಿ ಇದೆ.

ಮಾಹಿತಿ ತಂತ್ರಜ್ಞಾನ ಮತ್ತು ಅದಕ್ಕೆ ಸಂಬಂಧಪಟ್ಟ ಸೇವೆಗಳ ರಫ್ತು ಹೆಚ್ಚಾಗಿರುವುದರಿಂದ ನಮ್ಮ ಆಮದು ಹೆಚ್ಚಾಗಿರುವುದು ತೀವ್ರವಾಗಿ ಗಮನಕ್ಕೆ ಬಾರದಂತಾಗಿದೆ. ವ್ಯಾಪಾರ ಬಾಕಿಯನ್ನು ಅದು ಮುಚ್ಚಿ ಹಾಕಿದೆ. ಇದರ ದೋಷವೇನೆಂದರೆ ಇದರಿಂದಾಗಿ ವಿದೇಶಿ ಬಂಡವಾಳ ದೊಡ್ಡ ಪ್ರಮಾಣದಲ್ಲಿ ಹರಿದು ಬಂದು ನಮ್ಮ ವಿದೇಶಿ ವಿನಿಮಯ ಪರಿಸ್ಥಿತಿ ಉತ್ತಮಗೊಂಡಿವೆ. ಭಾರತೀಯ ರಿಸರ್ವ್ ಬ್ಯಾಂಕ್ ವಿದೇಶಿ ವಿನಿಮಯ ನಿಬಂಧನೆಗಳನ್ನು ಸಡಲಿಸಿದೆ. ರೂಪಾಯಿಯ ಬೆಲೆ ಸಹ ಸ್ವಲ್ಪ ಮಟ್ಟಿಗೆ ಉತ್ತಮಗೊಂಡಿದೆ.

ವಿದೇಶಗಳಲ್ಲಿ ವಶೀಕರಣ: ಇಂತಹ ಪರಿಸ್ಥಿತಿಯ ಲಾಭ ಪಡೆದಿರುವ ನಮ್ಮ ದೇಶೀ ಬಂಡವಾಳಗಾರರು ವಿದೇಶಿಗಳಲ್ಲಿ ಕಾರ್ಖಾನೆಗಳ ವಶೀಕರಣದತ್ತ ವಾಲಿದ್ದಾರೆ. ಟಾಟಾರವರ 'ಕೋರಸ್' ಕೊಳ್ಳುವಿಕೆ ಇದಕ್ಕೊಂದು ಉದಾಹರಣೆ. ಭಾರತೀಯ ಬಂಡವಾಳಿಗರು ವಿದೇಶಗಳಲ್ಲೂ ಉತ್ಪಾದನಾ ಸಾಮರ್ಥ್ಯ ಹೊಂದಿದ್ದರೆ ಅದರಿಂದ ದೇಶಕ್ಕೆ ಒಳ್ಳೆಯದಲ್ಲವೇ ಎಂದು ಯಾರಾದರೂ ಕೇಳಬಹುದು. ಇದು ಒಳ್ಳೆಯದೇ, ಆದರೆ ಭಾರತೀಯ ಬಂಡವಾಳಿಗರು ಅಲ್ಪ ಪ್ರಮಾಣದ ಸಂಸ್ಕರಣವನ್ನು ಭಾರತದಲ್ಲಿ ಮಾಡಿ ಹೆಚ್ಚಿನ ಸಂಸ್ಕರಣವನ್ನು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ/ದೇಶಗಳ ಹತ್ತಿರದಲ್ಲಿ ಮಾಡುವ ಉದ್ದೇಶದಿಂದ ಈ ಕೊಳ್ಳುವಿಕೆಯನ್ನು ನಡೆಸಿದ್ದಾರೆ ಎಂಬುದನ್ನು ನಾವು ಗಮನಿಸಬೇಕು.

ವಿದೇಶದಲ್ಲಿ ಉತ್ಪಾದನಾ ಸಾಮರ್ಥ್ಯ ಗಳನ್ನು ಕೊಳ್ಳುವುದರಿಂದ ಭಾರತೀಯರಿಗೆ ಉದ್ಯೋಗಗಳು ಮತ್ತಿತ್ತರ ಲಾಭಗಳು ಬರುವುದಿಲ್ಲ ಎಂಬುದು ವಾಸ್ತವ.

ಇದಲ್ಲದೆ ಜಾಗತಿಕವಾಗಿ ಆರ್ಥಿಕತೆ ಸ್ವಲ್ಪ ಏರು ಮುಖವಾಗಿರುವುದರಿಂದ ಸದ್ಯದ ಸ್ಥಿತಿಯಲ್ಲಿ ಎಲ್ಲವೂ ಚೆಂದವಾಗಿ ನಡೆಯುತ್ತಿದೆ. ಬಿಕ್ಕಟ್ಟಿನ ಸಂದರ್ಭಗಳು ಬಂದರೆ ನಮ್ಮ ಕಂಪನಿಗಳಿಗೆ ಇದೇ ನಿರ್ವಹಣಾ ಸಾಮರ್ಥ್ಯ ಉಳಿಯುತ್ತದೋ ಇಲ್ಲವೋ ಎಂಬುದನ್ನು ಕಾದುನೋಡ ಬೇಕಾಗಿದೆ.

ಜಗತ್ತಿನಾದ್ಯಂತ 'ಭಾರತದಲ್ಲಿ ಮಾಡಿದ ಸರಕು' ಗಳ ಹೊಳೆ ಹರಿಸುವ ಕನಸಿನತ್ತ ನಾವು ನಿಜವಾಗಿಯೂ ಹೆಚ್ಚಳ ಗಳನ್ನಿರಿಸಿದ್ದೇವೆಯೇ ಎಂದು ಕೇಳಿದರೆ ಇಲ್ಲ ಎಂದೇ ಹೇಳಬೇಕಾಗುತ್ತದೆ ಅಲ್ಲವೇ?

(ಸಿ.ಪಿ.ಚಂದ್ರಶೇಖರ್ ಅವರ ಲೇಖನವೊಂದರ ಸಂಗ್ರಹಾನುವಾದ)

ಅಮೇರಿಕಾ ನೋಡ

ಈ ನಮ್ಮ ರೈತ ಜನ ಸತ್ತರೇನಂತೆ
ವಿಶ್ವವ್ಯಾಪಾರಿಗಳು ನಡೆಸುವರು ಸಂತೆ
ಕಾವೇರಿ ಇನ್ನೇಕೆ ಬೇಡವೇ ಬೇಡ
ಬಾಯಿ ಆರಲು ಉಂಟು ಅಮೇರಿಕ ನೋಡ

- ವಿಡಂಬಾರಿ

ಚಳುವಳಿ ಮೂಲಕ ಜನತೆಯತ್ತ...

ಕೇಂದ್ರ ಸರ್ಕಾರದ ಕೆಲವು ಕ್ರಮಗಳ ಮೂಲಕ ಹಣದುಬ್ಬರ ಇಳಿತ ಕಾಣುತ್ತಿದ್ದರೂ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ರೇಷನ್ ಅಂಗಡಿಗಳ ಮೂಲಕ ಸುಲಭ ದರದಲ್ಲಿ ಸಾಮಗ್ರಿಗಳ ವಿತರಣೆಯಲ್ಲಿ ಬೆಲೆ ಏರಿಕೆ ಹಿಡಿತಕ್ಕೆ ಬರುತ್ತದೆ. ಚಿಲ್ಲರೆ ಮಾರುಕಟ್ಟೆ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಮತ್ತು ದೇಶೀಯ ಗುತ್ತೇದಾರಿ ಬಂಡವಾಳವು ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸುತ್ತಿರು ವುದರಿಂದ ಸಣ್ಣ ವ್ಯಾಪಾರಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಅಂದರೆ ಜರ್ಮನಿಯ ಮೆಟ್ರೋನವರು ಈಗಾಗಲೇ ಚಿಲ್ಲರೆ ವ್ಯಾಪಾರ ಮಾಡುತ್ತಿದ್ದಾರೆ ದೇಶೀಯ ದೈತ್ಯ ರಿಲೈಯನ್ಸ್ ಕಂಪನಿ ತರಕಾರಿ ಹಣ್ಣು ಮಾರಾಟದ ಮಳಿಗೆಗಳನ್ನು ತೆರೆದಿದೆ. ಅಮೇರಿಕಾದ ದೈತ್ಯ ಕಂಪನಿ ವಾಲ್‌ಮಾರ್ಟ್‌ನ ಹಿಂಬಾಗಿಲಿ ನಿಂದ ನುಸುಳಲು ಪ್ರಯತ್ನಿಸುತ್ತಿದೆ.

ಇನ್ನು ರೈತರ ಪರಿಸ್ಥಿತಿ ಹೇಳತೀರದು. ಕರ್ನಾಟಕದ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯ ಮುಂದುವರಿಸುತ್ತಿದ್ದರೂ ಆತ್ಮಹತ್ಯೆ ಮಾಡಿಕೊಳ್ಳಬೇಡಿ, ರಾಜೀನಾಮೆ ಕೊಡುತ್ತೇವೆ ಎಂದು 'ಬೆದರಿಕೆ' ಹಾಕಿದರೂ ರೈತರ ಆತ್ಮಹತ್ಯೆಗಳು ಎಗ್ಗಿಲ್ಲದೇ ಸಾಗುತ್ತಿವೆ.

ಬೆಂಗಳೂರಿನಲ್ಲಿ ಕೆಲಸ ಸಿಗುತ್ತದೆ ಎಂದು ಅಬ್ಬರದ ಪ್ರಚಾರ ನಡೆದರೂ ಗ್ರಾಮೀಣ ಪ್ರದೇಶದ ಯುವಜನತೆ, ನಗರದ ಸ್ಲಮ್ಮುಗಳಲ್ಲಿ ವಾಸಿಸುವ ಬಡ ಜನರಿಗೆ ಉದ್ಯೋಗ ಇಲ್ಲವಾಗಿದೆ.

ಎಲ್ಲಾ ರಾಜಕೀಯ ಪಕ್ಷಗಳು ತಾವು ಮಹಿಳಾ ಮೀಸಲಾತಿ ಪರ ಎಂದು ಭಾಷಣದಲ್ಲಿ ಘೋಷಿಸಿದರೂ, ಸಂಸತ್ತಿನಲ್ಲಿ ಮಸೂದೆ ಮಂಡನೆಯಾಗಲಿಲ್ಲ. ಹಿಂದೆ ಎನ್.ಡಿ.ಎ. ಸರ್ಕಾರ ಅನುಸರಿಸಿದ ತಂತ್ರವನ್ನೇ ಇಂದಿನ ಯುಪಿಎ ಸರ್ಕಾರ ಅನುಸರಿಸುತ್ತಿದೆ. ಕೋಮುವಾದ ಕರಾಳ ಕೈಗಳು ದೇಶದ ಉದ್ದಗಲಕ್ಕೆ ಹರಡಿವೆ. ಭಾರತ-ಅಮೇರಿಕಾ ಪರಮಾಣು ಒಪ್ಪಂದದ ಹಿನ್ನೆಲೆಯಲ್ಲಿ ಭಾರತವನ್ನು ಅಮೇರಿಕಾದ ಅಡಿಯಾಳಾಗಿಸುವ ಪ್ರಯತ್ನ ಸಾಗಿದೆ.

ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ದೇಶದ ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ನಿರುದ್ಯೋಗಿ ಯುವಜನತೆ, ಮಹಿಳೆಯರು ಚಿಲ್ಲರೆ ಮಾರಾಟಗಾರರು ಮತ್ತಿತರ ಜನರನ್ನು ಬಾಧಿಸುತ್ತಿರುವ ಸಮಸ್ಯೆಗಳನ್ನು ಕೇಂದ್ರೀಕರಿಸಿ ಎರಡು ವಾರಗಳ ಕಾಲ ಪ್ರಚಾರಾಂದೋಲನ ನಡೆಸಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಎಲ್ಲಾ ರಾಜ್ಯ ಘಟಕಗಳಿಗೆ ಕರೆ ನೀಡಿದೆ.

ಕೇಂದ್ರ ಸರ್ಕಾರದ ಕಛೇರಿಗಳ ಪಿಕೆಟಿಂಗ್: ಎಲ್ಲ ಬಡವರಿಗೂ ಬಿಪಿಎಲ್ ಕಾರ್ಡು, ಮತ್ತು ಅತಿ ಬಡವರಿಗೆ ಅಂತ್ಯೋದಯ ಕಾರ್ಡುಗಳನ್ನು ವಿತರಿಸ ಬೇಕೆಂದು ಹಾಗೂ ಇದನ್ನು ನೀಡುವಲ್ಲಿ ಆಗುತ್ತಿರುವ ವಂಚನೆಯನ್ನು ತಡೆಗಟ್ಟ ಬೇಕೆಂದು ಆಗ್ರಹಿಸಿ ಪ್ರಚಾರಾಂದೋಲನದ ನಡುವೆ ಒಂದು ದಿನ ಕೇಂದ್ರ ಸರ್ಕಾರಗಳ ಕಛೇರಿ ಪಿಕೆಟಿಂಗ್ ನಡೆಸಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಜನರ ಚಳುವಳಿಯನ್ನು ವಿಸ್ತರಿಸಲು ಸಹಾಯವಾಗುತ್ತಿದೆ.

ಅಮೇರಿಕಾದ ಕಿರಿಯ ಪಾಲುದಾರನಾಗುವ ಪರಮಾಣಿ ಒಪ್ಪಂದ ಬೇಡ

ಒಪ್ಪಂದ 123 ಎಂದೇ ನಾಮಾಂಕಿತಗೊಂಡಿರುವ ಭಾರತ ಅಮೇರಿಕಾ ಪರಮಾಣು ಒಪ್ಪಂದಕ್ಕೆ ಜುಲೈ 2005 ರಂದು ಮಾತುಕತೆ ಆರಂಭಗೊಂಡಿದ್ದರೂ ಇನ್ನೂ ಅಂತಿಮ ಹಂತ ತಲುಪಿಲ್ಲ. ಮಾತ್ರವಲ್ಲದೆ ಕಳೆದ ಡಿಸೆಂಬರ್‌ನಲ್ಲಿ ಅಮೇರಿಕಾವು 'ಹೈಡ್ ಕಾಯಿದೆ' ಯನ್ನು ಜಾರಿಗೆ ತಂದ ನಂತರ ಅದರ ಪ್ರಕಾರ ಭಾರತಕ್ಕೆ ಒಪ್ಪಿಗೆಯಾಗುವ ಒಪ್ಪಂದ ಬರಲು ಸಾಧ್ಯವೇ ಇಲ್ಲ. ಆದ್ದರಿಂದ ಭಾರತದ ಹಿತಾಸಕ್ತಿಗೆ ಮಾರಕವಾಗುವ ಮತ್ತು ವಿದೇಶಾಂಗ ನೀತಿಗೆ ಧಕ್ಕೆ ಬರುವ ರೀತಿಯಲ್ಲಿ ಯಾವುದೇ ಅಂಶಗಳನ್ನು ಪರಮಾಣು ಒಪ್ಪಂದದಲ್ಲಿ ಒಪ್ಪಿಕೊಳ್ಳ ಬಾರದು ಎಂದು ಇತ್ತೀಚಿಗೆ ಜರುಗಿದ ಸಿಪಿಐ(ಎಂ) ಕೇಂದ್ರ ಸಮಿತಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಇಂದು ಅಮೇರಿಕಾ ಹೇಳುತ್ತಿರುವ ರೀತಿಯಲ್ಲಿ ಒಪ್ಪಂದವಾದಲ್ಲಿ ಅದರ ಕಿರಿಯ ಪಾಲುದಾರನಾಗಿ ಅದು ಹೇಳಿದಂತೆ ಕುಣಿಯಬೇಕಾಗುತ್ತದೆ. ಅಲಿಪ್ತ ಚಳುವಳಿಯಲ್ಲಿ ಬಹುಮುಖ್ಯ ಪಾತ್ರ ವಹಿಸಿದ ಭಾರತದ ತಟಸ್ಥ ಧೋರಣೆಗೆ ಇದು ಮಾರಕವಾಗುತ್ತದೆ.

ಬಾಂಗ್ಲಾದೇಶ : ಬಾಂಗ್ಲಾದೇಶದ ಬೆಳವಣಿಗೆ ಕಳವಳಕಾರಿಯಾಗಿದೆ. ಪ್ರಜಾಪ್ರಭುತ್ವ ಮಾರಕವಾಗಿದೆ. ಮಿಲಿಟರಿ ಬೆಂಬಲದೊಂದಿಗೆ ಸರ್ವಾಧಿಕಾರದತ್ತ ಸಾಗುತ್ತಿದೆ. ಉಸ್ತುವಾರಿ ಸರ್ಕಾರವು ಮಿಲಿಟರಿ ಹಿಡಿತದಲ್ಲಿದ್ದು, ಸಂಸತ್ತಿನ ಚುನಾವಣೆ ಸದ್ಯದಲ್ಲಿ ನಡೆಯುವ ಸಾಧ್ಯತೆಗಳು ಕಡಿಮೆಯಾಗಿದೆ. ಕಾರ್ಮಿಕರ ಸಂಘಟಿತ ಹಕ್ಕುಗಳಿಗೆ ಧಕ್ಕೆಯಾಗುತ್ತಿದ್ದು ರಾಜಕೀಯ ಪಕ್ಷಗಳ ಕಾರ್ಯ ನಿರ್ವಹಣೆಗೆ ತೊಡಕುಂಟಾಗಿದೆ.

ಹೊಸ ಚುನಾವಣಾ ಪಟ್ಟಿಯನ್ನು ಸಿದ್ದಪಡಿಸುವ ಜವಾಬ್ದಾರಿಯನ್ನು ಸೈನ್ಯಕ್ಕೆ ನೀಡಲಾಗಿದ್ದು, ಸೇನಾಧಿಕಾರಿಗಳ ಕಛೇರಿಗಳಿಗೆ ಹೋಗಿ ಮತದಾರರು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕಾಗಿದೆ. ಇದು ಜನ ಸಾಮಾನ್ಯರನ್ನು ಚುನಾವಣಾ ಪ್ರಕ್ರಿಯೆಯಿಂದ ದೂರವಿಡುವ ಸಂಚು.

ಪಶ್ಚಿಮ ಭಾರತದ ನೆರೆಯ ರಾಷ್ಟ್ರ ಪಾಕಿಸ್ತಾನದಲ್ಲಿ ಮಿಲಿಟರಿ ಸರ್ವಾಧಿಕಾರ ಮುಂದುವರಿಯುತ್ತಿದ್ದು, ಮೂಲಭೂತವಾದಿ ಶಕ್ತಿಗಳು ಬೆಳೆಯುತ್ತಿವೆ. ಪೂರ್ವದ ಬಾಂಗ್ಲಾದೇಶದಲ್ಲೂ ಇಂತಹುದೇ ಪರಿಸ್ಥಿತಿ ಬೆಳೆದರೆ, ಭಾರತದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಬೆಳವಣಿಗೆಗಳಿಗೆ ತಡೆಯುಂಟಾಗುತ್ತದೆ.

ಬಾಂಗ್ಲಾದೇಶದಲ್ಲಿ ರಾಜಕೀಯ ಚಟುವಟಿಕೆಗಳನ್ನು ನಡೆಸಲು, ಪ್ರಜಾಸತ್ತಾತ್ಮಕಗಳನ್ನು ಪುನರ್ ಸ್ಥಾಪಿಸಲು ಮತ್ತು ಕೂಡಲೇ ಸಂಸತ್ತಿನ ಚುನಾವಣೆ ನಡೆಸಬೇಕೆನ್ನುವ ಒತ್ತಾಯಕ್ಕೆ ಸಿಪಿಐ(ಎಂ) ತನ್ನ ಬೆಂಬಲವನ್ನು ವ್ಯಕ್ತಪಡಿಸಿದೆ.

ಸಿಪಿಐ(ಎಂ) ಮಹಾ ಅಧಿವೇಶನ 2008ರ ಮಾರ್ಚ್‌ನಲ್ಲಿ

ಮೂರು ವರ್ಷಗಳಿಗೊಮ್ಮೆ ನಡೆಯುವ ಸಿಪಿಐ(ಎಂ)ನ ಅಖಿಲ ಭಾರತ ಮಟ್ಟದ ಮಹಾಧಿವೇಶನವು 2008ರ ಮಾರ್ಚ್ ತಿಂಗಳಲ್ಲಿ ತಮಿಳುನಾಡಿನ ಕೊಯಂಬತ್ತೂರಿನಲ್ಲಿ ನಡೆಯಲಿದೆ.

ಇದಕ್ಕೂ ಮೊದಲು ಶಾಖೆ, ಪ್ರದೇಶ, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಮ್ಮೇಳಗಳು ನಡೆಯಲಿದ್ದು ಅವಧಿಯನ್ನು ನಿಗಧಿಗೊಳಿಸಲಾಗಿದೆ. ಒಟ್ಟಾರೆಯಾಗಿ ಫೆಬ್ರವರಿ 2008ರ ಒಳಗಡೆಯಲ್ಲಿ ಎಲ್ಲಾ ರಾಜ್ಯಗಳ ಸಮ್ಮೇಳನಗಳು ಮುಗಿಯಲಿವೆ.

ದೇಶದಲ್ಲಿರುವ ಯಾವುದೇ ರಾಜಕೀಯ ಪಕ್ಷಗಳು ಇಷ್ಟೊಂದು ಪ್ರಜಾಸತ್ತಾತ್ಮಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದನ್ನು ಮತ್ತೊಮ್ಮೆ ಗಮನಿಸಬೇಕಾಗಿದೆ.

ಪ್ಯಾಲಿಸ್ತೇನ್ ನೆಲದಲ್ಲಿ...

ಪುಟ 13 ರಿಂದ

ಬೀಳುವ ದೃಶ್ಯ ಇಲ್ಲಿ ಸಾಮಾನ್ಯ ಸಂಗತಿ. ಆದರೆ ಪ್ಯಾಲಿಸ್ತೇನಿಯರ ಈ ಪ್ರತಿಭಟನೆಯನ್ನು ಇಸ್ರೇಲ್ ಅತ್ಯಂತ ಕ್ರೂರವಾಗಿ ಹತ್ತಿಕ್ಕುತ್ತಿದೆ. ಅಲ್ಲದೆ, ಪ್ರತಿನಿತ್ಯ ಅವರ ಮೇಲೆ ದೌರ್ಜನ್ಯ, ದಬ್ಬಾಳಿಕೆಯನ್ನು ಹರಿಬಿಟ್ಟು ಸಾವಿರಾರು ಜನರನ್ನು ಜೈಲಿಗೆ ಕಳಿಸುತ್ತಿದೆ.

ಇಸ್ರೇಲ್ ಶಾಂತಿ ಮುಖಂಡ ರೊಂದಿಗೆ ಚರ್ಚೆ :

ಜೂನ್ 2ರ ಸಂಜೆ ನಮ್ಮನ್ನೆಲ್ಲಾ ಇಸ್ರೇಲ್, ಪ್ಯಾಲಿಸ್ತೇನ್‌ನಲ್ಲಿ ಶಾಶ್ವತ ಶಾಂತಿ ಸ್ಥಾಪನೆಗಾಗಿ ಕೆಲಸ ಮಾಡುತ್ತಿರುವ ಇಸ್ರೇಲ್‌ನ ಶಾಂತಿ ಸಂಘಟನೆ ಕಾರ್ಯಕರ್ತರ ಬಳಿ ಚರ್ಚೆಗಾಗಿ ಕರೆದೊಯ್ಯಲಾಯಿತು. ನಾವು ಅಲ್ಲಿ ಹಲವು ಮಹಿಳಾ ಸಂಘಟನೆ ಕಾರ್ಯಕರ್ತರೊಂದಿಗೆ ಚರ್ಚಿಸಿದೆವು. ಈ ಸಂಘಟನೆಗಳು ಇಸ್ರೇಲ್, ಪ್ಯಾಲಿಸ್ತೇನಿಯರ ವಿರುದ್ಧ ನಡೆಸುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಲು ತಮ್ಮದೆ ರೀತಿಯಲ್ಲಿ ಕ್ರಿಯಾಶೀಲವಾಗಿವೆ. ಚೆಕ್ ಪಾಯಿಂಟ್‌ಗಳ ಬಳಿ ಆಗುತ್ತಿರುವ ಕಿರುಕುಳ ತಪ್ಪಿಸಲು ಅವು ನ್ಯಾಯ ವೀಕ್ಷಣ ದಳಗಳನ್ನು ರಚಿಸಿವೆ. ಅವರಿಂದ ನಮಗೆ ತಿಳಿದ ಸಂಗತಿಯೆಂದರೆ ಇದುವರೆಗೂ 1100ಕ್ಕೂ ಅಧಿಕ ಅಮಾಯಕ ಜನರನ್ನು ಬಂಧಿಸಿ ಜೈಲಿನಲ್ಲಿಡಲಾಗಿದೆ. ಅವರ ಬಂಧನಕ್ಕೆ ಕಾರಣವೇನೆಂಬುದಕ್ಕೆ ಉತ್ತರ ಅಲ್ಲಿನ ನ್ಯಾಯಾಧೀಶರ ಬಳಿಯೂ ಇಲ್ಲವಂತೆ. ಇಂತಹ ಜನರಿಗೆ ನ್ಯಾಯ ಒದಗಿಸುವ ಕೆಲಸಕ್ಕೂ ಆ ಸಂಘಟನೆಗಳು ಸಕ್ರಿಯವಾಗಿವೆ. ಅಲ್ಲದೆ, ಶಿಕ್ಷಣದ ಖಾಸಗೀಕರಣದ ವಿರುದ್ಧ ವಿದ್ಯಾರ್ಥಿಗಳೊಂದಿಗೂ ಇವರು ಕೈ ಜೋಡಿಸಿದ್ದಾರೆ.

ಕಮ್ಯೂನಿಸ್ಟ್ ಪಕ್ಷದ ಅಧಿವೇಶನದಲ್ಲಿ :

ಇಸ್ರೇಲ್ ಕಮ್ಯೂನಿಸ್ಟ್ ಪಕ್ಷದ 25ನೇ ಮಹಾಧಿವೇಶನ ಮೇ 31ರ ಸಂಜೆ ಹೈಫಾ ನಗರದಲ್ಲಿ ಆರಂಭಗೊಂಡಿತು. ಹೈಫಾ ಮೇಡಿಟೇರಿಯನ್



ದಡದಲ್ಲಿರುವ ಪುರಾತನ ಬಂದರು ಪ್ರದೇಶ. ಬ್ರಿಟಿಷರ ಕಾಲದಿಂದಲೂ ಈ ಐತಿಹಾಸಿಕ ನಗರ ಕಾರ್ಮಿಕ ಚಳುವಳಿಯ ಕೇಂದ್ರವಾಗಿದೆ. ಇಲ್ಲಿ ಕಮ್ಯೂನಿಸ್ಟ್ ಪಕ್ಷವೂ ಜ್ಯೂ, ಕ್ರಿಶ್ಚಿಯನ್ ಮತ್ತು ಮಹಮದೀಯರು ಎನ್ನದೆ ಎಲ್ಲಾ ಜನವಿಭಾಗಗಳನ್ನು ಸಂಘಟಿಸಿದೆ. ಅವರೆಲ್ಲರೂ ಪ್ಯಾಲಿಸ್ತೇನಿಯರೆ ಆಗಿದ್ದಾರೆ. ಆದರೆ ಯಾವಾಗ ಯೆಹೂದಿಗಳ ಪ್ರತ್ಯೇಕ ರಾಷ್ಟ್ರ ಚಳುವಳಿ ಆರಂಭಗೊಂಡಿತೋ ಅಲ್ಲಿಂದ ಇಲ್ಲಿ ಜನಾಂಗೀಯ ಬೀಜಗಳು ಮೊಳೆಯೊಡೆದವು. ಹೈಫಾ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವ ನಗರ. ಇದು ಇಸ್ರೇಲ್ ಲೇಬರ್ ಪಕ್ಷಕ್ಕೆ ಭದ್ರವಾದ ತಳಪಾಯ ಹಾಕಿದ ನಗರವೂ ಹೌದು. ಹಾಗಾಗಿ ಹೈಫಾ ನಗರ ಇಸ್ರೇಲ್‌ನ ಎಡಪಂಥೀಯ ಮುಖವೆನ್ನಬಹುದು. ಆಕಸ್ಮಿಕವೆಂಬಂತೆ ಈ ನಗರ ಮೂರು ಧರ್ಮಗಳ ನೆಲೆವೀಡು ಮಾತ್ರವಲ್ಲ, ಬಾಹಾಯ್ ಪಂಥದ ಆಕರ್ಷಣೆಯಾದ ಮೌಂಟ್ ಕಾರ್ಮೆಲ್ ಇರುವ ತಾಣವೂ ಹೌದು.

ಕಮ್ಯೂನಿಸ್ಟ್ ಪಕ್ಷದ 25ನೇ ಕಾರ್ಯಕಾರಿ ಅಧಿವೇಶನವು ಜೂನ್ 1ರಂದು ನಜಾರೆತ್ ನಗರದಲ್ಲಿ ನಡೆಯಿತು. ಆದರೆ ನಾವು ಇಲ್ಲಿಗೆ ಭೇಟಿ ನೀಡಿದಾಗ ಸರ್ಕಾರ ಇದರ ಬಗ್ಗೆ ತಾರತಮ್ಯ ತೋರಿರುವುದು ಸ್ಪಷ್ಟವಾಗಿ ಕಂಡುಬಂತು. ಇಸ್ರೇಲ್ ಸರ್ಕಾರದ ಗಮನ ಕೇವಲ ಸರ್ಕಾರಿ ಕಛೇರಿಗಳಿರುವ ನಜಾರೆತ್‌ನ ಹೊಸಪಟ್ಟಣದತ್ತ ಮಾತ್ರ ಕೇಂದ್ರೀಕರಿಸಿದೆ. ಈ ನಗರವೂ 1976ರಿಂದಲೂ ಕಮ್ಯೂನಿಸ್ಟ್ ಪಕ್ಷದ ಆಡಳಿತವಿರುವ ನಗರ. 8 ಜನರ ಸದಸ್ಯರು ಇಲ್ಲಿನ ಮಹಾನಗರ ಪಾಲಿಕೆಗೆ ಆಯ್ಕೆಯಾಗಿ ವರ್ಷಕ್ಕೊಬ್ಬರಂತೆ ಮೇಯರ್‌ಗಳಾಗುತ್ತಿದ್ದಾರೆ. ಇಲ್ಲಿನ ಪಕ್ಷದ ಕೇಂದ್ರ ಕಛೇರಿ ಇರುವುದು ಇಲ್ಲಿರುವ ಐತಿಹಾಸಿಕ ಸ್ಥಳವಾದ ಮೇರಿ ವೆಲ್ ಬಳಿಯೇ. ಇಸ್ರೇಲ್ ಸೇನಾಪಡೆಗಳು ಈ ಐತಿಹಾಸಿಕ ಸ್ಥಳಕ್ಕೂ ಅಪಾಯವನ್ನು ಮಾಡಿವೆ.

ಒಂದು ವಾರದ ಇಸ್ರೇಲ್, ಪ್ಯಾಲಿಸ್ತೇನ್ ಈ ಪ್ರವಾಸದ ನಮಗೆ ಜಾಗತೀಕವಾಗಿ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಬರ್ಭರತೆಯ ಭೀಕರ ದರ್ಶನ ಮಾಡಿಸಿತು. 1918ರಲ್ಲಿ ಬ್ರಿಟನ್‌ನಿಂದ ಆರಂಭಗೊಂಡ ಈ ದಾಳಿ ಈಗ ಅಮೇರಿಕನ್ ಸಾಮ್ರಾಜ್ಯಶಾಹಿ ನೇತೃತ್ವದಲ್ಲಿ ಮುಂದುವರೆದಿದೆ. ಜೆರುಸಲೇಂ ಮೇಲಿನ ಇಸ್ರೇಲ್‌ನ ಈ ಆಕ್ರಮಣವೂ ಎಲ್ಲಾ ಅಂತರಾಷ್ಟ್ರೀಯ ಕಾನೂನುಗಳ ಸ್ಪಷ್ಟ ಉಲ್ಲಂಘನೆ. 1948ರ ವಿಶ್ವಸಂಸ್ಥೆಯ ನಿರ್ಣಯದಂತೆ ಜೇರುಸಲೇಂ ಆಡಳಿತ ಅಂ.ರಾ.ಸಮುದಾಯದ ವ್ಯಾಪ್ತಿಗೆ ಸೇರಬೇಕು. ಆದರೆ ಅದನ್ನು ಇಸ್ರೇಲ್ ಉಲ್ಲಂಘಿಸಿದೆ ಮಾತ್ರವಲ್ಲ ತನ್ನ ಆಕ್ರಮಣವನ್ನು ಪಶ್ಚಿಮ ದಂಡೆಯವರೆಗೂ ವಿಸ್ತರಿಸಿದೆ. ಸಾಲದೆಂಬಂತೆ ಅನಧಿಕೃತವಾಗಿ ಪ್ರತ್ಯೇಕ ಗೋಡೆಯನ್ನು ನಿರ್ಮಿಸಿದೆ. ಅಲ್ಲದೆ ಪ್ಯಾಲಿಸ್ತೇನ್ ನಾಗರಿಕರನ್ನು ಎಲ್ಲಾ ರೀತಿಯ ಸೌಲಭ್ಯಗಳಿಂದ ವಂಚಿಸಿದೆ.


ಕೊನೆ ಮಾತು

ಪ್ಯಾಲಿಸ್ತೇನ್‌ನ್ನು ಜ್ಯೂ, ಕ್ರಿಶ್ಚಿಯನ್ ಹಾಗೂ ಯೆಹೂದಿಗಳ ಪವಿತ್ರಭೂಮಿ ಎನ್ನಲಾಗುತ್ತಿದೆ. ಆದರೆ ಇಂತಹ ಪವಿತ್ರ ದೇಶ, ಜಗತ್ತಿನಲ್ಲಿ ಅತ್ಯಂತ ಬರ್ಬರತೆಗೆ ಒಳಗಾಗಿರುವ ಯಾತನಮಯ ನಾಡಾಗಿದೆ. ಕ್ರಿಸ್ತನ್ನು ಇವರನ್ನೆಲ್ಲಾ ಮೊಂದೊಂದು ದಿನ ದಂಡಿಸುತ್ತಾರೆ ಎನ್ನಲಾಗುತ್ತಿದೆ. ಆದರೆ ಇಲ್ಲಿನ ಜನರು ಮಾತ್ರ ಪ್ರತಿನಿತ್ಯ ದಂಡನೆಗೆ ಒಳಗಾಗುತ್ತಲೇ ಇದ್ದಾರೆ.

ಇಲ್ಲಿ ನಡೆಯುವ ಈ ನಿತ್ಯ ದಾಳಿಗಳಿಗೆ ಅಮೇರಿಕನ್ ಸಾಮ್ರಾಜ್ಯಶಾಹಿ ನೀರೆರೆಯುತ್ತಿದೆ. ಆದರೆ ಪ್ಯಾಲಿಸ್ತೇನ್, ಇಸ್ರೇಲ್ ನಡುವೆ ಶಾಶ್ವತ ಶಾಂತಿ ಸ್ಥಾಪಿಸಲು ಜಗತ್ತಿನ ಶಾಂತಿಪ್ರಿಯ ಜನರು ತಮ್ಮ ಪ್ರಯತ್ನವನ್ನು ಮುಂದುವರೆಸಿದ್ದಾರೆ. ಇದರಲ್ಲಿ ಸ್ವತಹ ಇಸ್ರೇಲ್, ಪ್ಯಾಲಿಸ್ತೇನ್ ನಾಗರಿಕರು ಕೂಡ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಯಾಕೆಂದರೆ ಅಲ್ಲಿ ಶಾಂತಿ ನೆಲಸದ ಹೊರತು ನೆಮ್ಮದಿ ಬದುಕು ಎಂಬುದು ಕನಸಾಗೆ ಉಳಿಯುತ್ತದೆ.



ಸತ್ವವಿಲ್ಲದ 'ಸತ್ಯವಾನ್ ಸಾವಿತ್ರಿ'



ನಾಯಕ ನಟ ರಮೇಶ್ ಚಿತ್ರ ನಿರ್ದೇಶನಕ್ಕೆ ಕೈ ಹಾಕಿ ಮೊದಲ ಪ್ರಯತ್ನದಲ್ಲೇ ಅಲ್ಪಸ್ವಲ್ಪ ಯಶಸ್ಸು ಗಳಿಸಿದ್ದರು. ಅದೇ ಹುಮ್ಮಸ್ಸಿನ ಇನ್ನೊಂದು ಚಿತ್ರ ನಿರ್ದೇಶಿಸಲು ಹೊರಟ ರಮೇಶ್ ಈಗ ಮುಗ್ಗರಿಸಿದ್ದಾರೆ. ಅವರ ಮೊದಲ ನಿರ್ದೇಶನದ 'ರಾಮ ಶ್ಯಾಮ ಭಾಮ' ಸಾಕಷ್ಟು ಯಶಸ್ವಿಯಾಗಿತ್ತು. ರಮೇಶ್ - ಕಮಲ್‌ಹಾಸನ್ ಕಾಂಬಿನೇಷನ್ ವರ್ಕ್‌ಔಟ್ ಆಗಿತ್ತು. ಅವರಿಬ್ಬರ ನಟನೆ ಮತ್ತು ನವಿರಾದ ಹಾಸ್ಯದಿಂದಾಗಿ ತಮಿಳು ಚಿತ್ರವೊಂದರ ರಿಮೇಕ್ ಆಗಿದ್ದ ಆ ಚಿತ್ರ ಗೆದ್ದಿದ್ದು, ಅದರಲ್ಲಿ ರಮೇಶ್ ಅವರ ಹೆಚ್ಚುಗಾರಿಕೆಯೇನೂ ಇರಲಿಲ್ಲ. ರಮೇಶ್ ಎಂದರೆ ಸದಭಿರುಚಿಯ ಚಿತ್ರ ಎನ್ನುವ ಹೆಸರಿದ್ದರೂ ಅವರ ನಿರ್ದೇಶನದ ತಾಕತ್ತು ತಿಳಿಯಬೇಕಾದರೆ ಸ್ವಂತ ಕಥೆಯ ಚಿತ್ರವೊಂದನ್ನು ಅವರು ನಿರ್ದೇಶಿಸಿದ್ದರೆ ಚೆನ್ನಾಗಿತ್ತು. ಆದರೆ ಈ ಬಾರಿಯೂ ಅವರು ತಮಿಳು ಚಿತ್ರವೊಂದರ ರಿಮೇಕ್‌ಗೆ ಕೈ ಹಾಕಿ - ಎಡವಿದ್ದಾರೆ ರಮೇಶ್.

ಕಥೆಯಲ್ಲಿ ಸತ್ವವೇ ಇಲ್ಲದ ಚಿತ್ರ 'ಸತ್ಯವಾನ್ ಸಾವಿತ್ರಿ'. ಹಾಸ್ಯಕ್ಕಾಗಿಯೇ ಜೋಡಿಸಿದ ದೃಶ್ಯಗಳು ಒಮ್ಮೊಮ್ಮೆ ನಗು ಬರಿಸಿದರೂ, ಒಟ್ಟಾರೆ ಕಥೆ ಹಾದಿತಪ್ಪಿದೆ. ಇಂತಹ ಕಥೆ ರಮೇಶ್‌ಗೆ ಆಪ್ತವಾದರೂ ನೋಡುಗರಿಗೆ ಸಹ್ಯವಾಗುವುದಿಲ್ಲ. ಹಿಂದಿನ ಅವರ ಸಾಕಷ್ಟು ಚಿತ್ರಗಳಲ್ಲಿರುವಂತೆ ಈ ಚಿತ್ರದಲ್ಲಿಯೂ ದಂತವೈದ್ಯ ಸತ್ಯವಾನ್(ರಮೇಶ್)ಗೆ ಹುಡುಗೀಯರ ಹಿಂದೆ ಬೀಳೋ ಚಾಳಿ. ('ಬಿಸಿಬಿಸಿ', 'ರಾಮಶ್ಯಾಮಭಾಮ' ಚಿತ್ರಗಳದ್ದೂ ಹೆಚ್ಚುಕಮ್ಮಿ ಇದೇ ಕಥೆ) ಚೆನ್ನಾಗಿ ಸುತ್ತಾಡಿದ ಮೇಲೆ ಅವರು ಬೇಸರವಾದರೆ, ತನಗೆ ಮದುವೆಯಾಗಿದೆಯೆಂದು, ಮೂವರು ಮಕ್ಕಳೆಂದು ಸುಳ್ಳು ಹೇಳಿ ಇನ್ನೊಂದು ಹುಡುಗಿಯ ಹಿಂದೆ ಬೀಳೋದು ಅವನ ನಿತ್ಯ ಕಾಯಕ. ಹಾಗೆಂದ ಮಾತ್ರಕ್ಕೆ ಅವನು ಕೆಡುಕನೇನಲ್ಲ, ಬಲೀ ಜಾಲಿ ಸುತ್ತಾಟದಲ್ಲೇ ಅವನಿಗೆ ಖುಷಿ! ಇವನ ಖಯಾಲಿ ನೋಡಿ ಬೇಸರಗೊಂಡು ತಾತ, ಇಂತಿಷ್ಟು ದಿನದೊಳಗೆ ಮದುವೆಯಾಗದಿದ್ದರೆ ತನ್ನ ಆಸ್ತಿಯನ್ನು ದಾನ ಮಾಡುವುದಾಗಿ ಬೆದರಿಸುತ್ತಾನೆ. ತಾತನ ಒತ್ತಾಯಕ್ಕೆ ಮಣಿಯುವ ನಾಯಕ ಸತ್ಯವಾನ ಆ ಸಂದರ್ಭದಲ್ಲಿ ಸುತ್ತಾಡುತ್ತಿದ್ದ ಹುಡುಗಿಯನ್ನೇ (ಜೆನ್ನಿಫರ್) ಮದುವೆಯಾಗಲು ನಿರ್ಧರಿಸುತ್ತಾನೆ. ಆದರೆ ಆಕೆಗೆ ತಾನು ಮದುವೆಯಾಗಿ ಮೂರು ಮಕ್ಕಳಿರುವುದಾಗಿ ಹೇಳಿಬಿಟ್ಟಿರುತ್ತಾನೆ. ಆಕೆ ಆತನ ಹೆಂಡತಿ, ಮಕ್ಕಳನ್ನು ಭೇಟಿಯಾಗುವ ಇಚ್ಛೆ ವ್ಯಕ್ತಪಡಿಸುತ್ತಾಳೆ. ಆ ಕಾರಣಕ್ಕಾಗಿ ತನ್ನ ಪಿ.ಎ. (ಡೈಸಿ ಬೋಪಣ್ಣ)ಳನ್ನೇ ತನ್ನ ಹೆಂಡತಿಯೆಂದು ಪರಿಚಯಿಸುತ್ತಾನೆ. ಆಕೆಗೂ ತನಗೂ ಸರಿಹೊಂದುತ್ತಿಲ್ಲವೆಂದು ನಂಬಿಸಲು ಯತ್ನಿಸುತ್ತಾನೆ. ಚಿತ್ರ ಪೂರ್ತಿ ಇದರ ಸುತ್ತವೇ ಸುತ್ತುತ್ತದೆ. ಸುಳ್ಳಿಗೆ ಸುಳ್ಳು, ಮತ್ತೊಂದು ಸುಳ್ಳು ಹೀಗೆ ಅನೇಕ ಪಾತ್ರಗಳು ಅಲ್ಲೇ ಗಿರಕಿ ಹೊಡೆಯುತ್ತವೆ. ಮೋಹನ್, ಅನಿರುದ್ಧ್, ಸುಂದರ್‌ರಾಜ್, ಕೋಮಲ್ ಮುಂತಾದರು ಕಥೆಗೆ ಪೋಷಕರಾಗುತ್ತಾರೆ. ಇದ್ದುದ್ದರಲ್ಲಿ ಕೋಮಲ್ ಎರಡು ಮೂರೇ ದೃಶ್ಯದಲ್ಲಿದ್ದರೂ ಹೆಚ್ಚು ನಗಿಸಿ, ಗಮನ ಸೆಳೆಯುತ್ತಾರೆ.

ಈಗಾಗಲೇ ಗಂಡ, ಹೆಂಡತಿ ಮತ್ತು ಅವಳು ಎಂಬಂತಹ ಅನೇಕ ಚಿತ್ರಗಳು ಬಂದುಹೋಗಿವೆ. ಸದಭಿರುಚಿಯ ರಮೇಶ್ ಕೇವಲ ಇಂತಹದ್ದನ್ನೇ ರಿಮೇಕ್ ಮಾಡುವ ಅಗತ್ಯವಿರಲಿಲ್ಲ. ಈ ಚಿತ್ರದ ಗೆಲುವು ಕನಸಿನ ಮಾತಾಗಿರುವಾಗ ರಮೇಶ್ ಅಧೀರರಾಗದೆ ಸ್ವಂತದ್ದೇ ಹಾಸ್ಯಭರಿತ ಚಿತ್ರದತ್ತ ಗಮನಿಸುವುದು ಒಳ್ಳೆಯದು. ನಮ್ಮಲ್ಲೀಗ ಹಾಸ್ಯ ಬರಹಗಾರರಿಗೇನೂ ಕೊರತೆಯಿಲ್ಲ.

○




ರಶ್ಯನ್ ಕ್ರಾಂತಿ ದಿನಗಳ ಕಣ್ಣಾರೆಯ ಚಿತ್ರಣ

'ಜಗತ್ತನ್ನು ತಲ್ಲಣಗೊಳಿಸಿದ ಹತ್ತುದಿನ' ಪ್ರಪಂಚದ ಮೊದಲ ಸಮಾಜವಾದಿ ರಾಷ್ಟ್ರವಾಗಿ ತಲೆಯೆತ್ತಿದ ರಷ್ಯನ್ ಕ್ರಾಂತಿಯ ದಿನಗಳ ತೀವ್ರ ಹೊಯ್ದಾಟದ, ಉದ್ವೇಗ ಪೂರ್ಣ ಸನ್ನಿವೇಶದ, ಬಿರುಗಾಳಿಯಂತೆ ಬೀಸಿದ ಕ್ರಾಂತಿಯ ಆ ಮಧ್ಯೆ ಮೂಡಿ ಬಂದ ಶ್ರಮ ಜೀವಿ ರಾಷ್ಟ್ರದ ಕಣ್ಣಾರೆಯ ಚಿತ್ರಣ. ಇದರ ಲೇಖಕ ಅಮೇರಿಕಾದ ಸಮಾಜವಾದಿ ಲೇಖಕ ಹಾಗೂ ಕ್ರಾಂತಿಕಾರಕ ಹೋರಾಟಗಾರ ಜಾನ್‌ರೀಡ್.

ಜಾನ್‌ರೀಡ್ ರಷ್ಯನ್ ಕ್ರಾಂತಿಯ ಸಂದರ್ಭದಲ್ಲಿ ರಷ್ಯಾದಲ್ಲೇ ಉಳಿದು ಅಲ್ಲಿಯ ಪ್ರತಿಯೊಂದು ಚಟುವಟಿಕೆಯ ಬೆನ್ನು ಹತ್ತಿ ಅಲ್ಲಿಯ ತಲ್ಲಣದ ಉಸಿರನ್ನು ಪ್ರತ್ಯಕ್ಷ ಕಂಡು ಸಂಗ್ರಹಿಸಿ, ಅಷ್ಟೇ ತೀವ್ರವಾದ ಆತ್ಮೀಯತೆಯಿಂದ ಚಿತ್ರಿಸಿದ ಪುಸ್ತಕ ಇದು. ಇಂದು ರಷ್ಯಾವನ್ನು ನೋಡುವವರಿಗೆ, ಓದಿ ತಿಳಿದು ಕೊಳ್ಳುವವರಿಗೆ 90 ವರ್ಷದ ಹಿಂದೆ ರಷ್ಯಾದಲ್ಲಿ ನಡೆದ ಕ್ರಾಂತಿ, ಆ ರೈತ ಕಾರ್ಮಿಕ ಹೋರಾಟ, ಅವರ ಮುಂದಾಳುಗಳ ಚಾಕಚಕ್ಯತೆ ಅಲ್ಲಿಯ ಅಂತರ್ ಯುದ್ಧ ಒಂದು ದಂತಕತೆಯಾಗಿ ತೋರಬಹುದೇ ಹೊರತು ಆ ಕ್ಷಣದ ತಲ್ಲಣದ ಅರಿವು ಬರಲಿಕ್ಕಿಲ್ಲ. ಆದರೆ ಜಾನ್ ರೀಡರ್ ಈ ಪುಸ್ತಕ ಅಂಥ ತಲ್ಲಣ ಕ್ಷಣದ ಜೀವಂತ ಚಿತ್ರವನ್ನು ಕೊಡುತ್ತದೆ.

600 ಪುಟದ ಈ ಬೃಹತ್ ಹೊತ್ತಿಗೆಯಲ್ಲಿ ಆ ಕಾಲದ ಪ್ರಕಟಣೆ, ಭಿತ್ತಿ ಪತ್ರ, ಪತ್ರಿಕಾ ಹೇಳಿಕೆ, ಬರಹ, ನೇತಾರರ ಮಾತುಗಳು, ಪ್ರತಿ ಕ್ರಾಂತಿಕಾರರ ಪ್ರಕಟಣೆ, ಬೊಲ್ಶೆವಿಕ್ ಪಕ್ಷದ ಪ್ರಕಟಣೆಯನ್ನೊಳಗೊಂಡ ಅನುಭವದ ಭಾಗವೂ ಪುಸ್ತಕದ ಮುಖ್ಯಭಾಗ ವಾಗಿಯೇ ಇದೆ. ಪುಸ್ತಕಕ್ಕೆ ಒಂದು ಹಿನ್ನುಡಿಯೂ, ಲೇಖಕ ಜಾನ್ ರೀಡ್ ಬಗ್ಗೆ ಒಂದು ಪರಿಚಯವೂ ಇದ್ದುದ್ದು ಉಪಯುಕ್ತ ಅಂಶವೇ ಆಗಿದೆ. ರೈತ ಕಾರ್ಮಿಕ ಸೈನಿಕ ಒಗ್ಗಟ್ಟಿನ ಹೋರಾಟ ಸತ್ಯ ಚಿತ್ರಣ ಇದಾಗಿದ್ದು ಕಾರ್ಮಿಕರಿಗೆ ಇದು ಮುಖ್ಯ ವಾಗಿದೆ ಎಂದು ಲೆನಿನ್‌ರ ಶಿಫಾರಸ್ಸು ಕೂಡ ಇದೆ.





ರಷ್ಯಾದಲ್ಲಿ ಕ್ರಾಂತಿಯಲ್ಲಿ ಭಾಗವಹಿಸಿದ್ದ ಅನೇಕ ಪಕ್ಷಗಳು, ರಷ್ಯಾದ ಅಧಿಕಾರ ಹಸ್ತಾಂತರ ಆಗುವುದನ್ನು ಆಗಿನ ಆಸ್ತಿವಂತರು (ಬೂರ್ಜ್ವಾಗಳು) ಕೂಡ ಬಯಸಿದ್ದರು. ಆದರೆ ಅವರು ಜನತಾ ಕ್ರಾಂತಿಯನ್ನು ಬಯಸಿರಲಿಲ್ಲ. ಅಧಿಕಾರ ಹಸ್ತಾಂತರ ತಮ್ಮೊಡನೆ ಆಗಬೇಕೆಂದು ಬಯಸಿದ್ದರು. ಕ್ರಾಂತಿಯಲ್ಲಿ ಭಾಗವಹಿಸಿದ ಬೇರೆ ಬೇರೆ ಪಕ್ಷಗಳು ಸಹ ಅದನ್ನು ಕಮ್ಯುನಿಸಂ ಆಗಲು ಬಯಸಿರಲಿಲ್ಲ. ಒಂದು ರೀತಿಯ ಅರೆ ಬೂರ್ಜ್ವಾ ಸ್ವಭಾವದಿಂದ ಆಳಲ್ಪಡುವ ಕ್ರಾಂತಿಕಾರಿ ಪಕ್ಷಗಳು ಸಂಪೂರ್ಣವಾಗಿ ಅಧಿಕಾರವನ್ನು ರೈತ ಕಾರ್ಮಿಕರ ಕಡೆ ಒಯ್ಯಲು ಬಯಸಿರಲಿಲ್ಲ. ಅಥವಾ ಅದು ಸಾಧ್ಯ ಎಂದು ಗ್ರಹಿಸಿರಲಿಲ್ಲ. ಇಂಥ ಸಂದರ್ಭದಲ್ಲಿ ಪರಿಪೂರ್ಣವಾಗಿ ರೈತ ಕಾರ್ಮಿಕ ಸೈನಿಕರ ಒಟ್ಟಾರೆಯಾಗಿ ಬಡವರ ಪರವಾಗಿ ನಿಂತು ಮುನ್ನಡೆಸಿದ ಪಕ್ಷ ಬೊಲ್ಶೆವಿಕ್‌ರದು. ಅದಕ್ಕೆ ಮುಂದಾಳ್ತನವನ್ನು ಒದಗಿಸಿದವರು ಲೆನಿನ್.

ಕ್ರಾಂತಿಯನ್ನು ನಾಮಾವಶೇಷ ಮಾಡಲು ಬೂರ್ಜ್ವಾಗಳು ಮತ್ತಿತರರು ಹೂಡಿದ ಅಂತರ್ಯುದ್ಧ ಭೀಕರವಾದುದು. ಅಲ್ಲಿನ ಬ್ಯಾಂಕ್ ಅಧಿಕಾರಿಗಳು, ಮೇಲು ವರ್ಗದ ನೌಕರರ ವರ್ಗ ಹೂಡಿದ ಅಸಹಕಾರ, ಹೊಂಚು ಇವುಗಳೆಲ್ಲ ಭೀಕರವಾದುದೇ. ಇಂಥ ಸಂದರ್ಭದಲ್ಲಿ ಇವೆಲ್ಲವುಗಳಿಗೆ ಎದೆಯೊಡ್ಡಿ ನಿಂತ ರಾಷ್ಟ್ರದ ತಲ್ಲಣ ವರ್ಣನಾತೀತ. ಇಂಥ ಒಂದು ಚಿತ್ರಣವನ್ನು ಈ ಪುಸ್ತಕ ಕೊಡುತ್ತದೆ.

ಬೊಲ್ಶೆವಿಕ್ ಪಕ್ಷದ ದೃಢತೆ, ಸೈದ್ಧಾಂತಿಕ ಕೆಚ್ಚು, ಹಾಗೂ ಕಾರ್ಮಿಕರು ಹಾಗೇ ರೈತರ ಮತ್ತು ಬಡ ಸೈನಿಕರ ತ್ಯಾಗ ರಷ್ಯನ್ ಕ್ರಾಂತಿಯನ್ನು ಸಂಪೂರ್ಣವಾಗಿ ಜನತಾ ಕ್ರಾಂತಿಯನ್ನಾಗಿ ಯಶಸ್ವಿಪಡಿಸಿತು ಎಂಬುದನ್ನು ಪುಸ್ತಕ ದೃಢಪಡಿಸುತ್ತದೆ. ಕ್ರಾಂತಿಯ ಒತ್ತಡ ಮೇಲಿಂದ ಹೇರಿದ್ದಾಗಿರದೆ, ಅಥವಾ ಆಕಸ್ಮಿಕವಾಗಿರದೆ ಒಂದು ಚಾರಿತ್ರಿಕ ಬೆಳವಣಿಗೆಯಿಂದ ಸಿದ್ಧವಾಗಿದೆಯೆಂಬುದಕ್ಕೆ ಪುಸ್ತಕ ಸಾಕ್ಷಿ ಒದಗಿಸುತ್ತದೆ. ಕಾರ್ಮಿಕರು ಮುಂಚೂಣಿಯಲ್ಲಿದ್ದರೂ ಅವರಿಗೆ ದೊರಕಿದ ರೈತ ಸಹಕಾರ ಕೂಡ ಮಹತ್ವದ ಬೆಳವಣಿಗೆಯಾಗಿದೆ.

ಈ ಸಂದರ್ಭದಲ್ಲಿ ಒಂದರ ಮೇಲೊಂದು ನಡೆಯುವ ಘಟನೆಗಳು ಉಸಿರು ಬಿಗಿ ಹಿಡಿದು ನಡೆಯುವಂತೆ ಅಷ್ಟೇ ತೀವ್ರತೆಯಿಂದ ಲೇಖಕ ಚಿತ್ರಿಸಿದ್ದಾರೆ.

ಸಾಮಾನ್ಯ ಓದುಗರಿಗೂ, ಗಂಭೀರ ಚಿಂತಕರಿಗೂ ಅದರಲ್ಲೂ ಮುಖ್ಯವಾಗಿ ಕಾರ್ಮಿಕರಿಗೆ ರೈತರಿಗೆ, ಒಂದು ಮಾನವೀಯ ಓದನ್ನು ಪುಸ್ತಕ ಒದಗಿಸುತ್ತದೆ. ಇದನ್ನು ಕನ್ನಡಕ್ಕೆ ತಂದು ಕನ್ನಡ ಓದುಗರಿಗೆ ಕೊಟ್ಟ ಎಚ್.ಎನ್. ಹರಿಶಂಕರ ಅಭಿನಂದನಾರ್ಹರು.

○

(ಖ್ಯಾತ ಬಂಡಾಯ ಸಾಹಿತಿ ಆರ್.ವಿ.ಬಂಡಾರಿಯವರ ಅನಾರೋಗ್ಯದ ತೊಂದರೆಯಲ್ಲಿದ್ದು ಇದೀಗ ಚೇತರಿಸಿಕೊಳ್ಳುತ್ತಿದ್ದಾರೆ. ಈ ತೊಂದರೆಯ ನಡುವೆಯೂ 'ಜನಶಕ್ತಿ'ಗಾಗಿ ಅವರು ಶ್ರಮವಹಿಸಿ ಈ ಪುಸ್ತಕ ಪರಿಚಯ ಮಾಡಿಕೊಟ್ಟದ್ದಾರೆ.)



ಹಸಿವು

ಸೂರ್ಯ ಹೇಗಿದ್ದಾನೆ ಗೊತ್ತೇ ನಿನಗೆ
ಉರಿಯ ಬಿಳಿ ರೊಟ್ಟಿಯಂತಿರುವ ನಮಗೆ
ಚಂದ್ರ ಹೇಗಿದ್ದಾನೆ ಗೊತ್ತೇ ನಿನಗೆ?
ಹಾಲಿನ ರೊಟ್ಟಿಯಂತಿರುವ ನಮಗೆ
ಸೂರೆಗೊಂಡಿಹ ತಾರೆಗೊತ್ತೇ ನಿಮಗೆ?
ಕೊಳೆಗೇರಿಗಳ ಕಡಲೆಪುರಿಯು ನಮಗೆ
ಹೌದು ಮಗು, ನೀನು ಹೇಳಿದ್ದು ನಿಜವು
ಮಕ್ಕಳಿಗೆ ಎಂದಿಗೂ ಅಷ್ಟು ಹಸಿವು

- ಸು.ರಂ. ಎಕ್ಕುಂಡಿ

JANASHAKTHI KANNADA VARA PATRIKE : Printed by G.N.NAGARAJ, No 12, 18th Cross, S.R.Nagar, BANGALORE 560027 Published by G.N.NAGARAJ, No 12, 18th Cross, S.R.Nagar, BANGALORE 560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12, 18th Cross, S.R.Nagar, BANGALORE 560027 Editor S.Y.GURURSHANTH, No12, 18th Cross, S.R.Nagar, BANGALORE - 560027 Editor S.Y.GURUSHANTH